ಜನವರಿ
2026

ಸಂಪುಟ 41
ಸಂಚಿಕೆ 1

# ಪ್ರಸಾದ

ಮಾಸಿಕ



ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು




ಜಾತ್ರಾ ಮಹೋತ್ಸವದ ಅಂಗವಾಗಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಕೃಷಿ ವಿಚಾರಸಂಕಿರಣ ಉದ್ಘಾಟನೆಯಲ್ಲಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಮಾತನಾಡುತ್ತಿರುವುದು. ಡಾ. ಯತೀಂದ್ರ ಸಿದ್ದರಾಮಯ್ಯ, ಡಾ. ಮಂಥರ್‌ಗೌಡ, ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್, ಡಾ. ಹೆಚ್.ಸಿ. ಮಹದೇವಪ್ಪ, ವಾಟಾಳು ಮತ್ತು ಕನಕಪುರ ಕಿರಿಯ ಶ್ರೀಗಳು, ಡಾ. ಶರಣ್‌ಪ್ರಕಾಶ್ ಆರ್. ಪಾಟೀಲ್, ಡಾ. ಎಂ.ಸಿ. ಸುಧಾಕರ್, ಶ್ರೀ ಎ.ಆರ್. ಕೃಷ್ಣಮೂರ್ತಿ ಮೊದಲಾದವರಿದ್ದಾರೆ (18 ಜನವರಿ 2026)

# ಪ್ರಸಾದ

**ಸಂಪುಟ 41 : ಸಂಚಿಕೆ 1** **ಜನವರಿ 2026**

**ಡಾ. ಎಂ.ಎನ್. ನಂದೀಶ್ ಹಂಚೆ**
ಸಂಪಾದಕರು

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004
ದೂರವಾಣಿ : 0821–2548212, Extn. 223



**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ

**ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಲಹಾ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು
ಡಾ. ಸಿ.ಜಿ. ಬೆಟಸೂರಮಠ
ಶ್ರೀ ಎಸ್.ಪಿ. ಮಂಜುನಾಥ್
ಡಾ. ಎನ್.ಎಸ್. ತಾರಾನಾಥ
ಡಾ. ಬಿ.ವಿ. ವಸಂತಕುಮಾರ್
ಡಾ. ವೈ.ಸಿ. ಭಾನುಮತಿ
ಪ್ರೊ. ಮೊರಬದ ಮಲ್ಲಿಕಾರ್ಜುನ

**ಸಂಪಾದಕ ಸಮಿತಿ**

ಡಾ. ಎಂ.ಎನ್. ನಂದೀಶ್ ಹಂಚೆ (ಸಂಪಾದಕರು)
ಶ್ರೀ ಆರ್.ಎಸ್. ಪೂರ್ಣಾನಂದ
ಶ್ರೀ ಕುಮಾರಸ್ವಾಮಿ ವಿರಕ್ತಮಠ

---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ ವಿಷಯಗಳ ಬಗ್ಗೆ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ. ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

---

ಮುಖಪುಟ ಚಿತ್ರ

ಸುತ್ತೂರು ಶ್ರೀಕ್ಷೇತ್ರದಲ್ಲಿ ವಿಜೃಂಭಣೆಯಿಂದ ಜರುಗಿದ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ರಥೋತ್ಸವ (17 ಜನವರಿ 2026)

**ದಶವಾರ್ಷಿಕ ಚಂದಾ : 500/- * ಬಿಡಿ ಪ್ರತಿ : 10/-**

# ಪರಿವಿಡಿ


ಗುರುವಾಣಿ 5

ಸಂಪಾದಕೀಯ 7

ಪಕ್ಕವಿಲ್ಲದ ಹಕ್ಕಿ 9
ಶ್ರೀ ಸಿದ್ಧೇಶ್ವರ ಸ್ವಾಮಿಗಳು
(ಪ್ರವಚನಸಾರ)

ಚಿಂತನೆಯ ಕಾಮಧೇನು 14
ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳು
ಶ್ರೀ ದೇಗುಲಮಠ, ಕನಕಪುರ

ಶಬರಶಂಕರ ವಿಲಾಸ ಟೀಕು : ದ್ವಿತೀಯಾಶ್ವಾಸ 17
ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳು
(ವೀರಶೈವ ಟೀಕು ಸಾಹಿತ್ಯ ಸರಣಿ)

ತಿರುವಳ್ಳುವರ್ ಮತ್ತು ಸರ್ವಜ್ಞರ ಅನುಭಾವ 24
ಡಾ. ಪಿ. ಮಣಿ

ಬಸವಣ್ಣ ಮತ್ತು ಕನಕದಾಸ : ಕೆಲವು ಸಾಮ್ಯ ವಿಚಾರಗಳು 35
ಡಾ. ವೈ. ಸುಶ್ಮಿತಾ

ಪ್ರತಿಬಿಂಬ – ಕೃತಿ ಅವಲೋಕನ 43
ಡಾ. ಪ್ರದೀಪಕುಮಾರ ಹೆಬ್ರಿ

ವಾರ್ತಾವಿಹಾರ 47
ಕುಮಾರಸ್ವಾಮಿ ವಿರಕ್ತಮಠ

ಕೃತಿ–ಸ್ವೀಕೃತಿ 63

## ಆತ್ಮಂಗಿಲ್ಲ ಮಲಮಾಯಾ ಕರ್ಮಂಗಳು

ಬೆಳಗ ಕತ್ತಲೆಯೆಂಬ
ಕತ್ತಲೆಯ ಬೆಳಗೆಂಬ
ಪಶುಮತದ ಪಾಷಂಡಿಗಳು ನೀವು ಕೇಳಿರೇ –
ಮಲಮಾಯಾ ಕರ್ಮಂಗಳು
ಆತ್ಮಂಗೆ ಕೇಡಿಲ್ಲದೆ
ಅನಾದಿಯಲ್ಲಿಯೂ ಉಂಟೆಂದು ನುಡಿಯುತ್ತಿಪ್ಪಿರಿ!

ಕಾಮಧೇನುವಿನ ಗರ್ಭದಲ್ಲಿ –
ಕತ್ತೆಯ ಮರಿ ಹುಟ್ಟುವುದೆ?
ಕಲ್ಪವೃಕ್ಷದಲ್ಲಿ – ಕಾಗೆ ಮೋರೆಯ ಹಣ್ಣು ಬೆಳೆವುದೆ?
ಪರುಷದ ಗಿರಿಯಲ್ಲಿ –
ಕಬ್ಬುನ ಮೊಳೆದೋರುವುದೆ?

ಅನಂತಕೋಟಿ ಮಿಂಚುಗಳ ಪ್ರಭೆಯನೊಳಕೊಂಡ
ಪರಶಿವ ತತ್ತ್ವದಲ್ಲಿ ಉದಯವಾದ
ಚಿದಂಶಿಕನಪ್ಪ ಪರಮಾತ್ಮಂಗೆ
ಅನಾದಿಮಲವನುಂಟುಮಾಡುವ ಸಿದ್ಧಾಂತಿಯ
ಅಡ್ಡವಸ್ತ್ರದಲ್ಲಿಪ್ಪುದು
ವಡ್ಡಗಲ್ಲ ಮುರುಕಲ್ಲದೆ – ಲಿಂಗವಲ್ಲ!

ಅದೇನು ಕಾರಣವೆಂದರೆ –
ಇಕ್ಕುವಾಕೆ ಮೂಗುಮುಚ್ಚಿಕೊಂಡು ಇಕ್ಕಿದ ಬಳಿಕ
ಉಂಬಾತ ಹೇಗುಂಬನಯ್ಯ?
ಆತ್ಮನು ಅನಾದಿಮಲಾವರಣನೆಂದು
ನೀನೇ ಉಸಿರುತ್ತಿರ್ದ ಬಳಿಕ –
ನಿನ್ನಂಗದ ಮೇಲಕ್ಕೆ ಬರುವ ಲಿಂಗಕ್ಕೆ ಮೂಗಿಲ್ಲವೇ?
ಪುಣ್ಯಕ್ಷೇತ್ರದಲ್ಲಿ ಲಿಂಗವಿಪ್ಪುದಲ್ಲದೆ
ಹಾಳುಕೇರಿಯಲ್ಲಿ ಲಿಂಗವುಂಟೇ?
ಇಲ್ಲ ಎಂಬುದ ನಿನ್ನ ನೀನೇ ತಿಳಿದುನೋಡು.

ಇದು ಕಾರಣ –
ದ್ವೈತಮಾರ್ಗಕ್ಕೆ ಮುಕ್ತಿ ಎಂಬುದು
ಎಂದೆಂದಿಗೂ ಸಟೆ, ಹೊರಗೆಂದೆನಯ್ಯ –
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನ!

– ಘನಲಿಂಗಿದೇವರು

# ಗುರುವಾಣಿ

ಓಂ ಸಂಗಚ್ಛಧ್ವಂ ಸಂವದಧ್ವಂ ಸಂ ವೋ ಮನಾಂಸಿ ಜಾನತಾಂ ।
ದೇವಾ ಭಾಗಂ ಯಥಾ ಪೂರ್ವೇ ಸಂಜಾನಾನಾ ಉಪಾಸತೇ ॥

ಸಮಾನೋ ಮಂತ್ರಃ ಸಮಿತಿಃ ಸಮಾನೀ ಸಮಾನಂ ಮನಃ ಸಹಚಿತ್ತಮೇಷಾಮ ।
ಸಮಾನಂ ಮಂತ್ರಮಭಿಮಂತ್ರ ಏವ ಸಮಾನೇನ ವೋ ಹವಿಷಾ ಜುಹೋಮಿ ॥

ಸಮಾನೀವ ಆಕೂತಿಃ ಸಮಾನಹೃದಯಾನಿ ವಃ ।
ಸಮಾನಮಸ್ತು ವೋ ಮನೋ ಯಥಾ ವಃ ಸುಸಹಾ ಸತಿ ॥

ಋಗ್ವೇದದ ಈ ಮೂರು ಮಂತ್ರಗಳು 10ನೇ ಮಂಡಲದ 191ನೆಯ ಸೂಕ್ತಗಳು. ಈ ಮಂತ್ರಗಳೊಂದಿಗೆ ಋಗ್ವೇದವು ಮುಕ್ತಾಯಗೊಳ್ಳುತ್ತದೆ. ಇದರ ಸ್ಥೂಲವಾದ ಸಾರವೆಂದರೆ "ಒಂದೇ ಆದ ನಮ್ಮ ಗುರಿಯ ಕೊನೆಯಲ್ಲಿ ಶಾಂತಿಮಂತ್ರವಿದೆ. ಜೊತೆಯಾಗಿ ಮುಂದೆ ಸಾಗೋಣ, ಬಂಧನಗಳಿಲ್ಲದ ಮನಸ್ಸುಗಳೊಡನೆ ನಮ್ಮೆಲ್ಲರ ಯೋಚನೆಗಳನ್ನು ಮಿಳಿತಗೊಳಿಸಿಕೊಂಡು ಸಮಷ್ಟಿಯ ಶ್ರೇಯಸ್ಸಿಗಾಗಿ ಸಾಮರಸ್ಯದಿಂದ, ಹಿರಿಯ ಆದರ್ಶಗಳ ಸ್ಫೂರ್ತಿಯಿಂದ ಒಟ್ಟಾಗಿ ಕಾರ್ಯ ನಿರ್ವಹಿಸೋಣ. ನಮ್ಮೆಲ್ಲರ ಪ್ರಾರ್ಥನೆ ಒಂದೇ ಆಗಿರಲಿ. ನಮ್ಮದು ಒಂದೇ ಕುಟುಂಬವೆಂಬ ಭಾವನೆಯನ್ನು ಬೆಳೆಸಿಕೊಳ್ಳೋಣ. ನಮ್ಮ ಆಸೆಗಳು, ಆಶಯಗಳ ಮಧ್ಯೆ ವೈರುಧ್ಯ ತಲೆ ಎತ್ತದಿರಲಿ. ನಮಗಿರುವ ಸಂಪತ್ತನ್ನು ಸಮನಾಗಿ ಅನುಭವಿಸೋಣ.

ಮೇಲಿನ ವಿವರಗಳು ಆಯಾ ಮಂತ್ರಗಳ ಪದಶಃ ಅರ್ಥವಲ್ಲ, ಸ್ಥೂಲವಾದ ಅರ್ಥ ಮಾತ್ರ. ಈ ಸ್ಥೂಲ ಆಶಯ ಎಷ್ಟು ವಿಶಾಲವಾದುದು ಎಂಬುದರ ಕಡೆಗೆ ಗಮನ ಹರಿಸುವುದು ಅಗತ್ಯ. "ವಸುಧೈವ ಕುಟುಂಬಕಂ" ಎಂಬ ಮಾತನ್ನು ಅಕ್ಷರಶಃ ವ್ಯಾಖ್ಯಾನಿಸುವ ಉನ್ನತ ಆಶಯವನ್ನು ಈ ಮಂತ್ರಗಳು ಪ್ರಕಟಿಸುತ್ತವೆ. ಆದರೆ "ಲೋಕೋ ಭಿನ್ನ ರುಚಿಃ" ಎಂಬಂತೆ ಈ ಜಗದಲ್ಲಿ ಇರುವ ಎಲ್ಲ ಜನರ ಮನಸ್ಸೂ ಒಂದೇ ಬಗೆಯಲ್ಲಿ ಇರುವುದಿಲ್ಲ. ಲೋಕದಲ್ಲಿರಲಿ, ಸ್ವತಃ ಸಹೋದರರ ಮನಸ್ಸು ಕೂಡ ಒಂದೇ ರೀತಿ ಇರುವುದಿಲ್ಲ. ಅಷ್ಟೇ ಏಕೆ, ವ್ಯಕ್ತಿಯೊಬ್ಬನ ಮನಸ್ಸು ಕೂಡ ಎಲ್ಲ ಕಾಲದಲ್ಲೂ ಒಂದೇ ಆಗಿರುವುದಿಲ್ಲ. ಇಂಥ ಮನಸ್ಸನ್ನು ಆಧರಿಸಿ, ಆಶ್ರಯಿಸಿ ಎಲ್ಲ ಕ್ರಿಯೆಗಳು ಕಾರ್ಯಗತವಾಗುತ್ತವೆ. ಈ ಕೆಲಸಗಳು ಲೋಕದ ಆಗುಹೋಗುಗಳಿಗೆ ಮೂಲ ಕಾರಣ. ಇವುಗಳು ದೃಗ್ಗೋಚರವಾದವು. ಆದರೆ ಕಾರ್ಯದ ಹಿಂದಿನ

ಮನಸ್ಸು ಮಾತ್ರ ಅಗೋಚರವಾದದ್ದು. ಈ ಅಗೋಚರ ಮನಸ್ಸಿನ ಆಲೋಚನೆಯನ್ನು ಅರಿಯುವುದು ಹೇಗೆ? ಅದರ ಆಲೋಚನೆ ಹೇಗಿರಬೇಕು? ಹೇಗಿದ್ದರೆ ಲೋಕಕಲ್ಯಾಣ ಸಾಧ್ಯವಾಗುತ್ತದೆ? ಎಂಬುದೇ ಇಲ್ಲಿನ ಮುಖ್ಯ ತತ್ವವಾಗಿದೆ.

ಎಲ್ಲ ಜನರ ಆತ್ಯಂತಿಕ ಗುರಿ ಅಥವಾ ನಡೆ ಮುಕ್ತಿಯನ್ನು ಹೊಂದುವುದಾಗಿದೆ. ಮುಕ್ತಿಯ ಕಲ್ಪನೆಯ ದಾರಿ ಏನೇ ಇರಲಿ, ಸರ್ವರೂ ಮೋಕ್ಷಾಪೇಕ್ಷಿಗಳೇ. ಆದರೆ ಅದರ ಕಡೆಗೆ ಜೊತೆಯಲ್ಲಿ ಸಾಗದೆ, ಬೇರೆಬೇರೆ ದಾರಿಗಳಲ್ಲಿ ಹೋಗಲಾಗುತ್ತದೆ. ಅದಕ್ಕಿರುವ ಬಂಧನಗಳು ಹಲವಾರು. ಈ ಬಂಧನಗಳು ಧಾರ್ಮಿಕವಾಗಿರಬಹುದು, ಸಾಮಾಜಿಕವಾಗಿರಬಹುದು, ಆಧ್ಯಾತ್ಮಿಕವಾಗಿರಬಹುದು. ಈ ಬಂಧನಗಳಿಂದ ಮುಕ್ತವಾದ ಮನಸ್ಸುಗಳು ಮಾತ್ರ ಒಂದೇ ಬಗೆಯ ಯೋಚನೆಗಳನ್ನು ಹೊಂದಿರುತ್ತವೆ. ಅಲ್ಲಿ ಯಾವಾಗಲೂ ಸಮಷ್ಟಿಯ ಚಿಂತನೆ ಇರುತ್ತದೆ. ಅದರಲ್ಲಿ ಸಾಮರಸ್ಯವಿದೆ. ಆದರೆ ಅಗೋಚರವಾದ ಮನಸ್ಸು ಗೋಚರವಾಗುವ ಈ ದೇಹದ ಬಂಧನದಲ್ಲಿ ಸಿಕ್ಕು ಅನಂತವನ್ನು ಮರೆತುಬಿಟ್ಟಿದೆ. ಈ ಬಂಧನ ಒಂದು ಸಣ್ಣ ಉದಾಹರಣೆ. ವೇದ ಸಾಹಿತ್ಯವು ಏನನ್ನೇ ಹೇಳಿದರೂ, ಅನಂತರ ಬಂದ ಆಚರಣೆಗಳಲ್ಲಿ ವಿವಿಧ ತಲೆಮಾರಿನ ತತ್ವಜ್ಞಾನಿಗಳು, ಆಚಾರ್ಯರು ಅವರದೇ ಆದ ರೀತಿಯಲ್ಲಿ ಅನಂತವನ್ನು ವ್ಯಾಖ್ಯಾನಿಸಿದರು. ಅವರ ಇಷ್ಟಾರ್ಥಗಳನ್ನು ಸಾಧಿಸಲು ಸುಲಭ ದಾರಿಗಳನ್ನು ಹುಡುಕಿಕೊಂಡುದಲ್ಲದೆ ಅವರಿಗೆ ತೋಚಿದ ಹಾದಿಗಳನ್ನು ಇತರರಿಗೂ ತೋರಿಸಿದರು. ಭಿನ್ನ ಭಿನ್ನ ವ್ಯಾಖ್ಯಾನಗಳನ್ನು, ಭಾಷ್ಯಗಳನ್ನು ರಚಿಸಿ, ವರ್ಣವ್ಯವಸ್ಥೆಯ ಜೊತೆಗೆ ವರ್ಗ ವ್ಯವಸ್ಥೆಗೂ ಕಾರಣರಾದರು. ಕ್ರಮೇಣ ಜೈನ, ವೈಷ್ಣವ, ಶಾಕ್ತ, ಗಾಣಾಪತ್ಯ, ಸೌರ ಎಂದು; ಅದರ ಮುಂದುವರಿಕೆಯಾಗಿ ಮುಂದೆ ಶೈವರಲ್ಲಿ ಕಾಪಾಲಿಕ, ಕಾಳಾಮುಖ, ಲಕುಲೀಶ, ನಾಥ, ಸಿದ್ಧ – ಹೀಗೆ ಶಾಖೋಪಶಾಖೆಗಳಾಗಿ ವಿಭಜನೆಗೊಂಡವು.

ಇಂಥ ವರ್ಗೀಕರಣಗಳು ವೇದಾಧಾರಿತ ಧರ್ಮದಲ್ಲಿ ಮಾತ್ರವಲ್ಲ, ವಿಶ್ವದ ಎಲ್ಲ ಮತಪಂಥಗಳಲ್ಲೂ ನಡೆದಿವೆ; ನಡೆಯುತ್ತಿವೆ. ಈ ವರ್ಗೀಕರಣಕ್ಕೆ ಕಾರಣ ಹಲವಾರು. ತತ್ತ್ವವನ್ನು, ಭಗವಂತನನ್ನು ಬಂಧನದಲ್ಲಿರುವ ಇಂದ್ರಿಯಗಳ ಮೂಲಕ ಕಂಡಷ್ಟೇ ಕಾಣ್ಕೆಯಾಗುತ್ತದೆ. ಅನಂತನಾದ ಭಗವಂತನಲ್ಲಿ ಇಂಥ ವರ್ಗೀಕರಣವಿತ್ತು ಎಂಬ ಮಾತನ್ನು ಒಪ್ಪಲಾಗುವುದಿಲ್ಲ. ಆದುದರಿಂದ ಎಲ್ಲ ಬಗೆಯ ಉಪಾಧಿಗಳಿಂದ ಮುಕ್ತವಾದ ಅನಂತನಾದ ಭಗವಂತನನ್ನು ಕಾಣುವ ದೃಷ್ಟಿ ಎಲ್ಲರದಾಗಬೇಕು. ಆಗ ಮಾತ್ರ “ಲೋಕಾಃ ಸಮಸ್ತಾ ಸುಖಿನೋ ಭವಂತು” ಎಂಬ ಮಾತಿಗೆ ಅರ್ಥ ಲಭಿಸುತ್ತದೆ.

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಸಂಪಾದಕೀಯ

ಇದಂ ತು ತೇ ಗುಹ್ಯತಮಂ ಪ್ರವಕ್ಷ್ಯಾಮ್ಯನಸೂಯವೇ ।
ಜ್ಞಾನಂ ವಿಜ್ಞಾನ ಸಹಿತಂ ಯಜ್ಞಾತ್ವಾ ಮೋಕ್ಷ್ಯಸೇಶುಭಾತ್ ॥

ಭಗವದ್ಗೀತೆಯ 9ನೇ ಅಧ್ಯಾಯದ ಮೇಲಿನ ಶ್ಲೋಕದಲ್ಲಿ ಶ್ರೀಕೃಷ್ಣನು ಅರ್ಜುನನನ್ನು ಕುರಿತು "ಅತ್ಯಂತ ರಹಸ್ಯವಾದ ಜ್ಞಾನವನ್ನು ನಿನಗೆ ಬೋಧಿಸುತ್ತೇನೆ" ಎಂದು ಹೇಳುತ್ತಾನೆ. "ಅಸೂಯಾರಹಿತನಾದ ನಿನಗೆ ಈ ಅತ್ಯಂತ ಗುಹ್ಯವಾದ (ಗೌಪ್ಯವಾದ) ಜ್ಞಾನವನ್ನು ಹೇಳುತ್ತೇನೆ. ಜ್ಞಾನ ಮತ್ತು ವಿಜ್ಞಾನಸಹಿತವಾದ ಈ ತಿಳಿವಳಿಕೆಯನ್ನು ಪಡೆದು ನೀನು ಅಶುಭವಾದ ಈ ಸಂಸಾರದಿಂದ ಮುಕ್ತನಾಗುವೆ".

ಇಲ್ಲಿ ಭಗವದ್ಗೀತೆಯ ಜ್ಞಾನ ಮತ್ತು ವಿಜ್ಞಾನವೆಂದು ಕರೆದಿರುವುದು ಕ್ರಮವಾಗಿ 'ಶಾಸ್ತ್ರಜ್ಞಾನ' ಮತ್ತು 'ಅನುಭವಜನ್ಯ ಜ್ಞಾನ'ವನ್ನು. ಇದನ್ನು ಆಧುನಿಕ ಪರಿಭಾಷೆಯಲ್ಲಿ 'ಥಿಯರಿ' ಮತ್ತು 'ಪ್ರ್ಯಾಕ್ಟಿಕಲ್' ಎಂಬುದಕ್ಕೆ ಸಂವಾದಿಯಾಗಿ ಪರಿಗಣಿಸಬಹುದು. ಜ್ಞಾನವು ವಿಜ್ಞಾನಸಹಿತವಾಗಿ, ವಿಜ್ಞಾನವು ಜ್ಞಾನಪೂರ್ವಕವಾಗಿ ಎರಡೂ ಪರಸ್ಪರ ಸಮ್ಮಿಲನಗೊಂಡಾಗ ಅವುಗಳ ನಡುವೆ ಸಾಮರಸ್ಯ ಉಂಟಾಗುತ್ತದೆ. ಸತ್ಯಶೋಧಕವಾದ ಚಿಂತನೆಯನ್ನು ಮಾಡಬೇಕಾದುದು ತಿಳಿವಳಿಕೆಯುಳ್ಳ ಎಲ್ಲ ಮಾನವರ ಆದ್ಯತೆ ಕರ್ತವ್ಯವಾಗಬೇಕು. ಗೀತೆಯು ಅರಿವಿನ ಈ ಮಾರ್ಗವನ್ನು ಶಮ, ದಮ, ತಪಸ್ಸು, ಶೌಚ, ಕಾಂತಿ, ಆರ್ಜವ, ಜ್ಞಾನ, ವಿಜ್ಞಾನ ಮತ್ತು ಅಸ್ತಿತ್ವವೆಂದು ವಿಭಜಿಸುತ್ತದೆ. ಈ ಬಗೆಯ ಪರಿಶುದ್ಧ ಮನೋಭೂಮಿಕೆಯನ್ನು ಹೊಂದಿರುವವರಿಗೆ ಮಾತ್ರ ಲೋಕವು ಸ್ಫಟಿಕದ ಶಲಾಕೆಯಂತೆ ಗೋಚರವಾಗುತ್ತದೆ. ಇಂಥ ದೃಷ್ಟಿಯನ್ನು ಹೊಂದಿದ್ದ ಪ್ರಾಚೀನ ಋಷಿಗಳು ಇಂದ್ರಿಯಾತೀತವಾದ ಪರಮ ಸತ್ಯಗಳನ್ನು ತಾವೂ ಕಂಡರು, ಅನುಸರಿಸಿದರು; ಲೋಕಕ್ಕೂ ಉಣಬಡಿಸಿದರು.

ಇಂತಹ ಪರಮಸತ್ಯವನ್ನು ಕಂಡುಹಿಡಿದ ಒಬ್ಬ ಮಹಾನ್ ಋಷಿ "ಕಣಾದ". ಕ್ರಿಸ್ತಪೂರ್ವ ಆರನೇ ಶತಮಾನದಲ್ಲಿದ್ದ ಈ ದಾರ್ಶನಿಕ ವೈಶೇಷಿಕ ದರ್ಶನದ ಸ್ಥಾಪಕ. ಈತ ಕಂಡುಹಿಡಿದ ಪರಮ ಸತ್ಯವೇ 'ಪರಮಾಣು ಸಿದ್ಧಾಂತ'. ವಿಶ್ವದ ಎಲ್ಲ ವಸ್ತುಗಳೂ ನಾಶರಹಿತವಾದ ಪರಮಾಣುಗಳಿಂದ ಮಾಡಲ್ಪಟ್ಟಿದೆ ಎಂದು ಆತ ಮೊದಲ ಬಾರಿಗೆ ಹೇಳಿದನು. ಈ ಸಿದ್ಧಾಂತವೇ ಇಂದು ಆಧುನಿಕ ಜಗತ್ತಿನಲ್ಲಿ ಒಂದು ಜ್ಞಾನಶಿಸ್ತಾಗಿ,

ವ್ಯವಸ್ಥಿತವಾಗಿ ಬೆಳೆದು 'ಅಣುವಿಜ್ಞಾನ'ವೆಂಬ ಹೆಸರಿನಿಂದ ಪರಿಚಿತವಾಗಿದೆ. ಜಗತ್ತಿನ ಶುಭಾಶುಭಗಳ ಹಿನ್ನೆಲೆಯಲ್ಲಿ ಅಣುಶಕ್ತಿಯ ಅಪಾರ ಸಾಧ್ಯತೆಗಳು ಗೋಚರವಾಗುತ್ತವೆ. ಜಗತ್ತಿನ ಪ್ರತಿಯೊಂದು ಶಕ್ತಿಗೂ ಎರಡು ಮುಖಗಳಿರುವಂತೆ, ಅಣುಶಕ್ತಿಗೂ ಸಹ ಎರಡು ಮುಖಗಳಿವೆ. ಅದು ದೈವಸ್ವರೂಪದ್ದೂ ಆಗಿರಬಹುದು, ಆಸುರೀ ರೂಪದ್ದೂ ಆಗಬಹುದು. ಮನುಷ್ಯನ ಮನಸ್ಸು ಸದಾ ಒಳಿತಿಗಿಂತಲೂ ಕೆಡುಕಿನತ್ತಲೇ ಆಕರ್ಷಣೆ ಹೊಂದಿರುತ್ತದೆ. ಮನುಕುಲದ ಉದ್ಧಾರಕ್ಕಾಗಿಯೂ ಅಣುಶಕ್ತಿ ಬಳಕೆಯಾಗಿದೆ, ರೋಗವನ್ನು ಗುರುತಿಸುವ ಸಾಧನವಾಗಿ, ವಿದ್ಯುಚ್ಛಕ್ತಿಯ ಉತ್ಪಾದನೆಗಾಗಿ, ಹೀಗೆ ಹಲವಾರು ಮಹತ್ತರ ಉದ್ದೇಶಗಳಿಗೆ ಒದಗಿಬಂದಿದೆ. ಆದರೆ ಅದೇ ಸಮಯಕ್ಕೆ ಆಟಂ ಬಾಂಬ್, ಕ್ಷಿಪಣಿ, ನ್ಯೂಕ್ಲಿಯರ್ ಬಾಂಬ್ ಮುಂತಾದ, ಮನುಷ್ಯರನ್ನು ಮಾತ್ರವಲ್ಲದೆ ಪ್ರಕೃತಿಯನ್ನೂ, ನಾಶ ಮಾಡುವ ಸಾಧನ ವಾಗಿಯೂ ಬಳಕೆಗೊಳ್ಳುತ್ತಿರುವುದೊಂದು ವಿಪರ್ಯಾಸ. ಲೋಕದಲ್ಲಿ ಈಗ ಹೆಚ್ಚು ಪ್ರಾಶಸ್ತ್ಯ ದೊರೆಯುತ್ತಿರುವುದು ಈ ಆಸುರೀ ಶಕ್ತಿಗೇ. ಜಗತ್ತಿನಾದ್ಯಂತ ತಮ್ಮ ಶಕ್ತಿಪ್ರದರ್ಶನ ಮಾಡಲು ಅನೇಕ ದೇಶಗಳು ಈ ಆಸುರೀ ಶಕ್ತಿಯ ಮೊರೆಹೋಗಿವೆ. ತನ್ಮೂಲಕ ಜಗತ್ತನ್ನು ತಮ್ಮ ನಿಯಂತ್ರಣದಲ್ಲಿಡಲು ಪ್ರಯತ್ನಿಸುತ್ತಿವೆ. ಇದು ಲೋಕಾನುಕಂಪಕ್ಕೆ ಹಾಗೂ ವಿವೇಕಕ್ಕೆ ವಿಮುಖವಾದ ಆಲೋಚನೆ. ಅಮೆರಿಕಾ, ರಷ್ಯಾ, ಕೊರಿಯ ಮುಂತಾದ ದೇಶಗಳ ನೀತಿ ಈ ಆಸುರೀ ಶಕ್ತಿಯ ಕರಾಳ ಪ್ರದರ್ಶನವೇ ಆಗಿದೆ. ಅಮೆರಿಕೆಗಂತೂ ಗೀತೆಯಲ್ಲಿ ಪ್ರಸ್ತಾಪಿತ ವಾದ ಜ್ಞಾನ–ವಿಜ್ಞಾನದ ಪ್ರಾಥಮಿಕ ತಿಳಿವಳಿಕೆಯೂ ಇರಲು ಸಾಧ್ಯವಿಲ್ಲ. ಅದರ ಉದ್ದೇಶ ಸದಾ ಲಾಭಕೋರತನವೇ ಆಗಿದ್ದು ಆಕ್ರಮಣಕಾರಿ ಆಸುರೀ ಶಕ್ತಿಯ ರುದ್ರನರ್ತನವಾಗಿ ರೂಪ ತಳೆದಿದೆ. ಆಸುರೀ ಶಕ್ತಿಯು ಭಸ್ಮಾಸುರನಂತೆ, ಮುಂದೊಂದು ದಿನ ಅದು ಅಮೆರಿಕವನ್ನೇ ಕಾಡಿದರೂ ಅಚ್ಚರಿ ಪಡಬೇಕಾಗಿಲ್ಲ. ವಾಸ್ತವವಾಗಿ ಜಗತ್ತಿಗೆ ಇಂದು ಬೇಕಾಗಿರುವುದು ಸಾಮರಸ್ಯದ, ಸಹಬಾಳ್ವೆಯ ನೆಮ್ಮದಿ. ಅದನ್ನು ವಿಶ್ವಕ್ಕೆ ನೀಡಬಹುದಾದ ಶಕ್ತಿ ಮತ್ತು ಚೈತನ್ಯವಿರುವುದು ಭರತಖಂಡಕ್ಕೆ ಮಾತ್ರ. ಜನರು ಸತ್ಯದ ಮಾರ್ಗದಲ್ಲಿ ಶಾಂತಿಯಿಂದ ಬಾಳಲು, ಪರಿಪೂರ್ಣ ಜೀವನ ಸಾಗಿಸಲು, ತನ್ನ ಸುತ್ತಲಿನ ನೈಸರ್ಗಿಕ ಸಂಪತ್ತನ್ನು ಸರಿಯಾಗಿ ಬಳಸಬೇಕಾದುದು ಅಗತ್ಯ, ಅದು ಧರ್ಮ ಕೂಡ. ಗಾಂಧೀಜಿಯವರು ಈ ಧರ್ಮವನ್ನು, ಅದರ ಮಹತ್ವವನ್ನು ತಮ್ಮ ಜೀವನದುದ್ದಕ್ಕೂ ಜಗತ್ತಿಗೆ ಸಾರಿದರು ಮತ್ತು ತಾವೂ ಹಾಗೆಯೇ ಬದುಕಿದರು. ವಾಸ್ತವವಾಗಿ ಆಕ್ರಮಣಕಾರಿ ನೀತಿ ಭಾರತಕ್ಕೆ ಪರಿಚಯವಾದದ್ದೇ ವಿದೇಶೀಯರಿಂದ. ಭಾರತದ ಮೂಲತತ್ವ ಸದಾ ತಾಯ್ತನದಿಂದ ಕೂಡಿದ್ದು, ಅದನ್ನು ನಮ್ಮ ಉಪನಿಷತ್ತುಗಳು ಸಾರಿ ಸಾರಿ ಹೇಳಿವೆ. ಈ ಹಿನ್ನೆಲೆಯಲ್ಲಿ ಜಗತ್ತಿನ ವಿನಾಶಕ್ಕೆ ದಾರಿ ಮಾಡಿಕೊಡುವಂಥ ಆಕ್ರಮಣಕಾರಿ ಅಣು ಹೋರಾಟದ ಪೈಪೋಟಿ ನಿಲ್ಲಲೇಬೇಕಾಗಿದೆ, ಶಾಂತಿಯಲ್ಲಿಯೇ ಸಮೃದ್ಧಿಯನ್ನು ಕಾಣಬೇಕಾಗಿದೆ.

**ಡಾ. ಎಂ.ಎನ್. ನಂದೀಶ್ ಹಂಚೆ**

ಪ್ರವಚನಸಾರ

# ಪಕ್ಕವಿಲ್ಲದ ಹಕ್ಕಿ

ಶ್ರೀ ಸಿದ್ಧೇಶ್ವರ ಸ್ವಾಮಿಗಳು

ನಮಗೆ ಕಾಣುವ ಜಗತ್ತು ದರ್ಶನಕ್ಕೆ ವಿಷಯ. ಆದ್ದರಿಂದ ಇದು ದೃಶ್ಯ. ಪ್ರಕೃತಿಯ ಅನಂತವಾದ ವಿಸ್ತಾರ ಇದು. ಇದರಲ್ಲಿ ಸ್ಥೂಲ ವಸ್ತುಗಳು ಇವೆ. ಅತ್ಯಂತ ಸೂಕ್ಷ್ಮ ವಸ್ತುಗಳು ಇವೆ. ಮನುಷ್ಯನ ಮತಿ ಸ್ಥೂಲ ವಸ್ತುವನ್ನು ಗ್ರಹಿಸುವ ಹಾಗೆ ಅತಿ ಸೂಕ್ಷ್ಮ ವಸ್ತುವನ್ನೂ ಗ್ರಹಿಸುತ್ತದೆ. ಪ್ರಕೃತಿಯ ಸಮಸ್ತ ಹರವನ್ನು ಮಾನವೀಯ ಮತಿ ಅಳೆಯಬಲ್ಲದು. ಆದ್ದರಿಂದ ಈ ಜಗತ್ತಿಗೆಲ್ಲ ದೃಶ್ಯ ಎನ್ನಬೇಕು. ಮತಿಗೆ ಇದು ದೃಶ್ಯ. ಈ ದೃಶ್ಯವಸ್ತುವನ್ನು ಯಥಾವತ್ತಾಗಿ ಕಂಡರೆ ನಮಗೆ ಸತ್ಯದರ್ಶನ ಆಯಿತು ಎಂದರ್ಥ. ಹೇಗಿದೆ ಹಾಗೆ ಕಂಡರೆ ಸತ್ಯದರ್ಶನ ! ಕಣ್ಣಿನಿಂದ ಹಾಗೂ ಬುದ್ಧಿಯಿಂದ ಎಷ್ಟು ನೋಡಲು ಸಾಧ್ಯವೋ ಅದು ಎಲ್ಲವೂ ದೃಶ್ಯ! ಅಧಿಗಮ್ಯ! ಇಂತಹ ಗಮ್ಯ ವಸ್ತುವಿನ ಜ್ಞಾನ ಗಮ್ಯಜ್ಞಾನ. ಈ ಜ್ಞಾನವೇ ಪ್ರೇಮಾ ಯಥಾರ್ಥ, ಸತ್ಯಜ್ಞಾನ.

ಈ ಪ್ರಕೃತಿಯನ್ನು ಮೀರಿದ ಅಂದರೆ ಎಲ್ಲಿ ಪ್ರಾಕೃತಿಕ ವಿಕಾರಗಳಿಲ್ಲವೋ, ವಿಕಾಸಗಳಿಲ್ಲವೋ, ಗುಣಗಳ ವ್ಯಾಪ್ತಿ ಇಲ್ಲವೋ ಇಂಥ ಕ್ಷೇತ್ರ ಅಗಮ್ಯಕ್ಷೇತ್ರ. ಅದು ಅದೃಶ್ಯ. ಅಲ್ಲಿ ಕಣ್ಣಿಗೆ ಪ್ರವೇಶ ಇಲ್ಲ; ಸಾಮಾನ್ಯ ಮತಿಗೆ ಪ್ರವೇಶವಿಲ್ಲ. ಅದು ಋತ. ಎಲ್ಲಿ ಮತಿ ಪ್ರವೇಶಿಸುತ್ತದೆ, ಆ ಸತ್ಯವಸ್ತುವಿಗೆ 'ಸತ್ಯ' ಎನ್ನಬೇಕು. ಇದೂ ಸತ್ಯವೇ, ಅದೂ ಸತ್ಯವೇ, ಆದರೆ ಇದು ಗಮ್ಯಸತ್ಯ; ಅದು ಅಗಮ್ಯಸತ್ಯ. ಕಣ್ಣು ಸ್ಪರ್ಶಮಾಡಿ ಅದನ್ನು ದೃಶ್ಯಗೊಳಿಸಿಲ್ಲ. ಮತಿ ಸ್ಪರ್ಶ ಮಾಡಿ ಅದನ್ನು ಗಮ್ಯಗೊಳಿಸಿಲ್ಲ. ಅಷ್ಟು ಶುದ್ಧವಾಗಿರುವ ಸತ್ಯ ಋತ. ಅದರ ಜ್ಞಾನ ಋತಜ್ಞಾನ.

ಜಗತ್ತಿನ ಜ್ಞಾನ ಸತ್ಯಜ್ಞಾನ. ಇದನ್ನು ಪರಿಶೀಲಿಸಲು ಶಕ್ಯ. ಅಳೆಯಲು ಶಕ್ಯ. ಆದರೆ ಋತಜ್ಞಾನವನ್ನು ಪರಿಶೀಲಿಸಲಿಕ್ಕೆ ಆಗದು. ಯಾಕೆ ಎಂದರೆ ಅಳತೆ ಮಾಡುವ ಸಾಧನ ಅಲ್ಲಿ ಇಲ್ಲ. ನಮ್ಮ ದೇಹವನ್ನು ತೂಗಬಹುದು, ಭಾವನೆಗಳನ್ನು ವಿವೇಚಿಸಬಹುದು, ಆಲೋಚನೆಗಳನ್ನು ವಿಮರ್ಶಿಸ ಬಹುದು, ಆದರೆ ನನ್ನನ್ನು, ನನ್ನ ಆತ್ಮವನ್ನು ತೂಗಲಿಕ್ಕೆ ಆಗುವುದಿಲ್ಲ. ಬೀಜ ತೂಗಬಹುದು. ಬೀಜದೊಳಗಿರುವ ಆ ಹಿಟ್ಟನ್ನು ತೂಗಬಹುದು. ಆದರೆ ಆ ಬೀಜದೊಳಗಿರುವ ಪ್ರಾಣಶಕ್ತಿಯನ್ನು ತೂಗಲು ಬರದು. ಅದು ತೂಕಕ್ಕೆ ನಿಲುಕುವುದೂ ಇಲ್ಲ. ಆದರೆ ಅದು ಇರದಿದ್ದರೆ ಬೀಜ ಮೊಳೆಯುವುದಿಲ್ಲ. ಬೀಜ ಮೊಳೆತು ವೃಕ್ಷ ಆಗಬೇಕಾದರೆ ಒಳಗೆ ಆ ಪ್ರಾಣಶಕ್ತಿ ಇರಬೇಕು. ಅದನ್ನು ಅಳೆಯಲಾಗದು.

ಹಾಗೆ, ಜಗತ್ತಿನಲ್ಲಿರುವ ಎಲ್ಲವನ್ನೂ ತೂಗಬಹುದು; ಅಳೆಯ ಬಹುದು; ನೋಡಬಹುದು; ತಿಳಿಯಬಹುದು. ಆದರೆ, ಜಗದ ಒಳಗೂ, ಅದರಾಚೆಯೂ ಇರುವ 'ಋತ'(ಮಹಾಸತ್ಯ)ವನ್ನು ನೋಟ ಹಾಗೂ ಮತಿಗಳು ಗ್ರಹಿಸವು. ನೋಟ, ಮತಿ, ಮನ ಮೌನವಾದ ಬಳಿಕ ಅನುಭಾವ ದೃಷ್ಟಿ ಉದ್ಘಾಟನೆ. ಆ ದೃಷ್ಟಿಗೆ ಋತದರ್ಶನ! ಆ ದರ್ಶನ ಪಡೆದವ ಋಷಿ!

ಲೋಕಸತ್ಯ ಕಂಡವರೂ ಋಷಿಗಳೇ. ಆದರೆ ಅಲೌಕಿಕ ಋತ ಅನುಭವಿಸಿದವರು ಪರಮ ಋಷಿಗಳು. ಅವರು ನೇತ್ರ ಹಾಗೂ ಮತಿಗಳನ್ನು ಬಳಸದೆ ಪರಮ ಸತ್ಯ (ಋತ) ಕಂಡವರು. ನಾವು ಭೌತ ಋಷಿಗಳು. ಅವರು ಅಭೌತ ಋಷಿಗಳು! ನಮಗೆ ಅವರಿಗೆ ಒಂದು ಭೇದ. ಆ ಋತವನ್ನು ದರ್ಶನ ಮಾಡಿಕೊಂಡ ಋಷಿಯ ಬಾಳಿನೊಳಗೆ ಋತ ವ್ಯಾಪಿಸುತ್ತದೆ, ಅಭಿವ್ಯಕ್ತವಾಗುತ್ತದೆ. ಋಷಿಯ ಮಾತಿನಲ್ಲಿ ಋತ ಅಭಿವ್ಯಕ್ತವಾಗುತ್ತದೆ. ಋಷಿಯ ಕಣ್ಣಿನೊಳಗೆ ಋತ ಅಭಿವ್ಯಕ್ತವಾಗುತ್ತದೆ. ಋಷಿಯ ಕಾರ್ಯಗಳಲ್ಲಿ ಋತ ಅಭಿವ್ಯಕ್ತವಾಗುತ್ತದೆ. ಆತನ ಜೀವನ ಸಂತ ಜೀವನವಾಗಿ ಮಾರ್ಪಡುತ್ತದೆ. ಋತದರ್ಶಿಯ ಜೀವನ ಋತಮಯ. ಅವನು ಸತ್‌ಪೂರ್ಣ ಸಂತ. ಆ ಋತದಲ್ಲಿ ತನ್ನನ್ನು ತಾನು ನಿವೇದಿಸಿಕೊಂಡನಾಗಿ ಅವನು ಶರಣ, ಋಷಿ, ಶರಣ, ಸಂತ! ಅವನು ಜಗತ್ತಿನಲ್ಲಿ ಋತಜ್ಞಾನ ಹರವುತ್ತಾನೆ. ಆದ್ದರಿಂದಾತ ಗುರು.

ಋತದರ್ಶನ ಇಲ್ಲದೆ ಋಷಿ, ಶರಣ, ಗುರು ಆಗಲಾರ. ಋಷಿಯಾದವನ ಮಾತು ಮಂತ್ರ. ಆ ಋತದರ್ಶನದ ಛಾಯೆ, ಸುವಾಸನೆ ಮಾತಿನ ಮಧ್ಯೆ ಹೊರಹೊಮ್ಮುವುದಾದರೆ ಅದು ಗುರುವಚನ. ಅದು ಶರಣನ ಮಾತು. "ಮಾತೆಂಬುದು ಜ್ಯೋತಿರ್ಲಿಂಗ", "ಕರುಣರಸದ ಕೋಡಿ ಹರಿವ ಕಟಾಕ್ಷದ ಪರತತ್ವ ಅರುಪುವ ಆಲಾಪದ ವರಪುಣ್ಯಮಯ ಶರೀರದ ನಿರಾಭಾರಿ ಸದ್ಗುರು ಇರಲೆನ್ನ ಮಾನಸದಲ್ಲಿ." ಋತ ದರ್ಶನವಾದ ಗುರುವಿನ ಲಕ್ಷಣ ನಿರಾಭಾರಿತ್ವ. ಲೋಕದ ಭಾರ ಇರುವುದಿಲ್ಲ. ಲೋಕ ಜ್ಞಾನದ ಭಾರ ಇರುವುದಿಲ್ಲ. ಲೋಕಾನುಭವರಸದ ಮೋಹ ಇರುವುದಿಲ್ಲ. ಆಗ ಆತ ನಿರಾಭಾರಿ! ಆದ್ದರಿಂದಲೇ ನೈಜ ಗುರು ಮಾತನಾಡುವುದೇ ಬೇರೆ. ಸಾಮಾನ್ಯ ಗುರು ಮಾತನಾಡುವುದೇ ಬೇರೆ. ಬಹಳ ವ್ಯತ್ಯಾಸ. ಆಕಾಶದ ನೀರು ಹರಿದು, ಹರಿದು, ಭೂಮಿ ತೊಯ್ದಾಗ ಸಸ್ಯ ನಳನಳಿಸುತ್ತದೆ. ಅದು ಬೇರೆ. ಒಣಗಿದ ಆಕಾಶ, ಬತ್ತಿಹೋದ ಭೂಮಿ, ಸುಡುವ ಭೂಮಿ, ಇಂಥಲ್ಲಿ ನೀರ ಹನಿಸಿ ಹನಿಸಿ ಬೆಳೆ ಬೆಳೆಯುತ್ತೇವೆ. ಆ ಬೆಳೆಯ ಬೆಳವಣಿಗೆ ಬೇರೆ. ಧಾರಾಕಾರವಾಗಿ ಮಳೆ ಸುರಿದರೆ ಭೂಮಿ ತಂಪಾಗುತ್ತದೆ. ಗಿಡಮರಗಳು ನಳನಳಿಸುತ್ತವೆ, ಫಲಿಸುತ್ತವೆ. ಆಕಾಶದ ನೀರು ಬಿದ್ದಂತೆ ಶ್ರೇಷ್ಠರ, ಸಂತರ, ಶರಣರ ಮಾತುಗಳು, ಭೂಮಂಡಲಕ್ಕೆ ಸುರಿದ ಜ್ಞಾನದ ನೀರು. ಆ ನೀರು ಸುರಿದರೆ ಶಾಂತವಾಗುತ್ತದೆ ಜಗತ್ತು. ಪಾಂಡಿತ್ಯದ ನೀರು ನಲ್ಲಿಯ ನೀರಿನಂತೆ. ಅದು ಪರಿಮಿತ, ಅಶುದ್ಧ. ಭೂಸ್ಪರ್ಶಿತ, ಲವಣಮಿಶ್ರಿತ.

ಆ ಆಕಾಶದ ನೀರು ಶುಭ್ರ, ಸ್ವಚ್ಛ! ಹಾಗೆ ಶ್ರೇಷ್ಠ ಸಂತರ ಮಾತುಗಳು ಮಂತ್ರಸದೃಶ. ಅದರೊಳಗೆ ಅಶುದ್ಧ ಲವಣವಿಲ್ಲ. ನಾನು ನನ್ನದು ಎನ್ನುವ ಅಶುದ್ಧತೆ ಪಾಂಡಿತ್ಯದ ಮಾತಿನಲ್ಲಿ. ಪರಮಾತ್ಮ ಒಂದು ಹಣ್ಣು ಮಾಡಿ ಕೊಡುತ್ತಾನೆ. ಎಷ್ಟು ರುಚಿಯಾದ ಹಣ್ಣು. ದ್ರಾಕ್ಷಿ ಹಣ್ಣು; ಅದನ್ನು ತಿಂದು ಸಂತೋಷಪಡುವುವು ಪಕ್ಷಿಗಳು. ರಸ ತೆಗೆದು ಅದನ್ನು ಹುಳಿಗೊಳಿಸಿ, ಕೆಡಿಸಿ ವೈನ್ ಮಾಡುತ್ತೇವೆ. ಅದು ಮನುಷ್ಯನಿಗೆ ರುಚಿಸುತ್ತದೆ. ಹಾಗೆ ಪಾಂಡಿತ್ಯದ ಮಾತು ಜನರಿಗೆ ಹಿಡಿಸುತ್ತದೆ. ಏಕೆಂದರೆ ಅದರಲ್ಲಿ ಲವಣಗಳಿವೆ. 'ನಾನು' ಎನ್ನುವ ಮಾದಕಾಂಶ ಇದೆ. ನಮ್ಮದು ಒಂದು ಸಣ್ಣ ಮನೆ; ಅದರಲ್ಲಿ ಒಂದೇ ಬಾಗಿಲು. ಸಣ್ಣ ಎರಡು ಕಿಟಕಿಗಳು. ಒಂದು ಸಣ್ಣ ಕೋಣೆ. ಅದರಲ್ಲಿ ನಮ್ಮದೊಂದು ಚಿಕ್ಕ ಹಾಸಿಗೆ. ಇಷ್ಟಿದ್ದರೆ ನಮಗೆ ಎಷ್ಟು ಆನಂದವಾಗುತ್ತದೆ! ಆ ಮನೆಯೊಳಗೆ ಮಲಗಿದರೆ ಎಷ್ಟು ಸಂತೋಷವಾಗುತ್ತದೆ! ಅದರ ಬದಲು ನಮ್ಮದಲ್ಲದ ಈ ಭವ್ಯ ಮಹಲಿನಲ್ಲಿ ಮಲಗಿದಾಗ ಅಷ್ಟು ಸಂತೋಷವಾಗುವುದಿಲ್ಲ. ಯಾವುದು ರುಚಿ ಕೊಡುತ್ತದೆ? ಆ ರುಚಿ 'ಅಹಂ', ಮಮ' ಎಂಬ ಎರಡು ಭಾವದಿಂದ ಬಂದುದು. ಆದರೆ ಆಕಾಶದಿಂದ ಬೀಳುವ ಆ ಭಗವಂತನ ದರ್ಶನ ಮಾಡಿಕೊಡುವ ಜನರ ಮುಖದಿಂದ ಬರುವ ಮಾತಿನಲ್ಲಿ ಅಹಂ ಇಲ್ಲ. ಮಮ ಇಲ್ಲ.

ನಮ್ಮ ಮಾತು ರಸಹೀನ. ಅದರಿಂದ ಅಮಲು ಏರುತ್ತದೆಯೇ ವಿನಾ ದಿವ್ಯ ಆರೋಗ್ಯ ಉಂಟಾಗುವುದಿಲ್ಲ. ಆದರೆ ಜ್ಞಾನಿಗಳ ಮಾತು ಕೇಳಿದರೆ ಆನಂದ, ಆರೋಗ್ಯ! ಅವರೇ ನಿರಾಭಾರಿ ಗುರುಗಳು. ಅಹಂ ಮಮದ ಭಾರವಿಲ್ಲದ ಋಷಿಗಳು. ಅವರ ಕಣ್ಣಿನಲ್ಲಿ, ಕರುಳಲ್ಲಿ, ಕಾರುಣ್ಯರಸ ಹರಿಯುತ್ತಿದೆ. ಪರತತ್ವವ ಜಗದಿ ಅರುಹುವ ಅದಮ್ಯ ಬಯಕೆ ಅವರಿಗೆ.

'ಆ ಗುರುವಿನ ದೇಹ ವರಪುಣ್ಯಮಯ' ಅಂದರೆ ಬಾಹ್ಯಾಂತರಶುದ್ಧ. ಅವರ ನುಡಿ ಆಲಿಸಿ ಚಿಂತಿಸುವುದೇ ಭಗವತ್‌ಚಿಂತನ. ಅಲ್ಲಮಪ್ರಭು ದೇವರು ಇಂತಹ ಒಬ್ಬ ಮಹಾನುಭಾವ. ಆಕಾಶದ ಎತ್ತರದ ತತ್ತ್ವವ ಅರಿತು ಬಟ್ಟಬಯಲಾದ ಅಲ್ಲಮ ನಿರಾಭಾರಿ ಗುರು! ಆತನ ಒಂದು ಪುಟ್ಟ ವಚನ ಹೀಗಿದೆ.

> ಉದಕದೊಳಗೆ ಕಿಚ್ಚು ಹುಟ್ಟಿ ಸುಡುತ್ತಿದ್ದುದ ಕಂಡೆ
> ಗಗನದ ಮೇಲೆ ಮಾಮರನ ಕಂಡೆ
> ಪಕ್ಕವಿಲ್ಲದ ಹಕ್ಕಿ ಬಯಲ ನುಂಗಿತ್ತ ಕಂಡೆ
> ಗುಹೇಶ್ವರಾ

ಉದಕದೊಳಗೆ ಕಿಚ್ಚು ಹುಟ್ಟಿತು. ಹುಟ್ಟಿದ ಕಿಚ್ಚು ಉದಕದೊಳಗಿರುವ ಕಲ್ಮಷವನ್ನು ಸುಟ್ಟುಹಾಕಿತು. ಉದಕ ಎಂದರೆ ಹೊಯ್ದಾಡುವ ಹರಿದಾಡುವ ಮನಸ್ಸು. ಕೆಳಮುಖವಾಗಿ ಹರಿವುದು ನೀರು. ಮೇಲ್ಮುಖವಾಗಿ ಹರಿಯುವುದಿಲ್ಲ. ಹಾಗೆ ನಮ್ಮ ಮನಸ್ಸು ಕೆಳಗೆ ಹರಿಯುತ್ತದೆ.

ಮೊದಮೊದಲು ಮನಸ್ಸು ಶುದ್ಧವೇ. ಆ ಬಳಿಕ ಕಾಲ ಕಳೆದಂತೆ ಅದು ಕೆಳಕೆಳಗೆ ಹರಿಯುತ್ತದೆ. ಹೊಲಸಾಗುತ್ತದೆ, ಹೆಚ್ಚು ಚಂಚಲಿಸುತ್ತದೆ. ದುರಾಸೆ ಇತ್ಯಾದಿಗಳು ಅದರಲ್ಲಿ ಹೆಚ್ಚಾಗುತ್ತವೆ. ಕೀಳು ವಿಷಯಗಳತ್ತ ನುಗ್ಗುತ್ತದೆ. ಈ ಪವಿತ್ರ ಮಂದಿರದಲ್ಲಿ ಬೇಕಾದಷ್ಟು ಒಳ್ಳೆಯದಿದೆ. ಮನಸ್ಸು ಅಷ್ಟಾಗಿ ಅದನ್ನು ಗಮನಿಸದೆ ಇಲ್ಲಿರುವ ದೋಷಗಳತ್ತ ಇಣುಕುತ್ತದೆ. ಆ ದೋಷವೇ ಅಂತರಂಗವ ತುಂಬಿಕೊಳ್ಳುತ್ತದೆ. ಜಗತ್ತಿನಲ್ಲಿ ಬೇಕಾದಷ್ಟು ಒಳ್ಳೆಯದಿದೆ. ಅತ್ತ ಲಕ್ಷಿಸದು ಮನಸ್ಸು. ಇಲ್ಲಿರುವ ಹೊಲಸನ್ನೆಲ್ಲಾ ತನ್ನಲ್ಲಿ ತುಂಬಿಕೊಳ್ಳುತ್ತದೆ.

ಜಗತ್ತು ಎಷ್ಟು ಸುಂದರ! ಹಸಿರು, ಹರಿವ ನೀರು, ಹಾರುವ ಹಾಡುವ ಹಕ್ಕಿಗಳು, ಈಜುವ ಮೀನು, ಏನು ಕೆಟ್ಟಿದೆ? ಯಾವ ಪ್ರಾಣಿ ಕೆಟ್ಟಿದೆ? ಯಾವ ಪಶು ಹಾಲಿನಲ್ಲಿ ನೀರು ಕೂಡಿಸಿ ವಂಚಿಸಿದೆ? ಎಲ್ಲವೂ ಒಳಿತಾಗಿದೆ. ಎಲ್ಲ ಒಳಿತಾಗಿರಬೇಕೆಂದು ಹೇಳುವ ಮನುಷ್ಯನೊಬ್ಬನ ಬಿಟ್ಟು. ಮನಸ್ಸು ಅಂಥ ಸುಂದರ ಜಗತ್ತನ್ನು ಉಪೇಕ್ಷಿಸಿ ಎಲ್ಲೆಲ್ಲಿ ಕುಂದುಕೊರತೆ ಅಲ್ಪತೆ ಇದೆ, ಅದನ್ನೇ ಗಮನಿಸುತ್ತದೆ.

ಜಗತ್ತು ಭವ್ಯ. ಅದನ್ನು ಕೆಡಿಸುವ ತ್ರಾಣ ಮನುಷ್ಯನಿಗೆಲ್ಲಿದೆ? ಬಹಳವಾದರೆ ಈ ಪೃಥ್ವಿಯ ಗಾಳಿಯ ಕೆಡಿಸಬಲ್ಲ. ನೀರು ಕೆಡಿಸಬಲ್ಲ. ಮನುಷ್ಯನ ಸಂಪರ್ಕದಿಂದ ಪೂರ್ವಕಾಲದ ಸ್ವಚ್ಛ ಶೀತಲ ಗಂಗೆ ಇಂದು ಏನಾಗಿದೆ? ಮಲಿನ ಗಂಗೆಯಾಗಿದೆ. ಆದರೆ, ಮನುಷ್ಯ ಸಮಸ್ತ ವಿಶ್ವವ ಕೆಡಿಸಲಾರ. ಅದು ದಿವ್ಯವಾಗಿದೆ, ನಿಸ್ಸೀಮವಾಗಿದೆ. ಅದನ್ನೇನು ತಿದ್ದುವುದು? ಕೆಟ್ಟುದು ನಿನ್ನ ಮನ, ನಿನ್ನ ತನು.

ಹೀಗೆ ದೂಷಿತವಾದುದು ಮನಸ್ಸು. ಅದು ಉದಕ. ಅದರಲ್ಲಿ ಕಿಚ್ಚು ಹುಟ್ಟಿತು! ಶ್ರೇಷ್ಠರ ಸಂತರ ಮಾತುಗಳಿಂದ ಒಂದಿಷ್ಟು ಕಿಚ್ಚು ಉಂಟಾಯಿತು. ಚಿಂತನದ ವಚನದ ಕಿಚ್ಚು! 'ಉದಕದೊಳಗೆ ಹುಟ್ಟಿದ ಕಿಚ್ಚು ಸುಡುತ್ತಿದ್ದುದ ಕಂಡೆ'. ಆ ಜ್ಞಾನ-ಕಿಚ್ಚು ಮನಸ್ಸಿನಲ್ಲಿಯ ಮಾಲಿನ್ಯವನ್ನು ಸುಡುತ್ತದೆ. ಗುರುವಚನದ ಕಿಚ್ಚು ಮನಸ್ಸಿನ ಅಲ್ಪತನವನ್ನೆಲ್ಲಾ ಸುಟ್ಟುಹಾಕುತ್ತದೆ. ಆಗ ಮನಸ್ಸು ಅಮನವಾಗುತ್ತದೆ. ಅತ್ಯಂತ ಪರಿಶುದ್ಧವಾಗುತ್ತದೆ. ಅದು ಮನಸ್ಸೇ ಅಲ್ಲ, ಅಮನ. ಇಂಥ ಅಮನ ಸ್ಥಿತಿ ಬಂದ ಬಳಿಕ ಆ ಅಮನದೊಳಗೆ ಹೊಸ ದೃಷ್ಟಿ ಉಂಟಾಗುತ್ತದೆ. ಸತ್ಯದರ್ಶನದ ಶಕ್ತಿ ಉದ್ಭವಿಸುತ್ತದೆ.

'ಗಗನದ ಮೇಲೆ ಮಾಮರನ ಕಂಡೆ'. ಆಗ ಆ ದೃಷ್ಟಿಗೆ ಗಗನದ ಮೇಲಿರುವ ಮಾಮರ ಕಾಣಿಸುತ್ತದೆ. ಮಾವಿನ ಮರ, ಮಾಮರ, ಬಹಳ ದೊಡ್ಡ ವೃಕ್ಷ. ಸವಿಯಾದ ಫಲ ಕೊಡುವ ವೃಕ್ಷ. ಈ ಜಗತ್ತು ಮಾಮರ! ಇದು ಎಲ್ಲಿದೆ? ಗಗನದ ಮೇಲೆ! ಇದರ ಬೇರು ಬಯಲಲ್ಲಿ, ಅಂದರೆ ಈ ಜಗತ್ತಿನ ಹಿನ್ನೆಲೆಯೊಳಗೆ ಗಗನ ! ಬಯಲು! ದೇವ-ಬಯಲು. ಅದರ ಅಸ್ತಿತ್ವ-ರಸ ಹೀರಿ ಈ ಜಗತ್ತು ಬೆಳೆಯುತ್ತ ಇರುವುದನ್ನು ಅಲ್ಲಮಪ್ರಭು ಕಂಡ! "ಗಗನದ ಮೇಲೆ ಮಾಮರನ ಕಂಡೆ" ಎನ್ನುತ್ತಾನೆ.

"ಪಕ್ಕೆ ಇಲ್ಲದ ಹಕ್ಕಿ ಬಯಲ ನುಂಗಿತ್ತ ಕಂಡೆ" ಅಹಂ-ಮಮ ಎಂಬ ಭಾವಗಳು ಪಕ್ಕೆಗಳು ಕಳಚಿದವು. ಆಗ ನಿರಹಂ-ನಿರ್ಮಮನಾದ ಜೀವ ಲೌಕಿಕ ಮಂಡಲದಾಚೆ ಅನಂತತೆಯಲ್ಲಿ ಬೆರೆಯುತ್ತಾನೆ, ಮುಕ್ತನಾಗುತ್ತಾನೆ. ಅವನಲ್ಲಿ ಬಯಲು, ಬಯಲಲ್ಲಿ ಅವನು! 'ಬಯಲು ಬಯಲ ನುಂಗಿತ್ತು'. ಇಂಥ ಅಮೂಲ್ಯ ವಚನಗಳ ಚಿಂತನೆಯಿದು ಭಗವಚ್ಚಿಂತನ. ಇಂತಹ ಮಾತುಗಳನ್ನು ನಾವು ಸವಿಯಬೇಕು.

'ನಾನು ಇಂಥವ, ಅಂಥವ' ಎಂಬ ಭಾವವಿದ್ದರೆ ಶುದ್ಧ ಹಾಗೂ ಫಲಕಾರಿ ಚಿಂತನೆಯಾಗದು. ಅದು ವಿಚಾರವಾದೀತೇ ಹೊರತು ಅನುಭಾವ ಸವಿವ ಚಿಂತನೆಯಾಗದು.

ಒಂದು ಗಿಡ ಇತ್ತು. ಗಿಡದ ಕೆಳಗೆ ಒಂದು ಝರಿ. ಯಾತ್ರಿಕನಿಗೆ ನೀರಡಿಕೆ ಆಗಿತ್ತು. ನೀರು ಹರಿಯುತ್ತಿತ್ತು. ಬಾಯೊಳಗೆ ಸುಣ್ಣ ಹಾಕಿ ಕೊಂಡಿದ್ದಾನೆ. ಎಲೆ ಜಗಿದಿದ್ದಾನೆ. ಅದನ್ನು ಉಗುಳದೆ ನೀರು ಕುಡಿದ. ಅದೆಲ್ಲಾ ಸುಣ್ಣದ ನೀರಾಗಿತ್ತು. 'ಕೆಟ್ಟಿದೆ ನೀರು' ಎಂದ! ಆಗ ಝರಿ ಹೇಳಿತು-"ಮನುಷ್ಯನೆ, ಹೊಲಸು ನಿನ್ನಲ್ಲಿದೆ; ಉಗುಳು. ಆಗ ತಿಳಿಯುತ್ತದೆ ನಾನು ಹೇಗಿದ್ದೇನೆ."

ಶರಣರ ಮಾತುಗಳು ಸ್ವಚ್ಛ, ಮಧುರ. ಅವುಗಳ ರುಚಿ ಅನುಭವಕ್ಕೆ ಬರಬೇಕಾದರೆ ನಮ್ಮ ಹೃದಯ ಹಸನಾಗಬೇಕು. ನಾವು ಏನೇನೋ ತಿಂದವರು. ಪರಧನ ಪರಸ್ತ್ರೀ ಏನೆಲ್ಲಾ. ದೇಶ-ಕೋಶ ಎಲ್ಲವ ಜಗಿದವರು. ಅದನ್ನೆಲ್ಲಾ ಚೆಲ್ಲಬೇಕು. ಆಗ ವಚನಾಮೃತ–ಚಿಂತನ!

□

ತಾನು ಪ್ರಸಾದಿಯೆನಿಸಿಕೊಂಬ ಹಿರಿಯನು
ತನ್ನ ಪ್ರಾಣವಾದ ಗುರುಚರಲಿಂಗಕ್ಕೆ
ತನ್ನನರಿಯದೆ ಮಲತ್ರಯಕ್ಕೆ
ಮಗ್ನತೆಯಾಗಿ ಹೊತ್ತುಗಳೆದರೆ
ಕಿತ್ತು ಹಾಕುವರು ನಾಯಕನರಕದೊಳಗೆ
ಅನಂತಕಾಲ
ಗುರುನಿರಂಜನ ಚನ್ನಬಸವಲಿಂಗಾ.

**ದೇಶಿಕೇಂದ್ರ ಸಂಗನಬಸವಯ್ಯ**

# ಚಿಂತನೆಯ ಕಾಮಧೇನು

**ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳು**
ಶ್ರೀ ದೇಗುಲಮಠ, ಕನಕಪುರ, ರಾಮನಗರ ಜಿಲ್ಲೆ

ಪ್ರಪಂಚದ ಇತಿಹಾಸದ ಹಿನ್ನೆಲೆಯಲ್ಲಿ ಕ್ರಿಯಾಶೀಲವಾಗಿ ಚಿಂತಿಸಿ ಮಂಥನಗೈದರೆ 'ಭರತಖಂಡ' ವಿಶ್ವವಂದನಾರ್ಹವಾದುದು. ದಯೆ, ಕರುಣೆ, ಅಂತಃಕರಣ, ಸನ್ಮಾರ್ಗ ಚಿಂತನೆ, ಪರರ ಕ್ಷೇಮ, ಸಮಾಜಸೇವೆ, ಧರ್ಮ, ನ್ಯಾಯ, ನೀತಿ, ನಿರಹಂಕಾರ, ನಿರ್ಬಲ ರಕ್ಷಣೆ ಹಾಗೂ ಒಳಿತು ಎಂದು ದೊರೆಯುವ ಪ್ರಪಂಚದ ಅನೇಕವೆಲ್ಲದ್ದಕ್ಕೂ ನಮ್ಮ ಭರತಖಂಡವೇ ಮೂಲವಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ಇಂತಹ ನೆಲೆಯಲ್ಲಿ ಭಾರತದ ವಿಶ್ವಖ್ಯಾತಿಗೆ ಒತ್ತುಕೊಟ್ಟಂತೆ ಕೆಲಸ ನಿರ್ವಹಿಸಿ ಅನೇಕ ಧರ್ಮಗಳ ಸಾರಸತ್ವವನ್ನು 'ದಯೆ' ಎಂಬ ಎರಡಕ್ಷರದಲ್ಲಿ ಹುದುಗಿಸಿ 'ದಯೆಯೇ ಧರ್ಮದ ಮೂಲವಯ್ಯಾ' ಎಂದು ಎಲ್ಲಾ ಧರ್ಮಗಳ ಸಾರವನ್ನು ಕೇಂದ್ರೀಕರಿಸಿ ನಿಂತ ಕನ್ನಡನಾಡು ಪುಟ್ಟ ಪ್ರಪಂಚದಂತಿರುವ ಭಾರತದಲ್ಲಿ ಒಂದು ಪುಟ್ಟ ಭಾರತವಾಗಿ ಹೊರಹೊಮ್ಮಿತ್ತು. ಇಂತಹ ಸರ್ವಗುಣಸಂಪನ್ನತೆಗೆ ಬೆನ್ನೆಲುಬಾಗಿ ನಿಂತವುಗಳೇ ಮಠಗಳು–ಮಂದಿರಗಳು, ದೇವಾಲಯಗಳು, ಸಾಧು-ಸಂತರುಗಳು ಹಾಗೂ ಸಮಾಜಮುಖಿ ಸೇವಾತತ್ಪರರು.

ಈ ನಿಟ್ಟಿನಲ್ಲಿ ಸಾವಿರಾರು ವರ್ಷಗಳ ಸುದೀರ್ಘ ಇತಿಹಾಸ ಹೊಂದಿರುವ ಮಠಗಳಲ್ಲಿ ಶ್ರೀಮತ್ಸುತ್ತೂರು ವೀರಸಿಂಹಾಸನ ಮಠವೂ ಒಂದು. ಮೈಸೂರು ಜಿಲ್ಲೆಯ ಕಪಿಲಾನದಿ ದಂಡೆಯ ಪ್ರಶಾಂತ ಪರಿಸರದಲ್ಲಿ ನೆಲೆಗೊಂಡು ಸದಾ ಶಾಂತಿಮಂತ್ರದೊಂದಿಗೆ ಸಮಾಜದ ಸರ್ವತೋಮುಖ ಪ್ರಗತಿಗೆ ಚಿಂತಿಸುತ್ತಾ ಇಂದು ವಿಶ್ವಖ್ಯಾತಿಯ ಪುಷ್ಪಮಾಲೆಯಲ್ಲಿ ಕೇಂದ್ರಬಿಂದುವಿನಂತೆ ದಾಪುಗಾಲು ಹಾಕುತ್ತಿರುವ ಸುಪ್ರಸಿದ್ಧ 'ವೀರಸಿಂಹಾಸನ ಮಠ'. ಶ್ರೀಮಠದ ಗುರುಪರಂಪರೆಯ ಪೀಠವನ್ನು ಅಲಂಕರಿಸಿದ ಗುರುವರೇಣ್ಯರೂ, ಸದಾ ಹಸನ್ಮುಖಿಗಳಾಗಿ ಶಿವಲೀಲಾಮೃತದೊಂದಿಗೆ ಸಮಾಜಮುಖಿ ಕಾರ್ಯಗಳನ್ನು ಕೈಗೊಂಡು ಸರ್ವತೋಮುಖ ಅಭಿವೃದ್ಧಿಗೆ ಕಾಳಜಿಯಿತ್ತು, ಬಡವ-ಬಲ್ಲಿದನೆಂಬ ಭೇದವೆಣಿಸದೆ ಎಲ್ಲರಿಗೂ, ಎಲ್ಲಾ ಕಾಲದಲ್ಲಿಯೂ ಒಳಿತನ್ನೇ ಬಯಸಿದವರು. ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರಿಂದ ಇಂದಿಗೂ ಸರ್ವವಿಧಿತವಾದುದೆಂದೇ ನಾವು ಭಾವಿಸಬೇಕು.

ಈ ಹಿನ್ನೆಲೆಯಲ್ಲಿ ಶ್ರೀಮತ್ಸುತ್ತೂರು ವೀರಸಿಂಹಾಸನದಲ್ಲಿ ಧರ್ಮದ ಪ್ರತಿರೂಪದಂತೆ ವಿರಾಜಮಾನರಾಗಿ ಅಲಂಕರಿಸಿದ ಇಪ್ಪತ್ಮೂರನೇ ಗುರುವರ್ಯರೇ ಶ್ರೀಮತ್ಸುತ್ತೂರು

ವೀರಸಿಂಹಾಸನಾಧೀಶ್ವರ ಪರಮಪೂಜನೀಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು. ಅನೇಕ ವರ್ಷಗಳಿಂದ ಸುಪ್ತವಾಗಿ – ಅಗೋಚರವಾಗಿ ಬೆಳೆದುನಿಂತ ಕಲ್ಪವೃಕ್ಷ ಒಂದೇ ಬಾರಿಗೆ ಜನರ ಆಶೋತ್ತರಗಳನ್ನು ಈಡೇರಿಸುವಂತೆ ಕಾಣಿಸಿಕೊಂಡು ಸಾವಿರಾರು ಭಕ್ತರ ಅಭೀಪ್ಸೆಯ ಆಗರವಾದರು. ಅಂದಿನ ಸ್ಥಿತಿಯಲ್ಲಿ ಧರ್ಮ ಕಾರ್ಯವೊಂದನ್ನೇ ನಿರ್ವಹಿಸದೆ ಶಿಕ್ಷಣ-ದಾಸೋಹಕ್ಕೆ ಹೆಚ್ಚಿನ ಒತ್ತುಕೊಟ್ಟು ಈ ನಾಡಿನ ಬಡತನ ನಿರ್ಮೂಲನಕ್ಕೆ ಶಿಕ್ಷಣವೇ ಮೂಲ ಮಂತ್ರವೆಂದು ಭಾವಿಸಿ ಶಿಕ್ಷಣ ಕೇಂದ್ರಗಳು, ಜೊತೆಯಲ್ಲಿ ದಾಸೋಹ ವನ್ನು ಪ್ರಾರಂಭಿಸಿದ ಮಹಾನ್ ತೇಜೋಮೂರ್ತಿಗಳು.

ಇಂತಹ ತೇಜೋಮೂರ್ತಿಗಳವರ ಒಡನಾಟದಲ್ಲಿ ಕಂಡು ಉಂಡ ವಿಚಾರಗಳು ನಮ್ಮ ಹೃದಯದ ಅಂತರಾಳದಲ್ಲಿವೆ. ಈ ಒಂದು ಸುಸಂದರ್ಭದಲ್ಲಿ ಅವುಗಳನ್ನು ಸ್ಮರಿಸಿಕೊಳ್ಳು ವಂತಾಗಿದೆ.

## ಮಮತೆಯ ಕಲ್ಪವೃಕ್ಷ

ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರನ್ನು ನಾವು ವಿದ್ಯಾರ್ಥಿದೆಸೆಯಿಂದಲೇ ಬಹಳ ಹತ್ತಿರದಿಂದ ಕಂಡವರು. ಅದರಲ್ಲಿಯೂ ಮೊದಲನೇ ಬಾರಿಗೆ ಅವರ ದರ್ಶನಾಭಿಲಾಶೆಯಾಗಿ ಬಂದದ್ದು ಶಾರದವಿಲಾಸ ಕಾಲೇಜ್‌ನಲ್ಲಿ ಪ್ರಥಮ ಪಿ.ಯು.ಗೆ ಸೇರಿದಾಗ. ಪ್ರೌಢ ಶಿಕ್ಷಣವನ್ನು ಚಾಮರಾಜನಗರ ತಾಲ್ಲೂಕು ಮರಿಯಾಲ ಮಠದಲ್ಲಿದ್ದುಕೊಂಡೇ ಚಾಮರಾಜನಗರ ಮುನಿಸಿಪಲ್ ಪ್ರೌಢಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ಮುಗಿಸಿ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಮೈಸೂರಿಗೆ ಬಂದರೂ ವಸತಿ ಮತ್ತು ಊಟದ ವ್ಯವಸ್ಥೆ ನಮ್ಮನ್ನು ಕಾಡುತ್ತಿತ್ತು. ಈ ಒಂದು ಸಂದರ್ಭದಲ್ಲಿ ಮರಿಯಾಲ ಮಠದ ಪೂಜ್ಯ ಶ್ರೀ ಸದಾಶಿವಸ್ವಾಮಿಗಳವರು ನೀಡಿದ ಶಿಫಾರಸ್ಸು ಪತ್ರವನ್ನು ಪಡೆದು ಮೈಸೂರಿಗೆ ಬಂದು ದರ್ಶನ ಪಡೆದು ಪೂಜ್ಯ ಜಗದ್ಗುರುಗಳವರಿಗೆ ನಮಸ್ಕರಿಸಿ ಶಿಫಾರಸ್ಸು ಪತ್ರವನ್ನು ಅವರ ಕೈಗಿತ್ತಾಗ ಏನೊಂದನ್ನೂ ವಿಚಾರಿಸದೆ ಅದೇ ಪತ್ರದ ಮೇಲೆ 'ಈತನಿಗೆ ವಸತಿ-ಪ್ರಸಾದದ ವ್ಯವಸ್ಥೆ ಕಲ್ಪಿಸುವುದು' ಎಂದು ಬರೆದು ಚೆನ್ನಾಗಿ ಓದು ಮಗು ಎಂದು ಹರಸಿ ಮೇನೇಜರ್ ಗುರುಮೂರ್ತಿಯವರನ್ನು ಕಾಣು ಎಂದು ಕಳುಹಿಸಿದ ಸಂದರ್ಭ ಇಂದಿಗೂ ಕಣ್ಮುಂದೆ ಸುಳಿದಂತಾಗುತ್ತದೆ. ಆ ಒಂದು ಸಮಯದಲ್ಲಿ ನಮ್ಮ ಮನಸ್ಸಿನ ಭಾವನೆಗಳು ಗರಿಬಿಚ್ಚಿ ಅಬ್ಬಾ! ಎಂಥ ಉದಾರತೆ! ಎಂಥ ನಿರ್ಮಲ ಮನಸ್ಸು! ಎಂಥ ಮುಗ್ಧತೆ, ಅಂದು ಪ್ರಾರಂಭವಾದ ಪೂಜ್ಯರ ಒಡನಾಟ ಇಂದಿಗೂ ನಮ್ಮ ಹೃದಯವನ್ನು ಹಗುರವನ್ನಾಗಿಸುತ್ತದೆ.

## ಚಿಂತನೆಯ ಕಾಮಧೇನು

ಇದೊಂದು ಆಂತರಿಕ ನೋವಿನ ಸಂದರ್ಭ. ಮೊದಲಬಾರಿಗೆ ಜಗದ್ಗುರುಗಳವರನ್ನು ದರ್ಶಿಸಿದಾಗ ವಸತಿ-ಪ್ರಸಾದದ ವ್ಯವಸ್ಥೆ ಕಲ್ಪಿಸಿ ಕಷ್ಟಪಟ್ಟು ಓದು ಎಂದು ಹರಸಿ ಕಳುಹಿಸಿದರೂ ಆಂಗ್ಲಮಾಧ್ಯಮವಾದ ಪಿ.ಯು.ಸಿ. (ಪಿಸಿಎಂಬಿ) ಕಷ್ಟಪಟ್ಟು ಅಭ್ಯಾಸ

ಮಾಡಿದರೂ ಅನುತ್ತೀರ್ಣನಾಗುವಂತಾಯಿತು. ಆದರೆ ಮತ್ತೆ ವ್ಯಾಸಂಗವನ್ನು ಮುಂದುವರಿಸುವ ಆಸೆ ಕಮರದೆ ಮತ್ತೊಮ್ಮೆ ಪೂಜ್ಯ ಶ್ರೀ ಸದಾಶಿವ ಮಹಾಸ್ವಾಮಿಗಳನ್ನು ಮೊರೆಹೊಕ್ಕುವಂತಾಯಿತು. ಪೂಜ್ಯ ಶ್ರೀ ಸದಾಶಿವ ಮಹಾಸ್ವಾಮಿಗಳು ಮತ್ತೊಂದು ಶಿಫಾರಸ್ಸು ಪತ್ರವನ್ನು ಕೈಗಿತ್ತು 'ಕ್ಯಾತನಹಳ್ಳಿ ಶ್ರೀಗಳವರು ಹತ್ತಿರವಿರುವಾಗ ಈ ಪತ್ರ ಕೊಡಬೇಡ ಏಕೆಂದರೆ ನೀನು ಫೇಲಾಗಿದ್ದಿಯಾ. ಅವರೇನಾದರೂ ಜಗದ್ಗುರುಗಳ ಎದುರಿಗೆ ಫೇಲಾದವರಿಗೆ ಸೀಟು ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿದರೆ ಜಗದ್ಗುರುಗಳು ಆಗುವುದಿಲ್ಲ ಎನ್ನಬಹುದು. ಆದ್ದರಿಂದ ಒಬ್ಬರೆ ಇರುವಾಗ ಕೊಡು' ಎಂದು ಕಿವಿಮಾತು ಹೇಳಿ ಕಳುಹಿಸಿಕೊಟ್ಟರು. ಆದರೆ ಈ ದಿನ ತಾಳ್ಮೆಗೆ ಬೆಲೆ ಕಟ್ಟುವ ದಿನವಾಯಿತು. ಶ್ರೀ ರಾಜೇಂದ್ರ ಮಹಾಸ್ವಾಮಿಗಳವರು ಒಬ್ಬರೇ ಇರುವಂತಾದದ್ದು ನಾವು ಕಾದ ಒಂದೂವರೆದಿನದ ನಂತರ. ಏಕೆಂದರೆ ಕ್ಯಾತನಹಳ್ಳಿ ಶ್ರೀಗಳವರು ಜಗದ್ಗುರುಗಳವರನ್ನು ಬಿಟ್ಟು ಕದಲಲೇ ಇಲ್ಲ. ಯಾವುದೋ ಒಂದು ಕಾರಣಕ್ಕಾಗಿ ಕ್ಯಾತನಹಳ್ಳಿ ಶ್ರೀಗಳು ಒಳಗೆ ಹೋದಾಗ ಅದೇ ಸಂದರ್ಭ ಸುಸಂದರ್ಭವಾಗಿ ಕಂಡು ನೇರವಾಗಿ ಒಳಗೆ ಹೋಗಿ ಶ್ರೀಗಳವರಿಗೆ ನಮಸ್ಕರಿಸಿ ಪತ್ರವನ್ನು ಕೈಗಿತ್ತು ಮೌನಿಯಾದೆ. ಜಗದ್ಗುರುಗಳವರು ಕತ್ತೆತ್ತಿಯೂ ನೋಡದೆ ಅನುತ್ತೀರ್ಣವಾಗಿರುವ ಬಗ್ಗೆ ವಿಚಾರಿಸದೆ ಮೌನದಿಂದಲೇ ಈತನಿಗೆ ಪರೀಕ್ಷೆ ಮುಗಿಯುವವರೆಗೂ ವಸತಿ-ಪ್ರಸಾದದ ವ್ಯವಸ್ಥೆ ಕಲ್ಪಿಸುವುದು ಎಂದು ಬರೆದು ಚೆನ್ನಾಗಿ ಓದೋ, ಎಂದೂ ಹೇಳಿ ಮೇನೇಜರ್ ಗುರುಮೂರ್ತಿಯನ್ನು ಕಾಣು ಎಂದರು.

ಶ್ರೀಗಳವರನ್ನು ಕಾಣುವವರೆಗೂ, ಕಂಡಮೇಲೆ ನನ್ನ ಬಗ್ಗೆ ಇರುವ ಅಭಿಪ್ರಾಯಗಳ ಬಗ್ಗೆ ನಮ್ಮ ಹೃದಯದ ಅಂತರಾಳದಲ್ಲಿ ಇದ್ದುದೇ ಬೇರೆ, ಆದರೆ ಸನ್ನಿಧಿಯಲ್ಲಿ ನಡೆದದ್ದೇ ಬೇರೆ. ಏಕೆಂದರೆ ಗ್ರಾಮೀಣ ಪ್ರದೇಶದ ಮಕ್ಕಳ ಅದರಲ್ಲಿಯೂ ಆಂಗ್ಲ ಮಾಧ್ಯಮದ ಶಿಕ್ಷಣ ಕಬ್ಬಿಣದ ಕಡಲೆ ಎಂಬುದು ಶ್ರೀಗಳವರಿಗೆ ಮನವರಿಕೆಯಾಗಿತ್ತು.

ಇಂತಹ ಹತ್ತು-ಹಲವು ಸಂದರ್ಭಗಳು ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿವೆ. ನೆನಪು ಗರಿಬಿಚ್ಚಿದರೆ ಬರೆಯಲು ಸಮಯವೇ ಇಲ್ಲದಾಗುತ್ತದೆ. ಅಂತಹ ದಿವ್ಯ ತೇಜೋಮೂರ್ತಿಯ ಒಡನಾಟದಲ್ಲಿ ನಾವೂ ಹಾಸುಹೊಕ್ಕಾಗಿದ್ದೇವೆ ಎಂಬ ಆಹ್ಲಾದಕರ ಸಂಗತಿ ನಮಗೆ ಹರ್ಷ ತಂದಿದೆ. ಅಂತೆಯೇ ಇಂದಿನ ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಕೂಡ ನಮ್ಮ ಮೇಲೆ ಕರುಣೆ ಇಟ್ಟು ಆಶ್ರಯದಾತರಾಗಿ ಮಾರ್ಗದರ್ಶಕರಾಗಿದ್ದಾರೆ.

**ಕೃಪೆ : 'ಘನ–ಮನ' (ಜೆಎಸ್‌ಎಸ್ ಗ್ರಂಥಮಾಲೆ ಪ್ರಕಟಣೆ)**

□

# ಶಬರಶಂಕರ ವಿಲಾಸ ಟೀಕು : ದ್ವಿತೀಯಾಶ್ವಾಸ

ಸಿದ್ಧಾಂತಿ ಶಿವಶಂಕರ ಶಾಸ್ತ್ರಿಗಳು

(ಮುಂದುವರಿದಿದೆ)

ಚ ॥ ಬೆಸನಮನೇಳನೊತ್ತರಿಸಿ ಷಡ್ರಿಪುವರ್ಗಮನೊತ್ತಿ ಮೆಟ್ಟಿ ಬಾ ।
ಧಿಸುವ ಹೃಷೀಕಸಂಚಯಮನಳ್ಕಿಸಿ ದುರ್ಮದಮೆಂಟನಿಕ್ಕಿಂ ಬಂ ।
ಧಿಸಿ ಪೊರಸೂಸದಂತುಸಿರನರ್ದಿಸಿ ಕಾಯಗುಣಂಗಳಂ ಮನಂ ॥
ಮಿಸುಕದೆ ಮಾಳ್ಕೆಯಿಂ ತಡೆದು ಭಕ್ತಿಯೊಳಾಂ ಪಿಡಿವೆಂ ಮೃಡಾಂಘ್ರಿಯಂ ॥

**ಟೀಕೆ ॥** ಬೆಸನಮಂ ಏಳು – ಸ್ತ್ರೀದ್ಯೂತಮೃಗಯಾಮದ್ಯಾದಿ ಸಪ್ತವ್ಯಸನಗಳನ್ನು, ಒತ್ತರಿಸಿ – ಬಿಟ್ಟು, ಷಡ್ರಿಪುವರ್ಗಮಂ – ಕಾಮಕ್ರೋಧಾದಿಗಳೆನಿಸುವ ೬ – ಹಗೆಗಳ ಗುಂಪನ್ನು, ಒತ್ತಿಮೆಟ್ಟಿ – ನಿಗ್ರಹಿಸಿತುಳಿದು, ಬಾಧಿಸುವ _ ಪೀಡಿಸುವ, ಹೃಷೀಕ ಸಂಚಯಮಂ – ಇಂದ್ರಿಯಗ್ರಾಮವನ್ನು, ಅಳ್ಕಿಸಿ – ಹೆದರಿಸಿ, ದುರ್ಮದಮೆಂಟಂ – ಅಷ್ಟವಿಧ ಗರ್ವಗಳನ್ನು, ಇಕ್ಕಿ – ಹೊಡೆದು, ಉಸಿರನು – ಪ್ರಾಣವನ್ನು, ಹೊರಸೂಸದಂತೆ – ಹೊರಕ್ಕೆ ಸುಳಿಯದ ಹಾಗೆ, ಬಂಧಿಸಿ – ಕಟ್ಟಿ, ಕಾಯಗುಣಂಗಳಂ – ಶರೀರದ ಸತ್ವಾದಿ ಗುಣಂಗಳಂನ್ನು, ಅರ್ದಿಸಿ – ನಿರ್ಬಂಧಿಸಿ, ಶಿಕ್ಷಿಸಿ , ಮನಂ– ಹೃದಯವು, ಮಿಸುಕದ ಮಾಳ್ಕೆಯಿಂ – ಚಲಿಸದ ರೀತಿಯಿಂದ, ತಡೆದು – ನಿಗ್ರಹಿಸಿ, ಭಕ್ತಿಯೊಳು – ಪ್ರೀತಿಸೇವನದಿಂದ, ಆಂ – ನಾನು, ಮೃಡಾಂಘ್ರಿಯಂ – ಶಿವಚರಣವನ್ನು, ಪಿಡಿವೆಂ – ಹಿಡಿಯುವೆನು.

**ತಾ ॥** ಸಪ್ತವ್ಯಸನ, ಅರಿಷಡ್ವರ್ಗ, ಅಷ್ಟಮದ, ದಶೇಂದ್ರಿಯಗಳನ್ನು ಗೆದ್ದು, ಪ್ರಾಣವಂ ಜಯಿಶಿ ಮನೋನಿಗ್ರಹವ ಮಾಡಿಕೊಂಡು, ಭಕ್ತಿಯಿಂದ ಶಿವನಂ ಕಾಣುವೆನೆಂದು ಸಾಧನಗಳನ್ನು ಅರ್ಜುನನು ನಿರೂಪಿಸಿದನು.

**ವಿವರಣವು :** ೧. ಸ್ತ್ರೀವ್ಯಸನ, ೨. ಪಾನವ್ಯಸನ, ೩. ಮೃಗಯಾವ್ಯಸನ, ೪. ಧನವ್ಯಸನ, ೫. ದ್ಯೂತವ್ಯಸನ, ೬. ಕಾಷ್ಠವ್ಯಸನ, ೭. ತನುವ್ಯಸನ – ಈ ೭ ಸಪ್ತವ್ಯಸನಂಗಳು. ೧. ಕಾಮ, ೨. ಕ್ರೋಧ, ೩. ಲೋಭ, ೪. ಮೋಹ, ೫. ಮದ, ೬. ಮಾತ್ಸರ್ಯ – ಇವು ೬ ರಿಪುವರ್ಗಂ. ೧. ಶ್ರೋತ್ರ ೨. ತ್ವಕ್ಕು ೩. ಚಕ್ಷುಸ್ಸು ೪. ಜಿಹ್ವ ೫. ಘ್ರಾಣ – ಇವು ೫ ಜ್ಞಾನೇಂದ್ರಿಯಂಗಳ್. ೧. ವಾಕ್ಕು ೨. ಪಾಣಿ ೩. ಪಾದ ೪. ಪಾಯು ೫. ಉಪಸ್ಥ – ೨. ಛಲ ೩. ಧನ ೪. ರೂಪ ೫. ಐಶ್ವರ್ಯ ೬. ಯವ್ವನ ೭. ತಪಸ್ಸು ೮. ವಿದ್ಯೆ ಇವಷ್ಟಮದಂಗಳ್ ॥ ೯೦ ॥

ಕಂ ॥ ಸ್ಥಿರಭಕ್ತಿಭಾವದಿಂ ಶಂ ।
ಕರನಂ ಮೆಚ್ಚಿಸುವೆನೊಚ್ಚತಂ ಮೆಚ್ಚದೊಡೀ ॥
ಹರಣಮನೀವೆಂ ತತ್ಪದ ।
ಸರಸಿರುಹಕ್ಕೆಂತುಮೆಡೆಯೊಳಾಂ ಬಿಟ್ಟಪೆನೇ ॥ ೯೧ ॥

**ಟೀಕೆ ॥** ಸ್ಥಿರ – ನಿಶ್ಚಲವಾದ, ಭಕ್ತಿಭಾವದಿಂ – ಪ್ರಯಸೇವಾ ಬುದ್ಧಿಯಿಂದ, ಶಂಕರನು – ಸುಖವನ್ನು ಮಾಡುವ ಶಿವನನ್ನು ಮೆಚ್ಚಿಸುವೆಂ, ಒಚ್ಚತಂ – ಒಂದು ಪಕ್ಷದಲ್ಲು, ಮೆಚ್ಚದೊಡೆ – ಹರಣಮಂ – ಪ್ರಾಣವನ್ನು, ತತ್ಪದ ಸರಶಿರುಹಕ್ಕೆ – ಆತನ ಚರಣಾರವಿಂದಕ್ಕೆ, ಈವೆಂ – ಅರ್ಪಿಸುವೆನು, ಎಂತು – ಹೇಗಾದರು, ಆಂ – ನಾನು, ಎಡೆಯೊಳು – ಮಧ್ಯದಲ್ಲಿ, ಬಿಟ್ಟಪನೇ – ಬಿಡುವೆನೇ.

**ತಾ ॥** ಭಕ್ತಿಯಿಂದ ಶಿವನನ್ನು ಮೆಚ್ಚಿಸುತ್ತೇನೆ. ಮೆಚ್ಚದೆ ಹೋದರೆ ಪ್ರಾಣವನ್ನೇ ಕೊಟ್ಟುಬಿಡುತ್ತೇನೆ. ಆರಂಭಿಸಿದ ಕೆಲಸವನ್ನು ಹೇಗಾದರೂ ಸಾಧಿಸುವೆನೇ ಹೊರತು ನಡುವೆ ಬಿಡುವುದಿಲ್ಲ ಎಂಬುದರಿಂದ ಅರ್ಜುನನು ವೀರಶೈವ ಹಠಯೋಗಿಯೆಂಬುದು ತಿಳಿಯಲಾದುದು.

ವ ॥ ಎಂದು ಪೂಣ್ದವಂ ನುಡಿಯಲೊಡನೆ ॥

**ಟೀಕೆ ॥** ಎಂದು ಅವಂ – ಆ ಮುನಿಯು, ಪೂಣ್ದು – ಹೂಡಿ, ನುಡಿಯಲು – ಒಡನೆ.

ಕಂ॥ ಬೆರಲೆತ್ತಿ ಪೊಗಳ್ದು ಮಗುಳ್ದ ।
ಚ್ಚರಿಪಟ್ಟತಿನಿಷ್ಠೆಗವನ ಸದ್ಭಕ್ತಿಗೆ ಜಂ ।
ಭರಿಪು ನಿಜರೂಪುದೋರುತೆ ।
ಪರಸಿ ಮುದಂಬೆತ್ತು ಸಗ್ಗಕೆಯ್ದಿದನಿತ್ತಲ್ ॥ ೯೨ ॥

**ಟೀಕೆ ॥** ಬೆರಲೆತ್ತಿ – ಬೆರಳನ್ನು ಎತ್ತಿ, ಪೊಗಳ್ದು – ಶ್ಲಾಘಿಸಿ, ಮಗುಳ್ದು – ಮತ್ತು, ಅವನ – ಆ ಮುನಿಯ, ಅತಿನಿಷ್ಠೆಗೆ – ಅತಿ ಸ್ಥಿರಭಾವಕ್ಕೆ, ಸದ್ಭಕ್ತಿಗೆ – ಒಳ್ಳೆಯ ಭಕ್ತಿಗೆ, ಅಚ್ಚರಿವಟ್ಟು – ಆಶ್ಚರ್ಯಪಟ್ಟು, ಜಂಭರಿಪು – ಜಂಭಾಸುರನಿಗೆ ವಿರೋಧಿಯಾದ ಚಂದ್ರನು, ನಿಜರೂಪು – ತನ್ನ ಯಥಾರ್ಥ ರೂಪವನ್ನು, ತೋರುವ – ಪ್ರತ್ಯಕ್ಷವಾಗಿ ತೋರಿಸುತ್ತ, ಪರಸಿ – ಆಶೀರ್ವದಿಸಿ, ಮುದಂಬೆತ್ತು – ಸಂತೋಷವಂ ಪಡದು, ಸಗ್ಗಕೆ – ಸ್ವರ್ಗಕ್ಕೆ, ದೇವಲೋಕಕ್ಕೆ, ಎಯ್ದಿದಂ – ಹೋದನು, ಇತ್ತಲ್ – ಇಂದ್ರಕೀಲದಲ್ಲಿ ॥ ೯೨ ॥

ಕಂ॥ ವರ ಷಟ್ತ್ರಿಂಶತ್ತತ್ವೋ ।
ಪರಗತನನವಿದ್ಯೆ ಪೊಗದ ಶುದ್ಧಾತ್ಮನನ ।
ಕ್ಷರನನನುಪಮನನಭವನ ।
ಸುರುತರ ಚಿದಖಂಡರೂಪನಂ ಜಾನಿಸಿದಂ ॥ ೯೩ ॥

**ಟೀಕೆ ॥** ವರ – ಶ್ರೇಷ್ಠವಾದ, ಷಟ್ತ್ರಿಂಶತ್ – ೩೬ ಆದ – ತತ್ವ ವ್ಯಾವಹಾರಿಕ ಸತ್ಯ ವಸ್ತುಗಳ, ಉಪರಿ – ಮೇಲೆ, ಗತನಂ – ತಿಳಿಯಲ್ಪಟ್ಟವನಾದ, ಅವಿದ್ಯೆ ಪೊಗದ – ಮೂಲಾಜ್ಞಾನವು ಪ್ರವೇಶಿಸದ ಅಥವಾ ಜೀವಾವರಣವಾಗದ, ಅವಿದ್ಯೋಪಾಧಿಗೆ ಶಿಲುಕದ, ಶುದ್ಧಾತ್ಮನಂ – ಶುದ್ಧ ಚೈತನ್ಯನಾದ, ಅಕ್ಷರನಂ – ನಾಶವಿಲ್ಲದ, ಅನುಪಮನಂ – ಸಮಾನವಿಲ್ಲದೆ, ಉರುತರ – ಅತ್ಯಧಿಕವಾದ, ಚಿತ್ – ಜ್ಞಾನವಾದ, ಅಖಂಡರೂಪನಂ – ಅಪರಿಚ್ಛಿನ್ನಸ್ವರೂಪನಾದ, ಅಭವನಂ – ಜನನಾದ್ಯುಪಾಧಿಗಳಿಲ್ಲದ ಶಿವನನ್ನು, ಜಾನಿಸಿದಂ – ಧ್ಯಾನಿಸಿದನು. ಸ್ವಭಾವೋಕ್ತ್ಯಲಂಕಾರಂ ॥ ನಿಗಮಾಗಮೋಕ್ತಮಾಗಿ ಶಿವತತ್ವವು ಬಣ್ಣಿಸಲ್ಪಡುವುದು. ಇದೇ ಆಶ್ವಾಸದ ೨೨ನೆಯ ಪದ್ಯದ ಅರ್ಥದಲ್ಲಿ ತತ್ವವಿವರಣಂ ಮಾಡಲ್ಪಟ್ಟಿರ್ಪುದು. ॥ ೯೩

ಕಂ॥ ನೆಗೆದ ಪುಳಕಾಂಕುರದ ನೆರೆ ।
ಮುಗುಳ್ದಕ್ಷಿಯ ಮಿಡುಕದಂಗದಿಳಿದೇರದ ನೆ ॥
ಟ್ಟಗೆ ನಿಂದಸೂಯ ಸುಳಿಯದ ।
ಬಗೆಯ ಪೊಡರ್ಪೆಸೆಯೆ ತಾಪಸಂ ತಪಮಿರ್ದಂ ॥ ೯೪ ॥

**ಟೀಕ ॥** ನೆಗೆದ ಪುಳಕಾಂಕುರದ – ಎದ್ದ ರೋಮಾಂಚವುಳ್ಳ, ನೆರೆಮುಗುಳ್ದಕ್ಷಿಯ – ಪೂರ್ಣವಾಗಿ ಮುಚ್ಚಿದ ಕಣ್ಣುಗಳುಳ್ಳ, ಮಿಡುಕದಂಗದ – ಚಲಿಸದ ಅವಯವಗಳುಳ್ಳ, ಇಳಿದು ಏರದ – ತಗ್ಗಿ ಹೆಚ್ಚದ, ನೆಟ್ಟಗೆ ನಿಂದ – ಋಜುವಾಗಿರುವ, ಅಸೂಯ ಸುಳಿಯದ – ಹೊಟ್ಟೆಕಿಚ್ಚಿಲ್ಲದ, ಬಗೆಯ – ಭಾವದ, ಪೊಡರ್ಪು – ಅತಿಶಯವು, ಎಸೆಯೆ – ಶೋಭಿಸಲು, ತಾಪಸಂ – ಮುನಿಯು, ತಪಮಿರ್ದಂ – ತಪವಂಗೈಯುತಿದ್ದನು.

ತಾ ॥ ತಪೋನಿಷ್ಠೆಯ ಕುರುಹುಗಳು ವರ್ಣಿಸಲ್ಪಟ್ಟಿವೆ (ಸ್ವಭಾವೋಕ್ತಿ)

ಕಂ॥ ಪೊರಗಣ ಮಾಯಾಭ್ರಮೆಯಂ ।
ಪರಿದಿಕ್ಕಿ ಮನೋಬ್ಜಮಂಡಲತ್ರಯದೆಡೆಯೊಳ್ ॥
ಮಿರುಗುವ ಕರೆಮರೆಯಿಲ್ಲದ ।
ಕುರುಪೊಂದದ ಸೂಕ್ಷ್ಮರೂಪನಂ ಜಾನಿಸಿದಂ ॥ ೯೫ ॥

**ಟೀಕ ॥** ಪೊರಗಣ – ಹೊರಗಿನ, ಮಾಯಾ – ಅಜ್ಞಾನಕಲ್ಪಿತವಾದ, ಭ್ರಮೆಯಂ – ದೃಶ್ಯಭೇದ ಭ್ರಾಂತಿಯನ್ನು, ಪದಿದಿಕ್ಕಿ – ಹರಿದು ಬಿಸುಟು, ಮನೋಬ್ಜ – ಹೃದಯಕಮಲದ, ಮಂಡಲತ್ರಯದ – ಮೂರು ಬಿಂಬಗಳ, ಎಡೆಯೋಳ್ – ಬಳಿಯಲ್ಲಿ, ಮಿರುಗುವ – ಬೆಳಗುತ್ತಿರುವ, ಕರೆಮರೆಯಿಲ್ಲದ – ಕಪ್ಪುಮರೆಯಿಲ್ಲದ (ಅಜ್ಞಾನಾವರಣ ವಿಲ್ಲದ), ಕುರುಪೊಂದದ – ವ್ಯಾವರ್ತಕ ಗುಣಲಕ್ಷಣವಂ ಪಡೆಯದ (ನಿರ್ವಿಶೇಷ ಚಿನ್ಮಾತ್ರನಾದ), ಸೂಕ್ಷ್ಮರೂಪನಂ – ಇಂದ್ರಿಯಗಳಿಗೆ ಅಗೋಚರವಾದ ಸ್ವರೂಪವುಳ್ಳ ಆತ್ಮವನ್ನು, ಜಾನಿಸಿದಂ – ಧ್ಯಾನಿಸಿದನು, ಶಿವಯೋಗಿಗಳ ಧ್ಯಾನಧ್ಯೇಯಗಳ ಬಗೆಯು ಹೇಳಲ್ಪಟ್ಟಿದೆ ॥ ೯೫ ॥

ಚ॥ ದಶವಿಧನಾದಮಂ ಪದೆದು ಕೇಳ್ವ ಸಮುಜ್ವಲ ಬಿಂದುತೇಜಮಂ ।
ಸ್ವಶುಭಸುದಕ್ಷಿಯಂ ಬಿಡದೆ ನೋಳ್ಪ ವಿಕಾಸಿ ಮನೋಬ್ಜ ಗಂಧಮಂ ॥
ಕುಶಲದೆ ಕೂರ್ತು ವಾಸಿಪ ಮಹಾಸುಖಸಂಶ್ರಯ ಮಧ್ಯನಾಡಿಕಾ ।
ವಿಶದಮೃತಪ್ರವಾಹಮನೆ ಪೀರ್ವ ವಿಳಾಸಮಳುಂಬಮಾತನೋಳ್ ॥

**ಟೀಕ ॥** ದಶವಿಧ – ಹತ್ತು ಬಗೆಯುಳ್ಳ, ನಾದಮಂ – ದಹರಾಭಿವ್ಯಕ್ತ ಧ್ವನಿಯನ್ನು, ಪದೆದು – ತಿಳಿದು, ಕೇಳ್ವ – ಕೇಳುತ್ತಿರುವ, ಮತ್ತು ಸಮುಜ್ವಲ – ವಿಶೇಷವಾಗಿ ಹೊಳೆಯುವ ಬಿಂದು, ಮಾಯೋಪಾಧಿಕವಾದ – ಚಿದ್ಬಿಂದು ವಸ್ತುವಿನ (ಕೃಷ್ಣಪಿಂಗಳ ಪುರುಷತತ್ವದ), ತೇಜಮಂ – ಬೆಳಕನ್ನು, ಸ್ವ – ತನ್ನ, ಶುಭ – ಶಾಂತವಾದ, ಚಿದಕ್ಷಿಯಿಂ – ಪ್ರಜ್ಞಾನೇತ್ರದಿಂದ, ಬಿಡದೆ – ಅವಿಚ್ಛಿನ್ನವಾಗಿ, ನೋಳ್ಪ – ನೋಡುತ್ತಿರುವ, ಮತ್ತು ಮನೋಬ್ಜಗಂಧಮಂ – ಹೃದಯಕಮಲದ ವಾಸನೆಯನ್ನು, ಕುಶಲದೆ – ಕ್ಷೇಮದಿಂದ, ಕೂರ್ತು – ಲಕ್ಷಿಸಿ, ವಾಸಿಪ – ಮೂಸಿನೋಡುವ ಮತ್ತು, ಮಹಾಸುಖಸಂಶ್ರಯ – ಅತಿಶಯಾನಂದಕ್ಕೆಡೆಯಾದ, ಮಧ್ಯನಾಡಿಕಾ – ನಡುವಣ ನರವೆನಿಸುವ ಸುಷುಮ್ನೆಯಿಂದ, ವಿಶತ್ – ಹೊರಡುತ್ತಿರುವ, ಅಮೃತಪ್ರವಾಹಮನೆ – ಸುಧಾರಸದ ಹೊನಲನ್ನು, ಪೀರ್ವ – ಹೀರುವ, ವಿಲಾಸಂ – ವಿನೋದವು, ಆತನೋಳ್ – ಆ ತಪಸ್ವಿಯಲ್ಲಿ, ಅಳುಂಬಂ – ಅಲುಪ್ತವು – ಕೊರತೆಯಿಲ್ಲದೆ ಇತ್ತು.

**ತಾ ॥** ನಾದಾನುಸಂಧಾನ, ಬಿಂದುಸಾಕ್ಷಾತ್ಕಾರ, ಹೃದಯವಾಸನಾತೃಪ್ತಿ, ಸುಷುಮ್ನಾ–ಮೃತಸ್ವಾದನಗಳೆಂಬ ಯೋಗಲಕ್ಷಣಗಳು ಆತನಲ್ಲಿ ಕಡಮೆಯಿಲ್ಲದೆ ಇರುವವು ॥ ೯೬ ॥

ಕಂ॥ ಜ್ಞಾತೃ ಜ್ಞಾನ ಜ್ಞೇಯಕ ।
ತೀತನನಾದ್ಯಂತಶೂನ್ಯನಂ ನಿರಘಪರಂ ॥
ಜ್ಯೋತಿಸ್ವರೂಪನಂ ಪ್ರ ।
ಖ್ಯಾತ ಚಿದಾನಂದರೂಪನಂ ಚಿಂತಿಸಿದಂ ॥ ೯೭ ॥

**ಟೀಕ ॥** ಜ್ಞಾತೃ – ಅರಿತುಕೊಳ್ಳುವವನು, ಜ್ಞಾನ – ಅರುಹು, ಜ್ಞೇಯಕೆ – ಅರುಹಲ್ಪಡುವದು ಎಂಬ ತ್ರಿಪುಟಿಗೆ, ಅತೀತನಂ – ಮಿಂಚಿದವನಾದ, ಆದ್ಯಂತಶೂನ್ಯನಂ – ಮೊದಲುಕೊನೆಯಿಲ್ಲದವನಾದ, ನಿರಘ – ಪಾಪವಿಲ್ಲದ, ಪರಂ – ಉತ್ಕೃಷ್ಟವಾದ, ಜ್ಯೋತಿಸ್ವರೂಪನಂ – ಪ್ರಕಾಶಾತ್ಮನಾದ, ಪ್ರಖ್ಯಾತ – ಪ್ರಸಿದ್ಧವಾದ, ಚಿದಾನಂದರೂಪಂ – ಜ್ಞಾನಸುಖಕಾರಕನಾದ, ಆತ್ಮನನ್ನು ಚಿಂತಿಸಿದನು, ನಿತ್ಯವಾದ ಚಿದಾನಂದ ಸ್ವರೂಪವೆನಿಸುವ ಆತ್ಮಸ್ವರೂಪವು ಸತ್ಯವಾದ್ದರಿಂದ ತ್ರಿಪುಟಿಗೊಳಗಾದದ್ದಲ್ಲವೆಂದು ಮನನಂಗೈದನು ॥ ೯೭ ॥

ಚ ॥ ನೆನೆದನನಂತತತ್ವಮಯನಂ ಪರಮಾತ್ಮನನಪ್ರಮೇಯನಂ ।
ಮುನಿಜನ ಮಾನಸಾಮಲಸರೋವರ ಹಂಸನನದ್ವಿತೀಯನಂ ॥
ಘನನಿಗಮಾಂತ ಮೃಗ್ಯಯನನಾಮಯನಂಚಿದ ಚಿತ್ಪ್ರಪಂಚರಂ
ಜನನನವಂತುರೀಯನನಖಂಡನಿಜೋನ್ನತ ಚಿತ್ಪ್ರಕಾಶನಂ ॥ ೯೮ ॥

**ಟೀಕ ॥** ಅನಂತ ತತ್ವಮಯನಂ – ಬಹುತತ್ವಪ್ರಚುರನಾದ, ಪರಿಣಾಮ್ಯುವಾದ ನತ್ವಪಕ್ಷದಲ್ಲು ವಿಶಿಷ್ಟಾದ್ವೈತ ಮತರೀತಿಯಿಂ ತತ್ವಗಳ ವಿಕಾರವಾದ ಸ್ಥೂಲಸೂಕ್ಷ್ಮ ಚಿದಚಿಚ್ಛರೀರಕನಾದ ಶುದ್ಧಾದ್ವೈತಮತರೀತಿಯಿಂ ತತ್ವಗಳಿಗೆ ಅಧಿಷ್ಠಾನಮಾದ ಶುದ್ಧ ಶೈವಮತರೀತಿಯಿಂ ನಿತ್ಯಸತ್ಯಸ್ವರೂಪಮಾದ, ಪರಮಾತ್ಮನ – ಈಶ್ವರರೂಪನಾದ, ಅದ್ವೈತಮತಪ್ರಕಾರಂ, ಶುದ್ಧಚಿನ್ಮಾತ್ರನಾದ, ಅಪ್ರಮೇಯನಂ – ಯಥಾರ್ಥವಾದ ವೃತ್ತಿಜ್ಞಾನದಿಂದ ಸಾಕ್ಷಾತ್ಕರಿಸಲು ಯೋಗ್ಯನಲ್ಲದೆ, ಮುನಿಜನ– ಋಷಿಗಳ, ಮಾನಸ – ಹೃದಯವೆಂಬ, ಅಮಲ – ಅಕಲ್ಮಷವಾದ ಸರೋವರ ಶ್ರೇಷ್ಠವಾದ ಕೊಳಕ್ಕೆ, ಹಂಸನಂ – ಅಂಚೆವಕ್ಕಿಯಂತೆ ಅಲಂಕಾರಪ್ರಾಯನಾಗಿ ಸಂಗ್ರಾಹಿಯೆನಿಸಿದ, ಅದ್ವಿತೀಯನಂ – ಎರಡನೆಯ ವಸ್ತುವಿಲ್ಲದ ಶೈವಮತರೀತಿಯಿಂ, ಸಮಾನಾಧಿಕರಹಿತನಾದ, ಅದ್ವೈತಮತಪ್ರಕಾರಂ, ಸಜಾತೀಯ, ವಿಜಾತೀಯ ಸ್ವಗತಭೇದಶೂನ್ಯನಾದ ಮತ್ತು ಘನ – ಸಾಂದ್ರವಾದ, ನಿಗಮಾಂತ – ಉಪನಿಷತ್ತುಗಳಿಂದ, ಮೃಗ್ಯನಂ – ಹುಡುಕಲ್ಪಡತಕ್ಕವ ನಾದ, ಅನಾಮಯನು – ಭವರೋಗವಿಲ್ಲದವನಾದ, ಚಿತ್ – ಜ್ಞಾನಾತ್ಮರು, ಅಚಿತ್ ಗಗನವಾಯ್ವಾದಿ ಜಡವಸ್ತುಗಳು ಎಂಬ, ಪ್ರಪಂಚ – ಚರಾಚರ ಜಗತ್ತಿಗೆ, ರಂಜನನಂ ಸತ್ತಾರೂಪನಾಗಿ – ತೋರ್ಕೆಗಾಧಾರವಾಗಿರುವ, ತುರೀಯನಂ – ಕಡೆಯವನಾದ, ಎಂದರೆ ಪ್ರಣವದ ಅರ್ಧಮಾತ್ರಗೆ ಅರ್ಥವಾದ ಅಥವಾ ತ್ರಿಮೂರ್ತಿಗಳಿಗೆ ಕಾರಣವಾದ, ಅಖಂಡ – ಅಪರಿಚ್ಛಿನ್ನವಾದ, ನಿಜ – ತನ್ನ, ಉನ್ನತ – ಉತ್ತಮವಾದ, ಚಿತ್ಪ್ರಕಾಶನಂ – ಜ್ಞಾನದ ಬೆಳಕುಳ್ಳ ಶಿವನು, ಅವಂ – ಆತಪಸ್ವಿಯು, ನೆನೆದಂ – ನೆನೆಪುಗೊಂಡನು.

**ತಾ ॥** ಮನನದಿಂದ ಪರಮಾತ್ಮನ ನಿಧಿಧ್ಯಾಸನಂಗೈಯ್ದನು. ಶಿವಸ್ವರೂಪವು ವರ್ಣಿಸಲ್ಪಟ್ಟಿದೆ ॥ ೯೮ ॥

ಮ॥ ತ್ರಿದಿನಕ್ಕೊರ್ಮೆ ಫಲಾದನಂತಿಗಳ್ದುದಾತಂಗೊಂದುತಿಂಗಳ್ ದ್ವಿಮಾ ।
ಸದೊಳಾರುಂದಿನಕೋರ್ಮೆ ತತ್ಫಳಚಯಾಹಾರಂ ತ್ರಿಮಾಸಂ ಬಳಿ ॥
ಕ್ಕೊದವಿರ್ದತ್ತು ರುಕಂದಮೂಲ ಸುರಸಂ ನಾಲ್ವಿಗಳೋಳ್ಜೀರ್ಣಪ ।
ರ್ಣದ ಸಂಸೇವನೆ ಮಾಸಪಂಚಕದೊಳಾಯ್ತಾತಂಗೆ ವಾತಾಶನಂ ॥

**ಟೀಕ ॥** ಆತಂಗೆ – ಆ ತಪಸ್ವಿಗೆ, ಒಂದು ತಿಂಗಳ್–ಪ್ರಥಮ ಮಾಸದಲ್ಲಿ, ತ್ರಿದಿನಕೊಮ್ಮೆ – ಮೂರು ದಿನಗಳಿಗೊಂದು ಸಲ, ಫಲಾದನಂ – ಹಣ್ಣುಗಳನ್ನು ಮೆಲ್ಲುವಿಕೆಯು, ನೆಗಳ್ದು – ಘಟಿಸಿತು. ದ್ವಿಮಾಸದೊಳು – ಎರಡು ತಿಂಗಳಲ್ಲಿ, ಆರು ದಿನಕೊಮ್ಮೆ – ಆರು ದಿನಗಳಿಗೊಂದು ಸಲ, ತತ್ಫಲಚಯಾಹಾರಂ – ಆ ಹಣ್ಣುಗಳ ಗುಂಪಿನೂಟವು, ಬಳಿಕ – ಆಮೇಲೆ, ತ್ರಿಮಾಸಂ – ಮೂರು ತಿಂಗಳಲ್ಲಿ, ಉರುಕಂದ ಮೂಲ – ದೊಡ್ಡ ಬೇರುಗಳ, ಸುರಸಂ – ಒಳ್ಳೆಯ ದ್ರವವು, ಒದಮಿರ್ದತ್ತು– ಅನುಕೂಲಿಸಿತು, ನಾಲ್ದಿಂಗಳೋಳ್ – ಬಳಿಕ ನಾಲ್ಕು ತಿಂಗಳಲ್ಲಿ, ಜೀರ್ಣಪರ್ಣದ – ತರಗೆಲೆಯ, ಸಂಸೇವನೆ – ಭಕ್ಷಣವು,

ಮಾಸಪಂಚಕದೋಳ್ – ಐದು ತಿಂಗಳಲ್ಲಿ, ಆತಂಗೆ – ಆತನಿಗೆ, ವಾತಾಶನಂ – ವಾಯ್ವಾಹಾರವು.

ತಾ ॥ ೧ ತಿಂಗಳಲ್ಲಿ ಮೂರುದಿನಕ್ಕೊಂದುಸಲ ಫಲಾಹಾರವು. ೨ ತಿಂಗಳಲ್ಲಿ ೬ ದಿನಕ್ಕೊಂದುಸಲ ಫಲಾಹಾರವು. ೩ನೆಯ ತಿಂಗಳಲ್ಲಿ ವಾಯುಭಕ್ಷಣ. ೪ನೆಯ ತಿಂಗಳಲ್ಲಿ ಜೀರ್ಣಪರ್ಣಾಹಾರಂ. ೫ನೆಯ ತಿಂಗಳಲ್ಲಿ ಕಂದಮೂಲ ಭಕ್ಷಣಂ, ಹೀಗೆ ಕಾಲಕಳಿಯುತೆಂದು ಕೆಲವರೆನ್ನುವರು. ಒಂದರಲ್ಲಿ ತ್ರಿದಿನಕ್ಕೊರ್ಮೆ ಫಲಾದನಂ, ಬಳಿಕೊಂದುತಿಂಗಳಲ್ಲಿ ಆರುದಿನಕೊಮ್ಮೆ ಫಲಾಹಾರಂ. ಬಳಿಕ ಮೂರು ತಿಂಗಳಲ್ಲಿ ಕಂದಕಮೂಲ ರಸ ಸ್ವಾದನಂ. ಬಳಿಕ ನಾಲ್ಕು ತಿಂಗಳಲ್ಲಿ ಜೀರ್ಣಪರ್ಣಾಹಾರಂ. ಬಳಿಕ ೫ ತಿಂಗಳಲ್ಲಿ ವಾತಾಹಾರಂ. ಈ ಮೇರೆ ೧೪ ತಿಂಗಳು ಕಳದವೆಂದು ಕೆಲವರನ್ನುವರು. ಹಾಗಾದರೆ ಭಾರತೋಕ್ತವಾದ ಅರಣ್ಯವಾಸದ ೧೨ ವರುಷಗಳಲ್ಲಿ ಕಾಲವಿಭಾಗವು ಸರಿಯಾಗುವುದಿಲ್ಲವೆಂದು ಕೆಲವರು ಶಂಕಿಸುವರು. "ಸಂವತ್ಸರಮೇತದ್ವ್ರತಂಚರೇತ್ ದ್ವೌವಾಮಾಸೌ ನಿಯಮಸ್ಸಮಾಸೇನ" ಎಂದು ವೇದಗಳಲ್ಲಿ ಹೇಳಲ್ಪಟ್ಟಿರುವ ಪ್ರಕಾರಂ ಅರ್ಜುನ ಶಿವಯೋಗ ಸಮಯವು ೧೪ ತಿಂಗಳೆಂದು ಸ್ಕಾಂದೋಕ್ತವಾಗಿದೆ. ಸನತ್ಕುಮಾರಸಂಹಿತೆಯಲ್ಲಿಯೇ ಐಂದ್ರಶಿವಾಧನನಿರೂಪಣ ಪ್ರಕರಣದಲ್ಲಿ ಇಂದ್ರನಿಗೂ ಇಂದ್ರಾಶಭವರಿಗೂ ತಪಸ್ಸಿದ್ಧಿಕಾಲವರು. ಇಂದ್ರಸಂಖ್ಯೆಯಾದ ೧೪ ತಿಂಗಳೆಂದು ಹೇಳಲ್ಪಟ್ಟಿದೆ. ಕಾಲಸಂಖ್ಯಾ ವಿಚಾರದಲ್ಲಿ ಹೀಗೆ ಅಂತರ್ವಾಣಿ ವಿಕಲ್ಪಗಳಿರುವುದೆಂದು ಸೂಚಿಸಲೋಸುಗ ಮಹಾಕವಿಯಾದ ಷಡಕ್ಷರದೇವನು ಉಭಯವಿಧವಾಗಿಯೂ ಅರ್ಥಸ್ಫೂರ್ತಿಯಾಗುವಂತೆ ಹೇಳಿರುವೆನು. ॥ ೯೯ ॥

ಚ ॥ ಸ್ಥಿರತರಭಕ್ತಿಯೆಂಬ ಸುಧೆಯಂ ಸವಿದುರ್ಬುತು ಕಂದ ಕುಂದನಾ ।
ಳ್ದಿರದೆಸೆವಂಗಮುರ್ದ್ವಿದ ಲಸತ್ಪುಳಕಾಂಕುರಮುಜ್ವಳಂ ಮುಖಾಂ ॥
ಬುರುಹಮರಲ್ದ ಸತ್ವಮಯಮಾನಸಮೊಪ್ಪಿರೆ ಚಿತ್ಸುಖಾಬ್ಧಿ ಯೋ ।
ಳ್ಕರಮವಗಾಹಮಿರ್ದನವನೀಶ್ವರಪಾದಸರೋಜಷಟ್ಪದಂ ॥ ೧೦೦ ॥

**ಟೀಕ ॥** ಸ್ಥಿರತರ – ಅತಿದೃಢವಾದ, ಭಕ್ತಿಯೆಂಬ ಸುಧೆಯಂ – ಅಮೃತವನ್ನು, ಸವಿದು – ಉಂಡು, ಉರ್ಬುತೆ – ಉಬ್ಬುತ್ತ, ಕಂದು – ಭಾಡುವಿಕೆಯನ್ನು, ಕುಂದಂ – ಕೊರತೆಯನ್ನು, ಆಳ್ದಿರದೆ – ತಾಳಿಯಿರದೆ, ಎಸೆವ – ಶೋಭಿಸುವ, ಪುಳಕಾಂಕುರಂ – ನಿಡುಗೂದಲೂ, ಉಜ್ವಲ – ಹೊಳೆಯುತ್ತಿರುವ, ಮುಖಾಂಬುರುಹಂ – ಮೊಗದಾವರೆಯೂ, ಅರಲ್ದ – ವಿಕಸಿತಮಾದ, ಸತ್ವಮಯ – ಸತ್ವಗುಣಪ್ರಚುರವಾದ, ಮಾನಸಂ – ಹೃದಯವು, ಒಪ್ಪಿ – ಇರೆ, ಈಶ್ವರಪಾದಸರೋಜಷಟ್ಪದಂ – ಶಿವಚರಣ ವೆಂಗತಾವರೆಗೆ ತುಂಬಿಯಾಗಿರುವ, ಅವಂ – ಆ ಮುನಿಯು, ಚಿತ್ಸುಖಾಬ್ಧಿಯೋಳ್ – ಜ್ಞಾನಾನಂದ ಸಮುದ್ರದಲ್ಲಿ, ಕರಂ – ಅತಿಶಯವಾಗಿ, ಅವಗಾಹಮಿರ್ದಂ – ಮುಳುಗಿರ್ದನು.

**ತಾ ॥** ಭಕ್ತಿಯಿಂದ ಶಿವನಂ ಧ್ಯಾನಿಸುತ್ತ ಸುಖವಾಗಿರ್ದನು ॥ ೧೦೦ ॥

**ಮ ॥ ಸ್ರ ॥** ತನುವೃತ್ತಂನೇತ್ರದೋಳ್ನೇತ್ರದ ಬಗೆ ಮನದೊಳ್ತನ್ನಂ
ಬುದ್ಧಿಯೋಳ್ಬುದ್ಧಿ ನಿತಾಂತಂ ಚಿತ್ತದೊಳ್ಚಿತ್ತದನಿಲವದಹಂಕಾರದೋಳ್ಸಂದಹಂಕಾ।
ರನಿಯೋಗಂ ಜೀವನೆಳ್ಜೀವನೆ ಪರಮನೊಳಾಳ್ದೈಕ್ಯ ಮಂ ನಿಲ್ವಿನಂ ಬೇ ।
ರೆನಿಪಂದಂ ಪೊಂದದಾನಂದದ ನಿಧಿಯೆನಿಸಲ್ಸಾಲ್ವನಿರ್ದಂ ಮುನೀಂದ್ರಂ ॥

**ಟೀಕೆ ॥** ತನುವೃತ್ತಂ – ಶರೀರದ ಚರಿತವು, ನೇತ್ರದೋಳ್ – ಕಣ್ಣಿನಲ್ಲಿಯೂ, ನೇತ್ರದ ಬಗೆ – ದೃಷ್ಟಿ ಪ್ರಕಾರವು, ಮನದೋಳ್ – ಸಂಶಯಾತ್ಮಕಾತಃಕರಣದಲ್ಲಿಯು, ಮನಂ, ಸಂಶಯವೃತ್ತಿ ಬುಧ್ಧಿಯೋಳ್ – ನಿಶ್ಚಯವೃತ್ತಿಯಲ್ಲಿಯೂ ಬುದ್ಧಿ ನಿಶ್ಚಯವಾದ ಅರಿಮೆ, ನಿತಾಂತಂ – ಅಧಿಕವಾಗಿ, ಚಿತ್ತದೋಳ್ –ಸಂಕಲ್ಪ ವಿಕಲ್ಪವಾದ ಚಿತ್ತದಲ್ಲಿಯೂ, ಚಿತ್ತದ ನಿಲವು – ಸ್ಥಿತಿಯು, ಅಹಂಕಾರದೋಳ್ – ಅಭಿಮಾನ ವೃತ್ತಿಯಲ್ಲಿಯು, ಸಂದ – ದೇಹಾದಿಗಳಲ್ಲಿ ತಾನೆಂದು, ಅಧ್ಯಾಸ್ವರೂಪದಿಂದ ಸಲುವಳಿಗೆ ಬಂದು, ಅಹಂಕಾರ ನಿಯೋಗಂ – ಅಭಿಮಾನ ಸಂಬಂಧವು, ಜೀವನೋಳ್ ಅವಿದ್ಯೊಪಾಧಿಯೊಳು – ಚಿದಾಭಾಸನಾಗಿರ್ಪ, ಜೀವಾತ್ಮನಲ್ಲಿಯೂ – ಜೀವನೆ, ಜೀವಸಾಕ್ಷಿ – ಚೈತನ್ಯವೆ, ಪರಮನೊಳು – ಅಂತರ್ಯಾಮಿಯಾದ ಪರಮಾತ್ಮಚೈತನ್ಯದಲ್ಲಿಯ, ಐಕ್ಯಮಂ – ಏಕೀಭಾವವನ್ನು, ಆಳ್ದು – ಪಡೆದು, ನಿಲ್ವನಂ – ನಿಲ್ಲುವಂತ, ಬೇರೆನಿಪ – ಬೇರೆಯೆನ್ನುವ, ಅಂದಂ – ಭೇದವೃತ್ತಿಯು, ಪೊಂದದ – ಹೊಂದದ, ಆನಂದದ – ಅದ್ವೈತಸುಖದ, ನಿಧಿ – ಕಣಿ, ಎನಿಸಲ್ – ಎನ್ನಿಸಿಕೊಳ್ಳುವದಕ್ಕೆ, ಸಾಲ್ವಂ – ಸಾಕಾದವನಾಗಿ, ಮುನೀಂದ್ರಂ – ಆ ಋಷಿಶ್ರೇಷ್ಠನು. ಇರ್ದಂ – ಇದ್ದನು.

**ತಾ ॥** ಸೃಷ್ಟಿ ಕ್ರಮಕ್ಕೆ ವ್ಯತಿರಿಕ್ತವಾದ ಲಯಕ್ರಮದಿಂದ ಶರೀರದ ಬಾಹ್ಯ ವ್ಯಾಪಾರಾದಿಗಳನ್ನು ಲಕ್ಷ್ಯಾನುಸಂಧಾನದಲ್ಲಿ ಅಂತರ್ಮುಖಿಗೊಳಿಸಿ ವಿಲಯಮಂ ಪೊಂದಿಸುತ್ತ ತಾನೆ ಕಡಿಗೆ ಶಿವಸ್ವರೂಪಮಾಗಿ ಉಳಿದಿರ್ಪ ಅದ್ವೈತಾನಂ ನಿರ್ವಿಕಲ್ಪಕಸಮಾಧಿ ನಿಷ್ಟನಾಗಿರ್ದನೆಂದು ಭಾವವು. ಮುಕ್ತಪದಗ್ರಸ್ತವೆಂಬ ಶಬ್ದಾಲಂಕಾರವು ॥ ೧೦೧ ॥

(ಮುಂದುವರಿಯುವುದು)

ಆಚಾರ ಗುರುಸ್ಥಲ, ಅನುಭಾವ ಲಿಂಗಸ್ಥಲ
ಅವಧಾನ ಅರ್ಪಿತಸ್ಥಲ, ಪರಿಣಾಮ ಪ್ರಸಾದಿಸ್ಥಲ
ಸಮಾಧಾನ ಶರಣಸ್ಥಲ, ಅರಿವು ನಿಃಪತಿಯಾಗಿ ತೆರಹಿಲ್ಲದ
ನಿಜದಲ್ಲಿಲಿಂಗೈಕ್ಯವು, ಕೂಡಲಚೆನ್ನಸಂಗಮದೇವಾ

**ಚನ್ನಬಸವಣ್ಣ**

# ತಿರುವಳ್ಳುವರ್ ಮತ್ತು ಸರ್ವಜ್ಞರ ಅನುಭಾವ

**ಡಾ. ಪಿ. ಮಣಿ**

(ಮುಂದುವರಿದಿದೆ)

ಗುರುವನ್ನು ಕುರಿತು ಸರ್ವಜ್ಞ ಹೇಳುವುದು ಹೀಗೆ :

ಊರಿಂಗೆ ದಾರಿಯನು ಆರು ತೋರಿದಡೇನು ।
ಸಾರಾಯದ ನಿಜವ ತೋರುವ ಗುರುವು ತಾ– ।
ನಾರಾದಡೇನು ಸರ್ವಜ್ಞ ॥

ಗುರುವು ಹೇಗಿರಬೇಕು ಎಂದು ಇನ್ನೊಂದು ವಚನದಲ್ಲಿ ಹೇಳಿದ್ದಾನೆ. ಗುರುವು ಯಾವ ರೂಪದಲ್ಲಿ ಕಾಣಿಸುತ್ತಾನೆ ಎಂಬ ಪ್ರಶ್ನೆಗೆ ಉತ್ತರ ಪ್ರಾಣರೂಪ ಎನ್ನುತ್ತಾನೆ. ಈ ಪ್ರಾಣ ಜೀವಂತವಾಗಿ ಇರುವುದಷ್ಟೇ ಗೊತ್ತು. ಆದರೆ ಅದು ಯಾರ ಕಣ್ಣಿಗೂ ಕಾಣಿಸದ ಅಗೋಚರ ಶಕ್ತಿ. ಗುರುವಿನ ಬೆಲೆಯನ್ನೂ ಹೀಗೆಯೇ ಅರಿತು ನಡೆಯಬೇಕು.

ಪರತತ್ವ ತನ್ನೊಳಗೆ ಎರವಿಲ್ಲದಿರುತಿರ್ದು ।
ಪರದೇಶಿಯಂತೆ ಇರುತಿಪ್ಪ ಯೋಗಿಯನು ।
ಪರಮ ಗುರುವೆಂಬೆ ಸರ್ವಜ್ಞ ॥

ಅಂದರೆ, ಎಲ್ಲಾ ತತ್ವಗಳನ್ನು ತನ್ನೊಳಗೆ ಆವಿರ್ಭವಿಸಿಕೊಂಡೂ ತನಗೆ ಏನೂ ಗೊತ್ತಿಲ್ಲದ ಪರದೇಶಿಯಂತೆ ತನ್ನಷ್ಟಕ್ಕೆ ತಾನೇ ಇದ್ದುಬಿಡುವವನು ಪರಮಗುರು. ಇಂತಹ ಗುರುವು ಎಂದಿಗೂ ಹುಸಿಯುವವನಾಗಿರಬಾರದು, ವಿಷಯಸುಖಲೋಲುಪನಾಗಿರಬಾರದು, ಪರರ ವಸ್ತುಗಳಿಗೆ ಆಸೆ ಪಡುವವನಾಗಿರಬಾರದು. ಈ ಮೂರು ಅವಗುಣಗಳು ಗುರುವಿನಲ್ಲಿ ಇರಬಾರದು ಎನ್ನುತ್ತಾನೆ ಸರ್ವಜ್ಞ. ಒಂದು ವೇಳೆ ಗುರುವಿನಲ್ಲಿ ಆ ಲಕ್ಷಣಗಳು ಉಂಟಾದರೆ ಧರ್ಮದ ದೀವಿಗೆ ಮಾಸಿಹೋಗುತ್ತದೆ. ಅವನ ವಿದ್ಯಾರ್ಥಿಗಳು ಧರ್ಮಮಾರ್ಗದ ಪಯಣಿಗರಾಗಲು ಸಾಧ್ಯವಿಲ್ಲ. ಗುರುಕರುಣೆ ಸರ್ವ ಭಕ್ತರಿಗೂ ಹಿರಿದಾದ ವರ. ಇಂತಹ ಗುರುವಿನಿಂದ ಮೋಕ್ಷಸಿದ್ಧಿ ಪ್ರಾಪ್ತವಾಗುತ್ತದೆ.

ಧರ್ಮದ ಬೆಳಕು ಎಲ್ಲೆಡೆ ಹರಡಬೇಕಾದರೆ ಧಾರ್ಮಿಕ ಆಚರಣೆಗಳು ಮುಖ್ಯವಾಗುತ್ತವೆ. ಈ ಹಿನ್ನೆಲೆಯಲ್ಲಿ ಸರ್ವಜ್ಞ ಷಟ್‌ಸ್ಥಲ ಸಿದ್ಧಾಂತಗಳನ್ನು ನಿರೂಪಿಸಿದ್ದಾನೆ. ಇದರಲ್ಲಿ ಬರುವ ಒಂದು ಪದ್ಯ ಹೀಗಿದೆ:

ಆಗಿಲ್ಲ ಹೋಗಿಲ್ಲ ಮೇಗಿಲ್ಲ ಕೆಳಗಿಲ್ಲ।
ತಾಗಿಲ್ಲ ತಪ್ಪು ತಡೆಯಿಲ್ಲ ಲಿಂಗಕ್ಕೆ।
ದೇಗುಲವೆ ಇಲ್ಲ ಸರ್ವಜ್ಞ ॥

ಎನ್ನುತ್ತಾ ದೈವಕ್ಕೆ ಸ್ಥಾವರರೂಪದ ದೇಗುಲವಿಲ್ಲ ಎಂದಿದ್ದಾನೆ. ಪೂಜೆ ಮುಖ್ಯವಾಗಿ ಮನಸ್ಸನ್ನು ತಲುಪಬೇಕೇ ಹೊರತು ಬಾಹ್ಯ ಆಡಂಬರದ ತೋರಿಕೆ ಆಗಬಾರದು. ಇದನ್ನು ತೆಂಗಿನಕಾಯಿಯ ಒಳಗಿರುವ ತಿಳಿನೀರನ್ನು ಆ ಕಾಯಿ ಇಂಗಿಸಿಕೊಂಡು ಪರಿಪೂರ್ಣ ವಾಗುವ ಪ್ರಕ್ರಿಯೆಗೆ ಹೋಲಿಸಿದ್ದಾನೆ. ಹಿಂದೂ ಧರ್ಮದಲ್ಲಿ ಮುಕ್ಕೋಟಿ ದೇವತೆಗಳ ಪರಿಕಲ್ಪನೆ ಇದೆ. ಪುರಾಣಗಳು ಇದಕ್ಕೆ ಬೆಂಬಲವೀಯುವ ಕಥೆಗಳನ್ನೂ ಹೆಣೆದಿವೆ. ಆದರೆ ಸರ್ವಜ್ಞನ ದೃಷ್ಟಿಯಲ್ಲಿ ದೇವರು ಎಂದರೆ –

ಒಬ್ಬನಲ್ಲದೆ ಜಗಕೆ ಇಬ್ಬರುಂಟೇ ಮತ್ತೆ।
ಒಬ್ಬ ಸರ್ವಜ್ಞ ಕರ್ತನೀ ಜಗಕೆಲ್ಲ।
ಒಬ್ಬನೇ ದೈವ ಸರ್ವಜ್ಞ

ಆ ದೇವ ಈ ದೇವ ಮಾದೇವನೆನಬೇಡ।
ಆ ದೇವರ ದೇವ ಭುವನದ ಪ್ರಾಣಿಗಳಿ–।
ಗಾದವನೆ ದೇವ ಸರ್ವಜ್ಞ॥

ಎಂದು ಹೇಳಿ ಏಕದೇವತಾ ವಾದವನ್ನು ಸರ್ವಜ್ಞ ಮಂಡಿಸಿದ್ದಾನೆ. ಅಲ್ಲದೆ ದೈವವು ಕೇವಲ ಮನುಷ್ಯರಿಗೆ ಮಾತ್ರವಲ್ಲ, ಸಕಲ ಪ್ರಾಣಿಗಳಿಗೂ ಉಂಟು. ಸಕಲ ಜೀವಚರಗಳಿಗೂ ದೈವ ಒಬ್ಬನೇ ಎಂಬ ತಿಳಿವು ಈತನದು. ಇಂತಹ ದೈವವು ಸರ್ವಜ್ಞಾನಿ ಆಗಿರುತ್ತಾನೆ. ಏನನ್ನೇ ಬೇಡುವುದಿದ್ದರೂ ಆತನನ್ನೇ ಬೇಡು ಎಂಬ ಸಲಹೆಯನ್ನು ಸರ್ವಜ್ಞನೀಡಿದ್ದಾನೆ. ಏಕದೇವತಾವಾದವನ್ನು ಮಂಡಿಸುವ ಭರದಲ್ಲಿ ಸರ್ವಜ್ಞ ಅನ್ಯದೈವವನ್ನು ವಿಡಂಭಿಸಿ ಹೀಯಾಳಿಸಿದ್ದಾನೆ. ಬ್ರಹ್ಮ ಮತ್ತು ವಿಷ್ಣುವನ್ನು ಅಸಮರ್ಥರೆಂದು ಬಿಂಬಿಸಿದ್ದಾನೆ. ಶಿವನ ಮಹಿಮೆಯನ್ನು ವರ್ಣಿಸುತಾ, ಈತನೇ ಸರ್ವಕ್ಕೂ ಮೂಲವೆಂದು ಹೇಳಿದ್ದಾನೆ. ಈ ನಡುವೆ ಧರ್ಮಪಾಲಕರಾದ ಭಕ್ತರ ಗುಣ, ಶರಣರ ಸಂಗ, ಭಕ್ತಿಯ ಫಲ, ಜಿತೇಂದ್ರಿಯತ್ವ, ಸೃಷ್ಟಿ ವಿವೇಕ ಮುಂತಾದವುಗಳ ವಿವರಣೆ ಕೊಟ್ಟಿದ್ದಾನೆ. ಪುರಾಣಗಳಲ್ಲಿ ಧರ್ಮದ ಚೌಕಟ್ಟಿನೊಳಗೆ ಪುನರ್ಜನ್ಮದ ಪರಿಕಲ್ಪನೆಯನ್ನು ಚಿತ್ರಿಸಲಾಗಿದೆ. ಆದರೆ ಸರ್ವಜ್ಞನ ದೃಷ್ಟಿಯಲ್ಲಿ ಅಜ್ಞಾನದಿಂದ ಮಾತ್ರ ಪುನರ್ಜನ್ಮ ಪ್ರಾಪ್ತಿ ಎಂಬ ಅರಿವಿದೆ. ಈತನ ಪ್ರಕಾರ ಜ್ಞಾನಿಗೆ ಜನ್ಮಾಂತರವಿಲ್ಲ. ಅಂತೆಯೇ ಅವನಿಗೆ ಬಂಧನ, ಮಾಯೆ, ಚಿಂತೆಗಳ ಭಯವೂ ಇರುವುದಿಲ್ಲ. ಭೂಮಿಯ ಮೇಲೆ ಧರ್ಮ ಸ್ಥಾಪನೆಗೊಳ್ಳಬೇಕಾದರೆ ದಾನವು ಜೀವಂತವಾಗಿರಬೇಕು. ಒಂದು ವಸ್ತುವನ್ನು ದಾನ ಮಾಡುವ ದಾನಿಯೂ ವಿಶೇಷ ಗುಣಲಕ್ಷಣಗಳನ್ನು ಹೊಂದಿರಬೇಕಾಗಿರುತ್ತದೆ. ದಾನಗಳಲ್ಲಿ ಸಮಯೋಚಿತ ದಾನ, ಸೋಪಾಧಿಕ ದಾನ ಎಂಬ ದಾನಭೇದಗಳು ಔಚಿತ್ಯವನ್ನು ಅರಿತು ಕಾರ್ಯ

ನಿರ್ವಹಿಸಬೇಕಾಗುತ್ತದೆ. ಧರ್ಮದ ಹೆಸರಿನಲ್ಲಿ ಲೋಭತ್ವದಿಂದ ಗಳಿಸುವ ಹಣ ಯಾರೇ ಆದರೂ ಅದರಿಂದ ಆಪಾದನೆ ತಪ್ಪಿದ್ದಲ್ಲ. ಈ ವ್ಯವಸ್ಥೆಯೊಳಗೆ ಧರ್ಮದ ತಿಳಿವಿನ ಸಾರಸಂಗ್ರಹವನ್ನು ಕಾಣಬೇಕಾದರೆ ಮನಸ್ಸು ಉಲ್ಲಸಿತವಾಗಿರಬೇಕು. ಅದನ್ನು ಸರ್ವಜ್ಞ ಹೇಳುವುದು ಹೀಗೆ :

ತಂತ್ರಿವಾದ್ಯವು ಲೇಸು ಮಂತ್ರಿಯ ಕೆಳೆ ಲೇಸು ।
ಯಂತ್ರವಾಹಕನ ದಯೆ ಲೇಸು ಜಗದಿ ಸ್ವಾ।
ತಂತ್ರ್ಯವೇ ಲೇಸು ಸರ್ವಜ್ಞ॥

ಅಂದರೆ ಯಾವ ಯಾವ ವೃತ್ತಿ, ಕಾರ್ಯಗಳು ಎಂತಹ ಸಂದರ್ಭದಲ್ಲಾದರೂ ಶ್ರೇಷ್ಠ ಎನಿಸಬಹುದು. ಆದರೆ ಜಗಕ್ಕೆಲ್ಲ ಸ್ವಾತಂತ್ರ್ಯವೇ ಲೇಸು ಎಂದು ಸ್ವಾತಂತ್ರ್ಯದ ಮಹತ್ವವನ್ನು ತಿಳಿಸಿದ್ದಾನೆ. ಯಾವಾಗ ಮನುಷ್ಯನ ಬುದ್ಧಿ ಹಳಿ ತಪ್ಪುತ್ತದೆ ಎಂದರೆ;

ಸರ್ವಜ್ಞನು ನೀತಿಪದ್ಧತಿ, ಧರ್ಮ–ನೀತಿ, ಪಾಪ–ಪುಣ್ಯಗಳ ವಿಚಾರಗಳನ್ನು ಬಹುವಾಗಿ ಚಿತ್ರಿಸಿದ್ದಾನೆ. ಸತ್ಯ, ಸುಳ್ಳು, ಕಳ್ಳತನ, ಅನ್ಯಾಯ, ನರಹತ್ಯೆ, ಕಲಹ, ಕಾಮ, ಪಾತಿವ್ರತ್ಯ, ಲೋಭ, ಗರ್ವ, ವೈರತ್ವಗಳ ಸ್ಥಾನವನ್ನು ವರ್ತಮಾನದಲ್ಲಿ ಬಿಂಬಿಸುವ ಪ್ರಯತ್ನ ಮಾಡಿದ್ದಾನೆ. ಮನುಷ್ಯ ಎಷ್ಟೇ ಧರ್ಮದ ತತ್ವಗಳನ್ನು ಪಾಲಿಸಿದರೂ ವ್ಯವಹಾರನೀತಿ, ನಂಬಿಕೆ, ಪಕ್ಷಪಾತಗಳು ಧರ್ಮದ ಹಾದಿಯನ್ನು ಅವಸಾನದ ಕಡೆಗೆ ಸಾಗಿಸುವುದರಲ್ಲಿ ಎರಡು ಮಾತಿಲ್ಲ. ಸಮಯೋಚಿತ ಮಾತು ಧರ್ಮದ ಚೌಕಟ್ಟನ್ನು ವಿಸ್ತರಿಸಿ ಆವರಿಸಲು ಸಹಕಾರ ಮಾಡುತ್ತದೆ. ಇಲ್ಲೆಲ್ಲ ಧರ್ಮದ ವಿವಿಧ ಮುಖಗಳನ್ನು ಕಾಣುತ್ತೇವೆ. ತಿರುವಳ್ಳುವರ್ ಸಹ ಇದೇ ರೀತಿಯ ತತ್ವಚಿಂತನೆಗಳನ್ನು ಅಭಿವ್ಯಕ್ತಿಸಿದ್ದಾರೆ. ಅವರ ಪ್ರಕಾರ ದೇವರ ಸ್ಥಾನ, ಸ್ಥಾವರವಲ್ಲ, ಬದಲಿಗೆ ಭಕ್ತನ ಹೃದಯ. ದೈವದ ಇರವನ್ನು ಅರಿತವರು ಎಂದಿಗೂ ಅಜ್ಞಾನದ ಅಂಧಕಾರದಲ್ಲಿ ತೊಳಲಾಡುವುದಿಲ್ಲ. ಈ ಸಂಬಂಧ ಬರುವ ಒಂದು ಕುರಳ್ ಹೀಗಿದೆ :

ಅಂಟದು ಅಜ್ಞಾನವು ಜ್ಞಾನಿಯನು ಭಗವಂತನ
ಸುಜ್ಞಾನದಲಿ ಎಸಗಿದ ಕರ್ಮಫಲದಿ

Behold the men who cleave unto the feet of Him who is beyond preference and beyond aversion; the ills of life touch them not ever.

ಇಲ್ಲಿ ಜ್ಞಾನವೆಂಬ ಬೆಳಕು ಭಗವಂತನ ಆರಾಧನೆಯ ಮೂಲಕ ದೊರೆಯುತ್ತದೆ. ತಮಗೆ ಅಂಟಿದ ಸುಖಗಳೆಲ್ಲವನ್ನೂ ಶಿವನಿಗೆ ಅರ್ಪಿಸಿ ಆತನ ಸೇವಕರಾಗಿ ಭಕ್ತಿಯಿಂದ ಆಚರಿಸಿದರೆ, ಆತನೇ ಹಿರಿಯ ಶಿವಶರಣ ಎಂಬುದು ತಿರುವಳ್ಳುವರ್ ಅಭಿಪ್ರಾಯ. ಅಂದರೆ 'ಸರ್ವಂ ಶಿವಾರ್ಪಣಮಸ್ತು' ಎಂಬ ತಾತ್ವಿಕತೆ ಅವರಲ್ಲಿದೆ. ತಿರುವಳ್ಳುವರ್ ಪ್ರಕಾರ ನಿಜವಾದ ಧರ್ಮಮಾರ್ಗಿ ಯಾರೆಂದರೆ ಪಂಚೇಂದ್ರಿಯಗಳನ್ನು ಗೆದ್ದು ತನ್ನ

ಹತೋಟಿಯಲ್ಲಿ ಇಟ್ಟುಕೊಂಡವನು;

ಎಲುಕೆ ಬಾಯಲಿ ಸಿಲುಕದೆ ಪಂಚೇಂದ್ರಿಯಗಳಿಂದ
ವಿಚಲಿತನಾಗದೆ ನಿಂತವನೇ ಬಾಳುವನು ನೀಳ್ಬಾಳ್ವೆಯ

Behold the men who follow the righteous ways of him who burned away the desires of the five senses; their days will be many upon the earth.

ಇವರ ಪ್ರಕಾರ ದೈವವು ಉಪಮಾತೀತವಾದದ್ದು. ಸ್ಮರಣ ಮತ್ತು ಪಾದಸೇವನ ಮಾರ್ಗಗಳಲ್ಲಿ ಧರ್ಮಾನುರಾಗಿ ಆಗಬಹುದು ಎಂದಿದ್ದಾರೆ ತಿರುವಳ್ಳುವರ್. ಸರ್ವಜ್ಞನಲ್ಲಿ ಕಾಣುವಂತಹ ದೈವದ ಲಕ್ಷಣಗಳನ್ನು ತಿರುವಳ್ಳುವರ್ ಕೂಡ ನಿರೂಪಿಸಿದ್ದಾರೆ. ಇವರು ಸಹ ಪರಮಾತ್ಮನು ಅಷ್ಟಗುಣಸಂಪನ್ನನಾಗಿರಬೇಕು ಎಂದಿದ್ದಾರೆ. ದೈವ ಮತ್ತು ಧರ್ಮದ ಕೆಲಸ ಯಾವುದೆಂದು ಪ್ರಶ್ನಿಸುತ್ತಾ ಕುಱಳ್ ಹೇಳುವುದು ಹೀಗೆ :

ಭಾಗ್ಯ ಪ್ರತಿಕೂಲವಾಗಿರೆ ಬುದ್ಧಿವಂತನೂ ಜಡಮತಿಯಾಗುವ
ಭಾಗ್ಯ ಅನುಕೂಲವಾಗಿರೆ ಮಂಕುಬುದ್ಧಿಗೂ ಕಾಣಿಸುವುದು ಪ್ರಗತಿಪಥವು

Evil fate dulleth the faculties; but when fortune is about to smile on a man, he first expandeth his intelligence.

ಧರ್ಮ ವ್ಯಕ್ತಿಯೊಬ್ಬನನ್ನು ಮೂಢತನದಿಂದ ಜಾಣನನ್ನಾಗಿ ಮಾಡುವ ಶಕ್ತಿ ಎಂದು ತಿರುವಳ್ಳುವರ್ ಭಾವಿಸಿದ್ದಾರೆ. ಅವರ ಪ್ರಕಾರ ಜಗತ್ತಿನಲ್ಲಿ ಸ್ವಭಾವಗಳೆರಡು. ಒಂದು ಹಣವುಳ್ಳವರು ಇನ್ನೊಂದು ಅರಿವುಳ್ಳವರು. ಆದರೆ ವಾಸ್ತವದಲ್ಲಿ ಹಣವುಳ್ಳವರ ಬಳಿ ಅರಿವಿರುವುದಿಲ್ಲ, ಅರಿವುಳ್ಳವರ ಬಳಿ ಹಣವಿರುವುದಿಲ್ಲ. ಇದನ್ನು ತಿರುವಳ್ಳುವರ್ ವಿಧಿಯ ಕೈವಾಡವೆಂದು ಭಾವಿಸಿದ್ದಾರೆ. ಸಿರಿಯ ಹಿಂದೆ ಹೋದವರಿಗೆ ಒಳಿತೆಲ್ಲ ಕೆಡುಕಾಗಬಹುದು. ಆದರೆ ಕೆಡುಕು ಎಂದಿಗೂ ಒಳಿತಾಗಲಾರದು. ಶುಭ–ಅಶುಭಗಳು, ಬಡತನ–ತ್ಯಾಗ ಮುಂತಾದವು ಕೆಲವೊಮ್ಮೆ ಅನಿವಾರ್ಯದ ಸ್ಥಿತಿಯನ್ನು ನಿರ್ಮಿಸಿದರೂ ಧರ್ಮಪ್ರವರ್ತನೆಗೆ ಕೆಡುಕನ್ನುಂಟುಮಾಡಲಾರವು.

**ಧಾರ್ಮಿಕ ಆಚರಣೆ**

ಲೌಕಿಕ ಜಗತ್ತಿನಿಂದ ಆಧ್ಯಾತ್ಮಿಕ ಜಗತ್ತನ್ನು ತಲುಪಬೇಕಾದರೆ, ನಿಗದಿತವಾದ ಮಾರ್ಗಗಳು ಮುಖ್ಯ. ಅವುಗಳನ್ನು ಬೇರೆ ಬೇರೆ ಧರ್ಮಪಂಥಗಳು ಭಿನ್ನ ಹೆಸರುಗಳಿಂದ ಕರೆದಿವೆ. ಕೆಲವರು ಭಕ್ತಿ ಎಂದರೆ ಇನ್ನೂ ಕೆಲವರು ಕಾಯಕವೇ ಕೈಲಾಸ ಎಂದಿದ್ದಾರೆ. ಇವೆಲ್ಲವೂ ದೈವಶಕ್ತಿಯನ್ನು ತಲುಪುವ ಧಾರ್ಮಿಕ ಆಚರಣೆಗಳು. ತಿರುವಳ್ಳೂವರ್ ಭಿನ್ನ ರೀತಿಯಲ್ಲಿ ಧರ್ಮಾಚರಣೆಯನ್ನು ಅಭಿವ್ಯಕ್ತಿಸಿದ್ದಾರೆ. ಇವರ ಪ್ರಕಾರ ಅತಿಥಿಸತ್ಕಾರ,

ವಚನದಲ್ಲಿ ಮಾಧುರ್ಯ, ಲೋಭತ್ಯಾಗ, ನಿಷ್ಪಕ್ಷಪಾತ ಸಂಯಮ, ಸದಾಚಾರ, ಲೋಕೋಪಕಾರ ಮುಂತಾದವುಗಳು ಧಾರ್ಮಿಕ ಆಚರಣೆಗಳು;

ಬಂದ ಅತಿಥಿಗೆ ಮೊದಲು ಬಡಿಸಿ ಮಿಕ್ಕುಳಿದ ಅನ್ನವ
ತಿಂದವಗೆ ಉತ್ತು ಬಿತ್ತುವ ದುಡಿಮೆ ಇಲ್ಲ

Behold the man who feedeth his guest first and then only eateth what is left; doth his land stand in need even of sowing?

ಅಂದರೆ, ಅತಿಥಿ ದೇವೋ ಭವ ಎಂದು ಭಾವಿಸುವ ವ್ಯಕ್ತಿಗಳು ದೈವವನ್ನು ಪ್ರತ್ಯೇಕವಾಗಿ ಕಾಣುವ ಅಗತ್ಯವಿಲ್ಲ. ಹೀಗೆ ಕಾಣುವವರು ಉತ್ತು, ಬಿತ್ತು, ಬೆಳೆದು ಗಳಿಸಲೇಬೇಕೆಂಬ ನಿಯಮವೂ ಇಲ್ಲ. ಇನ್ನೊಂದು ಕುಱಳ್ ಇಂತಿದೆ :

ಅತಿಥಿಸತ್ಕಾರಕ್ಕೆ ಇಷ್ಟಿಷ್ಟೆಂದು ಅಳತೆಯಿಲ್ಲ
ಎಷ್ಟೆಷ್ಟು ಸತ್ಕರಿಸಿದರು ಪಡೆಯುವ ಯಜ್ಞದ ಫಲವ

We cannot say of hospitable act by itself, so much is the merit of this act: it is the worth of the guest that is the measure of the sacrifice.

ಇಲ್ಲಿ ಅತಿಥಿಸತ್ಕಾರವು ನಿರ್ದಿಷ್ಟ ವ್ಯಾಪ್ತಿಯನ್ನು ಹೊಂದಿಲ್ಲ. ಇದು ಯಜ್ಞಫಲಕ್ಕೆ ಸಮಾನ. ತಿರುವಳ್ಳುವರ್ ವೇದೋಕ್ತ ಯಜ್ಞ ಫಲಪ್ರಾಪ್ತಿಗಿಂತಲೂ ಅತಿಥಿಸತ್ಕಾರವೇ ಶ್ರೇಷ್ಠ ಎಂಬ ರೀತಿಯಲ್ಲಿ ಈ ಮಾತುಗಳನ್ನು ಹೇಳಿದ್ದಾರೆ. ಅಂದಾಗ, ದೈವವನ್ನು ಈ ಮೂಲಕವೂ ತಲುಪಬಹುದು ಎಂದಲ್ಲವೇ? ನಡೆ ಮತ್ತು ನುಡಿಗಳು ಮನುಷ್ಯನ ಅಭಿವ್ಯಕ್ತಿಯ ಕನ್ನಡಿಯಂತೆ. ಕಟು ನುಡಿಗಳು ರೋಷಗಳನ್ನು ಉಂಟುಮಾಡಿದರೆ ಮಾಧುರ್ಯದ ಮಾತುಗಳು ಆತ್ಮ ಸಂತೋಷವನ್ನು ಗಳಿಸಿಕೊಡುತ್ತದೆ. ದೈವದ ಸಾಮೀಪ್ಯಕ್ಕೆ ತಲುಪಬೇಕಾದರೆ ಮೃದುವಚನವೂ ಒಂದು ಮಾರ್ಗ. ಇದನ್ನೇ ವ್ರತವೆಂದು ಭಾವಿಸಿ ರೂಢಿಸಿಕೊಂಡರೆ ಜೀವನ ಸುಲಭಸಾಧ್ಯ :

ಪ್ರಸನ್ನತೆಯಿಂ ಸ್ವಾಗತಿಸಿ ಅರಳಿದ ಮುಖದಿ
ನುಡಿವುದೇ ಶ್ರೇಷ್ಠ ಧರ್ಮ

Behold the sweet and gracious look and the kind speech that cometh from the heart; Righteousness hath its dwelling place there.

ಅಂದರೆ ಪ್ರಸನ್ನತೆಯಿಂದ ಸ್ವಾಗತಿಸಿ ಮಂದಸ್ಮಿತ ಮೊಗದೊಂದಿಗೆ ಮಾತನಾಡುವುದೇ ನಿಜವಾದ ಧರ್ಮ. ಅದುವೇ ಶ್ರೇಷ್ಠ ಎಂದರ್ಥ. ಇನ್ನೊಂದು ದ್ವಿಪದಿ ಹೀಗಿದೆ;

ಶುದ್ಧ ಭಾವಯುಕ್ತ ಮಧುರ ವಚನ ನುಡಿವವನ
ಪಾಪವಳಿದು ಧರ್ಮ ಬೆಳೆಯುವುದು

Sinfulness will wane away and righteousness will increase if thy thoughts are good and thy speech is kind.

ಕಪಟರಹಿತ ಶುದ್ಧ ಮಾತುಗಳು ಪಾಪವನ್ನು ಕಳೆದು ಧರ್ಮೋತ್ಥಾನಕ್ಕೆ ಹಾದಿ ಮಾಡಿಕೊಡುತ್ತದೆ. ಆ ಮೂಲಕ ಧರ್ಮದ ಬಹುಮುಖ ಬೆಳವಣಿಗೆಯನ್ನು ಕಾಣಬಹುದು. ಸಹಾಯ ಮಾಡಿದವರಿಗೆ ಕೃತಜ್ಞತೆ ಸಲ್ಲಿಸುವುದು ಮನುಷ್ಯಧರ್ಮ. ಅದು ಧಾರ್ಮಿಕ ಹೆಜ್ಜೆಗುರುತುಗಳಲ್ಲಿ ಒಂದು :

ಪ್ರತ್ಯುಪಕಾರದ ಪರಿವೆಯಿಲ್ಲದೆ ಮಾಡಿದ ಉಪಕಾರವ
ಭೂಲೋಕ, ಸ್ವರ್ಗಲೋಕದೊಳು ತೀರಿಸಲಾಗದು

Behold the kindness done without any obligation; even the heavens and the earth but poorly paid.

ಇಲ್ಲಿ ಪ್ರತ್ಯುಪಕಾರದ ನಿರೀಕ್ಷೆ ಇಲ್ಲದೆ ಮಾಡಿದ ಉಪಕಾರವು ಇಹ ಮತ್ತು ಪರಗಳಲ್ಲಿಯೂ ತೀರಿಸಲಾಗದ ಋಣ ಎಂದರ್ಥ. ಇದು ಮಹಾಸಾಗರಕ್ಕಿಂತಲೂ ಮಿಗಿಲಾದದ್ದು. ಇನ್ನೊಂದು ಕುಱಳ್ ಹೀಗಿದೆ :

ಮೋಕ್ಷವುಂಟು ಯಾವುದೇ ಧರ್ಮವ ಕೊಂದವಗೆ
ಮೋಕ್ಷವಿಲ್ಲವಗೆ ಎಸಗಿದ ಒಳಿತನು ಮರೆಯಲು

There is redemption for men who are guilty of every other crime; but the ungrateful wretch shall know of none.

ಇವರ ಪ್ರಕಾರ ಒಂದುವೇಳೆ ಧರ್ಮವನ್ನು ಕೊಂದವರಿಗೂ ಮೋಕ್ಷ ಪ್ರಾಪ್ತಿಯಾಗಬಹುದು. ಆದರೆ ಕೃತಜ್ಞತೆ ಇಲ್ಲದವನಿಗೆ ಎಂದಿಗೂ ಮೋಕ್ಷ ದೊರೆಯದು. ಹೀಗೆ ನಿಷ್ಪಕ್ಷಪಾತ ನಡೆ, ಸಂಯಮ ಮತ್ತು ಸದಾಚಾರ. ಪರಸ್ತ್ರೀಯರನ್ನು ಕಾಮಿಸದೆ ಇರುವುದು, ತಪ್ಪು ಮಾಡಿದವರನ್ನು ಕ್ಷಮಿಸುವುದು, ಲೋಭತ್ಯಾಗ, ಚಾಡಿ ಹೇಳದಿರುವುದು, ಲೋಕಕ್ಕೆ ಹಿತವನ್ನು ಬಯಸುವ ಗುಣ, ಇರುವುದರಲ್ಲಿಯೇ ದಾನಕೊಡುವ ದಯಾ ಭಾವ, ವಂಚನೆ ಮುಕ್ತಯೋಚನೆ, ಸತ್ಯದ ನಡೆ-ನುಡಿ ಮುಂತಾದ ಸಾಮಾನ್ಯ ಮನುಷ್ಯ ಗುಣಗಳನ್ನೇ ಧಾರ್ಮಿಕ ಆಚರಣೆಗಳೆಂದು ಕರೆದಿದ್ದಾರೆ. ಇಲ್ಲಿ ಧಾರ್ಮಿಕ ಆಚರಣೆ ಎಂಬುದು ಯಾವುದೇ ನಿರ್ದಿಷ್ಟ ಪಂಥಾನುಯಾಯಿಗಳಿಗೆ ಅನ್ವಯವಾಗುವಂತೆ ಇಲ್ಲ. ಭೂಮಿಯ ಮೇಲೆ ಜನಿಸಿದ ಪ್ರತಿಯೊಬ್ಬ ವ್ಯಕ್ತಿಯೂ ತಾತ್ವಿಕ ಬದುಕನ್ನು ಕಾಣಬೇಕಾದರೆ ತಿರುವಳ್ಳುವರ್ ಹೇಳಿರುವ ಮನುಷ್ಯ ಗುಣಗಳನ್ನು ಧಾರ್ಮಿಕ ಆಚರಣೆಗಳಂತೆ ರೂಢಿಸಿಕೊಳ್ಳಬೇಕು.

ಸರ್ವಜ್ಞನು ಹೇಳಿರುವ ವಚನಗಳಲ್ಲಿಯೂ ಇದೇ ರೀತಿಯ ಧರ್ಮೋಪಾಸನೆಗಳನ್ನು ಕಾಣಬಹುದು, ಬದುಕಿನಲ್ಲಿ ಔನ್ನತ್ಯದ ಮಾರ್ಗವನ್ನು ಕಾಣಬೇಕಾದರೆ ಗುರುಕೃಪೆ ಮುಖ್ಯ. ಅಂತಹ ಗುರುವಿನ ಸೇವೆಯನ್ನು ಹೇಗೆ ಮಾಡಬೇಕೆಂದು ಸರ್ವಜ್ಞ ತಿಳಿಸುವುದು ಹೀಗೆ :

ಗುರುಸೇವೆ ಕೈಕೊಂಡು ಹಿರಿದಾಗಿ ಮಾಡದಲೆ ।
ಹರಿದೇರಿ ಮುಕ್ತಿ ಪಡೆಯುವಡೆ ಅದು ತಾನು ।
ಹಿರಿದಾದ ತೆವರೆ? ಸರ್ವಜ್ಞ॥

ಅಂದರೆ ಸಂಪೂರ್ಣ ಸಮರ್ಪಣಾ ಭಾವ ಮೂಡದೆ ಗುರುಕರುಣೆ ಪ್ರಾಪ್ತವಾಗುವುದಿಲ್ಲ. ಸರ್ವಜ್ಞನು ಭಕ್ತಿಸ್ಥಲ, ನಿತ್ಯಪೂಜೆ ಮುಂತಾದವುಗಳನ್ನು ಸಾಮಾನ್ಯ ಆಚರಣೆಗಳೆಂದು ಕರೆದು ಉತ್ತಮ ನಡಾವಳಿಗಳನ್ನು ಧಾರ್ಮಿಕ ಆಚರಣೆಗಳೆಂದು ಕರೆದಿದ್ದಾನೆ. ಪ್ರತಿಮಾಪೂಜೆ, ಭಕ್ತಹೀನ ತತ್ವ, ಭಕ್ತಲಕ್ಷಣ, ಜಂಗಮಲಕ್ಷಣ, ಶರಣಸಂಗಮ ಮುಂತಾದವುಗಳನ್ನು ಕ್ರೋಢೀಕರಿಸಿ ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾನೆ. ಸಾಮಾನ್ಯವಾಗಿ ಜನರು ದೇಗುಲಗಳಿಗೆ ಹೋಗಿ ಪೂಜೆ ಸಲ್ಲಿಸುವುದು ಧಾರ್ಮಿಕ ಆಚರಣೆ ಎಂದು ಭಾವಿಸಿದ್ದಾರೆ. ಆ ಕುರಿತು ಸರ್ವಜ್ಞ ಹೇಳಿರುವುದು ಹೀಗೆ :

ಆಗಿಲ್ಲ ಹೋಗಿಲ್ಲ ಮೇಗಿಲ್ಲ ಕೆಳಗಿಲ್ಲ ।
ತಾಗಿಲ್ಲ ತಪ್ಪು ತಡೆಯಿಲ್ಲ ಲಿಂಗಕ್ಕೆ ।
ದೇಗುಲವೆ ಇಲ್ಲ ಸರ್ವಜ್ಞ॥

ಇದು ಬಹಿರಂಗ ಆಚರಣೆ. ಹೀಗೆ ಮಾಡುವುದರಿಂದ ಯಾವ ಪಾಪಕರ್ಮವೂ ಕ್ಷಯಿಸುವುದಿಲ್ಲ. ದೈವದ ಇರವು ಎಲ್ಲಿ ಎಂಬುದು ಸ್ಪಷ್ಟವಾದರೆ ಆ ಧರ್ಮದ ಆಚರಣೆ ಸುಲಭ. ಈ ಕುರಿತು ಸರ್ವಜ್ಞನ ಅಭಿಪ್ರಾಯ ಇಂತಿದೆ :

ಆನೆ ಕನ್ನಡಿಯಲ್ಲಿ ತಾನಡಗಿ ಇಪ್ಪಂತೆ ।
ಜ್ಞಾನವುಳ್ಳವರ ಹೃದಯದಲಿ ಪರಶಿವನು ।
ತಾನಡಗಿ ಇಹನು ಸರ್ವಜ್ಞ॥

ಅಂದರೆ ಬಹು ದೊಡ್ಡದಾದ ಆನೆಯ ಪ್ರತಿಬಿಂಬವನ್ನು ಚಿಕ್ಕದೊಂದು ಕನ್ನಡಿ ಹಿಡಿದಿಡುವಂತೆ ಜ್ಞಾನಿಗಳ ಹೃದಯದಲ್ಲಿ ಶಿವನು ಅಡಗಿ ಕುಳಿತಿರುತ್ತಾನೆ. ಇಲ್ಲಿ ಬುದ್ಧಿವಂತಿಕೆ ಮತ್ತು ಹೃದಯವಂತಿಕೆಗಳ ನಡುವಣ ವ್ಯತ್ಯಾಸವನ್ನು ಕಾಣಬಹುದು. ಧರ್ಮ ಮತ್ತು ಅದರ ಆಚರಣೆ ಬುದ್ಧಿಗೆ ಸಂಬಂಧಿಸಿದ್ದಲ್ಲ, ಹೃದಯಕ್ಕೆ ಸಂಬಂಧಿಸಿದ್ದು. ದೇವರ ಇರುವಿಕೆ ಅಲ್ಲೇ ಆದ್ದರಿಂದ ಸ್ಥಾವರಗಳಿಗಿಂತಕೂ ಹೃದಯಸ್ಥಾನವೇ ಅತಿ ಶ್ರೇಷ್ಠವೆಂಬ ತಿಳುವಳಿಕೆ ಇಲ್ಲಿದೆ. ನಾವು ದೈವದ ಸಾಕ್ಷಾತ್ಕಾರವನ್ನು ಮಾಡಿಕೊಳ್ಳಬೇಕಾದರೆ ಯಜ್ಞ–ಯಾಗಗಳ ಮೊರೆಹೋಗಬೇಕಾಗಿಲ್ಲ. ನಿರಹಂಕಾರಗುಣ, ಖಂಡಿತವಾದ, ಆತ್ಮತೃಪ್ತಿ, ಸ್ಥಿರಚಿತ್ತ, ಸಹನಶೀಲತೆಗಳು ಮನುಷ್ಯನನ್ನು ಸರಿಯಾದ ಹಾದಿಯಲ್ಲಿ ನಡೆಸುತ್ತವೆ. ಈ ಕುರಿತಂತೆ

ಒಂದು ವಚನ ಇಂತಿದೆ :

ಏನಾದಡೇನಯ್ಯ ತಾನಾಗದನ್ನಕ್ಕ ।
ತಾನಾಗಿ ತನ್ನನರಿದವನು ಲೋಕದಲಿ ।
ಏನಾದಡೇನು ಸರ್ವಜ್ಞ॥

ಅಂದರೆ ಪರಧರ್ಮ, ಪರತತ್ವ ಹಾಗೂ ಇತರ ಜ್ಞಾನ ವಿಷಯಗಳನ್ನು ತಿಳಿದು ತನ್ನ ಅಂತರಂಗವನ್ನೇ ಅರಿಯದೆ ಹೋದರೆ ಅಂತಹ ಬಾಳು ನಿರರ್ಥಕ. ಸಮಾಜಕ್ಕೆ ಅಂಥವರಿಂದ ಕೊಡುಗೆಗಳೇನೂ ದೊರೆಯುವುದಿಲ್ಲ. ಹೀಗಾಗಿ ಎಲ್ಲ ಧಾರ್ಮಿಕ ಆಚರಣೆಗಳ ಮೂಲ ತನ್ನನ್ನು ತಾನು ಅರಿಯುವುದು ಉತ್ತಮ. ಇದು ಅಧ್ಯಾತ್ಮಲೋಕದಲ್ಲಿ ವಿಶ್ವದರ್ಶನ ಎಂದು ಹೆಸರು ಪಡೆದಿವೆ. ಮನುಷ್ಯನ ಧಾರ್ಮಿಕ ಆಚರಣೆಗೆ ಧಕ್ಕೆಯನ್ನುಂಟು ಮಾಡುವುವು ವಿಷಯಾಸಕ್ತಿಗಳು :

ತೋರುವ ಕುಲಗಿರಿಯ ನೇರಿ ತಪದೊಳಗಿರ್ದು ।
ಬೇರೊಂದ ಮನವು ನೆನೆದಿಹರೆ ಬೆಳೆದ ಹೊಲ ।
ಸೂರೆ ಹೋದಂತೆ ಸರ್ವಜ್ಞ॥

ಇಲ್ಲಿ ಕಣ್ಣಿಗೆ ಕಾಣುವ ಕುಲಗಿರಿಯ ಎದುರು ತಪಸ್ಸಿಗೆ ಕುಳಿತು ಕಾಮ, ಕ್ರೋಧಾದಿ ಅರಿಷಡ್ವರ್ಗಗಳಿಗೆ ಬಲಿಯಾದರೆ ಎಂತಹ ಸಿದ್ಧಿ ಸಾಧ್ಯ? ಅವರು ದುರ್ಮತಿಗಳೇ. ಹೀಗಾಗಿ ಅವುಗಳ ಸಂಕೋಲೆಯನ್ನು ಬಿಡಿಸಿಕೊಂಡು ಬದುಕು ರೂಪಿಸಿಕೊಳ್ಳಬೇಕು. ದಾನವೆಂಬುದು ಸಾಮಾನ್ಯರನ್ನೂ ಅಸಮಾನ್ಯರನ್ನಾಗಿ ಮಾಡುವ ವಿಶೇಷ ಶಕ್ತಿ :

ಗಾನ ವಿದ್ಯವು ಲೇಸು ಮಾನವತಿ ಸತಿ ಲೇಸು ।
ಸ್ವಾನುಭಾವಿಗಳ ಕೆಳೆ ಲೇಸು ಎಲ್ಲಕು ।
ದಾನಿಯೇ ಲೇಸು ಸರ್ವಜ್ಞ॥

ಇಲ್ಲಿ ಲೋಕದ ಎಲ್ಲ ವ್ಯಕ್ತಿಗಳಿಗಿಂತ ದಾನಿಯೇ ಶ್ರೇಷ್ಠವೆಂದು ಹೇಳಿದೆ. ಹಾಗೆಂದ ಮಾತ್ರಕ್ಕೆ ಕಳ್ಳ, ಸುಳ್ಳ, ಪಾಪಿಯು ದಾನಿಯಾದರೆ ಅದಕ್ಕೆ ಅರ್ಥವಿಲ್ಲ. ಹಾಗಾಗಿ :

ಅನ್ನವನು ಇಕ್ಕುವದು ನನ್ನಿಯನು ನುಡಿಯುವದು ।
ತನ್ನಂತೆ ಪರರ ಬಗೆದಡೆ ಕೈಲಾಸ ।
ಬಿನ್ನಾಣವಕ್ಕು ಸರ್ವಜ್ಞ॥

ಈ ವಚನದಲ್ಲಿ ಹೇಳುವಂತೆ ಇಹಲೋಕದ ಬಂಧನಗಳಿಂದ ನೊಂದು ತಾನು ಕಂಡುಂಡ ಅನುಭವಗಳನ್ನು ಲೋಕಕ್ಕೆ ಸಾರುತ್ತಾ ತಾನು ಗಳಿಸಿದ್ದನ್ನು ಹಂಚುವವನೇ ನಿಜವಾದ ದಾನಿ. ಪಾಪಿ ಗಳಿಸಿದ್ದು ಎಂದಿಗೂ ಪರರ ಪಾಲು. ಹೀಗಾಗಿ ಗಳಿಕೆಯಷ್ಟೇ ಜೀವನವಾಗಬಾರದು. ಇರುವಷ್ಟು ದಿವಸ ಸತ್ಸಂಗ, ಉತ್ತಮ ಗುಣ, ಆಚಾರಗಳ ಪಾಲನೆ ಮುಂತಾದವು ನಮ್ಮ ಪಾಪಪುಣ್ಯಗಳನ್ನು ಅಳತೆ ಮಾಡುವ ಸಾಧನಗಳು :

ಹಿಂದೆ ಪಾಪವ ಮಾಡಿ ಮುಂದೆ ಪುಣ್ಯವು ಹೇಗೆ?
ಹಿಂದು ಮುಂದರಿದು ನಡೆಯದಿರೆ ನರಕದಲಿ ।
ಬೆಂದು ಸಾಯುವದು ಸರ್ವಜ್ಞ ॥

ಈ ಪದ್ಯದಲ್ಲಿ ಹೇಳಿದಂತೆ ಪಾಪಕರ್ಮಗಳನ್ನು ಮಾಡಿ ಮುಂದೊಂದು ದಿವಸ ಪುಣ್ಯಕ್ಕಾಗಿ ಅಲೆದರೆ ಯಾವುದೇ ಪ್ರಯೋಜನವಿಲ್ಲ. ಪರನಿಂದೆ, ಗರ್ವ, ವೈರ ಮುಂತಾದ ಕ್ಷುಲ್ಲಕ ಶಕ್ತಿಗಳನ್ನು ಮೀರಿ ನಮ್ರತನವನ್ನು ಬೆಳೆಸಿಕೊಳ್ಳಬೇಕಾಗುತ್ತದೆ. ಆಗ ಮಾತ್ರ ಮನುಷ್ಯನಿಂದ ಧರ್ಮದ ಧರ್ಮಾಚರಣೆ ಆಗುತ್ತದೆ. ಈ ಇಬ್ಬರೂ ಕವಿಗಳ ಮಾತುಗಳನ್ನು ಹೋಲಿಸಿ ನೋಡಿದಾಗ ಇಲ್ಲಿ ತತ್ವಾದರ್ಶಗಳಿಗಿಂತಲೂ ಬದುಕಿನಲ್ಲಿ ಉತ್ತಮ ನಡೆಯೇ ನಿಜವಾದ ದೈವ, ಧರ್ಮಾಚರಣೆ ಆಗಿದೆ.

**ಧಾರ್ಮಿಕ ಫಲಶ್ರುತಿ**

ಕಸವರಮೆಂಬುದು ನೆರೆ ಸೈರಿಸಲಾರ್ಪೊಡೆ
ಪರವಿಚಾರಮಂ ಧರ್ಮಮುಮಂ

ಎಂಬುದು ಕವಿರಾಜಮಾರ್ಗಕಾರನ ಮಾತು. ಅಂದರೆ ಧರ್ಮದ ಮೂಲ ಉದ್ದೇಶ, ಪರಧರ್ಮವನ್ನು ಕಾಪಾಡುವುದು. ಅದು ಚಿನ್ನಕ್ಕೂ ಮಿಗಿಲಾದ ಮೌಲ್ಯ. ಈ ಹಿನ್ನೆಲೆಯಲ್ಲಿ ತಿರುವಳ್ಳುವರ್, 'ತಿರುಕ್ಕುರಳ್' ಮತ್ತು ಸರ್ವಜ್ಞರ 'ವಚನ'ಗಳಲ್ಲಿ ಜೀವನಮೌಲ್ಯಗಳನ್ನು ಬದುಕಿನ ಫಲಶ್ರುತಿಯಾಗಿ ಕಾಣಬಹುದು. ತಿರುವಳ್ಳುವರ್ ಧರ್ಮಖಂಡದೊಳಗೆ ಬೋಧಿಸುವ ಎಲ್ಲಾ ವಿಚಾರಗಳು ಬದುಕಿನ ಒಳಿತನ್ನು ಕುರಿತದ್ದು. ಸಾಮಾನ್ಯವಾಗಿ ಬಾಲ್ಯ, ಯೌವ್ವನ, ಗೃಹಸ್ಥ ಮತ್ತು ಸನ್ಯಾಸ ಆಶ್ರಮಗಳಲ್ಲಿ ಪ್ರತಿಯೊಬ್ಬರ ಜೀವನಮೌಲ್ಯಗಳು ವಿಕಸಿತಗೊಳ್ಳುತ್ತಾ ಸಾಗುತ್ತವೆ. ಈ ವೇಳೆ ನೀತಿಬೋಧನೆಗಳು ಮಾರ್ಗದರ್ಶಿ ಸೂತ್ರಗಳಾಗಿರಬೇಕು. ತಿರುವಳ್ಳುವರ್ ಒಂದು ಕುಱಳ್‌ನಲ್ಲಿ ಹೇಳುವುದು ಹೀಗೆ :

ಪ್ರೇಮಮಯ ಧರ್ಮಮಾರ್ಗದಲಿ ಸ್ಥಿತ
ಗೃಹಸ್ಥಂಗೆ ಕೇಳದೆ ದೊರಕುವುದು ಸಫಲ ಪ್ರಾಪ್ತಿ

If love aboundeth in the home and righteousness doth prevail, the home is perfect and its end is all fulfilled.

ಅಂದರೆ ಬದುಕಿನ ಸಾರ್ಥಕತೆ ದೊರೆಯುವುದು ಪ್ರೇಮಮಯ ಧರ್ಮ ಮಾರ್ಗಾನುಸರಣೆಯಿಂದ. ಅದೊಂದೇ ಸಾಕು ಸುಫಲ ಪ್ರಾಪ್ತಿಗೆ. ಆಧುನಿಕ ಜನ ಜೀವನದಲ್ಲಿ ಪುರುಷನಷ್ಟೇ ಸ್ತ್ರೀಯ ನಡೆ, ನುಡಿಗಳು ಮುಖ್ಯವಾಗುತ್ತವೆ. ಗಂಡಿನ ಯಶಸ್ವಿ ಜೀವನಗಾಥೆಯಲ್ಲಿ ಹೆಣ್ಣಿನ ಪಾತ್ರ ಅತಿ ಮುಖ್ಯವಾಗಿರುತ್ತದೆ. ತಿರುವಳ್ಳೂವರ್ ಸಹಧರ್ಮಿಣಿಯ ಗುಣಗಳನ್ನು ಕುರಿತು ಪ್ರಸ್ತಾಪಿಸುವಾಗ;

ಹೆಣ್ಣಿಗೆ ಹೆಮ್ಮೆಯದು ಬೇರಲ್ಲ
ಪಾತಿವ್ರತ್ಯವೇ ಆಭರಣವಾದಲ್ಲಿ

What is there that is grander than for a woman, when she is strong in the strength of her chastity?

ಅಂದರೆ ಈ ದಿನಮಾನಗಳಲ್ಲಿ ಪಾತಿವ್ರತ್ಯದ ಮೌಲ್ಯಗಳು ಕುಸಿಯುತ್ತಿದ್ದು ಸ್ತ್ರೀ ನಡೆನುಡಿಗಳು ಭಿನ್ನ ಆಲೋಚನೆಯೆಡೆಯಲ್ಲಿ ಸಾಗುತ್ತಿವೆ. ತಿರುವಳ್ಳೂವರರ ಮಾತಿನಂತೆ ಪಾತಿವ್ರತ್ಯಕ್ಕೆ ಹೆಚ್ಚಿನ ಮೌಲ್ಯವನ್ನು ಸ್ತ್ರೀ ಸಮಾಜ ಕೊಟ್ಟಿದ್ದೇ ಆದರೆ ಅವುಗಳ ಮರುಸ್ಥಾಪನೆ ಸಾಧ್ಯವಾಗುತ್ತದೆ. ಇಂತಹದ್ದೇ ಚಿಂತನೆಯೊಂದು ಸರ್ವಜ್ಞನಲ್ಲಿ ಕಾಣಬಹುದು;

ಹಾರುವರು ಸ್ವರ್ಗದ ದಾರಿ ಬಲ್ಲರೆ ।
ನಾರಿ ಪತಿಹಿತವನಾಡಿ ನಡೆದಿಡಿಲು ।
ಸ್ವರ್ಗದ ದಾರಿ ತೋರುವುದು ಸರ್ವಜ್ಞ॥

ಎಂಬ ವಚನದಲ್ಲಿ ಗಂಡಿನ ಸಾರ್ಥಕ ಬದುಕಿಗೆ ಹೆಣ್ಣಿನ ಕೊಡುಗೆಯನ್ನು ವಿವರಿಸಲಾಗಿದೆ. ಆ ಮೂಲಕ ಬದುಕಿನ ಫಲಶ್ರುತಿಯನ್ನು ದಂಪತಿಗಳು ಕಂಡುಕೊಳ್ಳಬಹುದಾಗಿದೆ.

ಬದುಕಿನಲ್ಲಿ ಯಾವುದು ಆನಂದದಾಯಕ? ಹಣ, ಆಸ್ತಿ, ಒಡವೆ, ಅಧಿಕಾರಗಳೇ? ಇಲ್ಲ! ಪ್ರೇಮಮಯ ಜೀವನ ಸರ್ವಕ್ಕೂ ಆಭರಣ, ಸಮೃದ್ಧಿಯ ಸೆಲೆ ಪ್ರೇಮರಹಿತ ಜೀವನವು ಹಸ್ತಿರಹಿತ ಕಿರೀಟದಂತೆ, ಸುಡುವ ಬಿಸಿಲಿನಂತೆ. ಹೀಗಾಗಿ ಆನಂದದ ಜೀವನಕ್ಕೆ ಪ್ರೇಮಭಾವ ಹೊಂಗಿರಣಗಳಂತೆ. ಈ ಸಂಬಂಧದ ಒಂದು ಕುಱಳ್ ಇಂತಿದೆ :

ಪ್ರೇಮಮಯ ಶರೀರದಲಿ ಜೀವಿಸುವುದು ಆತ್ಮ
ಪ್ರೇಮರಹಿತನ ಶರೀರ ತೊಗಲ ಹೊದ್ದ ಅಸ್ಥಿಪಂಜರವು

The seat of life is in Love; the man who hath it not is only a mass of skin-encased bone.

ಇಲ್ಲಿ ಆತ್ಮ ಮತ್ತು ಅಸ್ಥಿಪಂಜರಗಳ ನಡುವಣ ಸಂಬಂಧವೂ ಪ್ರೇಮಪೂರ್ವಕವಾಗಿ ಸಾರ್ಥಕತೆಯನ್ನು ಕಾಣುವ ಬಗೆ ವ್ಯಕ್ತಗೊಂಡಿದೆ. ಅನ್ಯರನ್ನು ಕಂಡು ಅಸೂಯೆ ಪಡುವುದು ಗುಣ ಸಲ್ಲದು. ಪರೋಪಕಾರ, ಲೋಕಹಿತಚಿಂತನೆ, ದಯಾಭಾವ ಇದೇ ಬದುಕಿನ ನಿಜವಾದ ಫಲಶ್ರುತಿಗಳು ಎನ್ನುತ್ತಾರೆ ತಿರುವಳ್ಳುವರ್. ಇಂತಹದೇ ಮಾತುಗಳನ್ನು ಸರ್ವಜ್ಞನೂ ಗುರುತಿಸಿ ಹೇಳಿರುವುದು ವಿಶೇಷ.

ಸರ್ವಜ್ಞ ಒಂದು ವಚನದಲ್ಲಿ ಕರ್ಮದಿಂದ ದೇವರು ಮರೆಯಾಗುತ್ತಾನೆ ಎಂದು ವಿವೇಚಿಸಿದ್ದಾನೆ. ಅವನ ಪ್ರಕಾರ ದೇವರೇ ಮರೆಯಾಗುವಂತಹ ಕರ್ಮ ಸಕರ್ಮವೂ

ಇರಬಹುದು ಅಥವಾ ಅಕರ್ಮವೂ ಇರಬಹುದು. ಆದರೆ ಅರಿವಿನ ಆಸ್ಥೆ ನಮ್ಮನ್ನು ದೈವದ ಸಾಮೀಪ್ಯಕ್ಕೆ ತಂದುಬಿಡುತ್ತದೆ. ಅವನ ಪ್ರಕಾರ ದೈವವನ್ನು ತಲುಪುವುದೇ ನಿಜವಾದ ಬದುಕಿನ ಫಲಶ್ರುತಿ. ಇಂತಹ ಸ್ಥಿತಿಯನ್ನು ತಲುಪಬೇಕಾದರೆ ಮಾನವನು ದಾನ ಮಾಡಬೇಕು. ಅದೂ ಏಕೆಂಬುದನ್ನು ಸುಮಾರು ಐದು ವಚನಗಳಲ್ಲಿ ನಿರೂಪಿಸಿದ್ದಾನೆ. ಒಂದು ವಚನದಲ್ಲಿ ದಾನ, ಧರ್ಮದ ಬಗ್ಗೆ ಹೀಗೆ ಹೇಳಿದ್ದಾರೆ;

ಆಗ ಬಾ ಈಗ ಬಾ ಹೋಗಿ ಬಾ ಎನ್ನದಲೆ ।
ಆಗಲೇ ಕರೆದು ಕೊಡುವವನ ಧರ್ಮ ಹೂ– ।
ನ್ನಾಗದೆ ಬಿಡದು ! ಸರ್ವಜ್ಞ

ಅಂದರೆ ದಾನಕ್ಕೆ ಮೀನಮೇಷಗಳನ್ನು ಎಣಿಸಬಾರದು. ಲೋಭತ್ವದಿಂದ ಪಾಪ ವೃದ್ಧಿಯೇ ಹೆಚ್ಚು. ಹೀಗಾಗಿ ಲೋಭ ಗುಣವನ್ನು ಕಳಚಿ ದಯಾ ಗುಣವನ್ನು ಆಲಂಗಿಸಿಕೊಳ್ಳಬೇಕು. ಅಂಥವನು ಅರಸನೆ ಆದರೂ ವ್ಯರ್ಥ. ಸತ್ಸಂಗ, ಸಹವಾಸದಿಂದ ಬದುಕು ಔನ್ನತ್ಯವನ್ನು ಮುಟ್ಟುತ್ತದೆ. ನಮ್ಮ ಬದುಕು ನಿಜವಾಗಿಯೂ ಅರ್ಥ ಸಿದ್ಧಿಸಿಕೊಳ್ಳಬೇಕಾದರೆ ಸಜ್ಜನರ ಸಂಗವೇ ಲೇಸು ಎನ್ನುತ್ತಾನೆ ಸರ್ವಜ್ಞ. ಈ ನಡುವೆ ದುಷ್ಟರ ಕುರಿತು ಎಚ್ಚರಿಕೆ ನೀಡಲು ಆತ ಮರೆತಿಲ್ಲ. ಸೀತೆ, ಹನುಮಂತ, ರಾವಣ ಮುಂತಾದ ಪಾತ್ರಗಳನ್ನು ಉಲ್ಲೇಖಿಸುತ್ತಾ ಬದುಕಿನ ನೈಜ ಅರ್ಥವನ್ನು ಕಂಡುಕೊಳ್ಳುವ ಮಾರ್ಗವನ್ನು ಬೋಧಿಸಿದ್ದಾನೆ. ಜೀವನದಲ್ಲಿ ಯಾವುದೇ ಒಂದರ ನಿರೀಕ್ಷೆಯಲ್ಲಿದ್ದು ಅದು ಲಭ್ಯವಾಗದೆ ಹೋದಾಗ ಕೊರಗಿ ನರಳುವುದಕ್ಕಿಂತ ಬಂದದ್ದನ್ನು ಬಂದಂತೆ ಸ್ವೀಕರಿಸಿ ಹೋಗುವವನೇ ಭಂಟ ಎಂದು ಧೈರ್ಯ ತುಂಬುತ್ತಾನೆ. ಈ ಮಾತನ್ನು ಅನುಸರಿಸಿ ನಡೆದರೆ ಜೀವನ ಉತ್ಸಾಹವನ್ನು ಕಳೆದುಕೊಳ್ಳುವುದಿಲ್ಲ. ಆ ಮೂಲಕ ಬದುಕಿನ ನಿಜವಾದ ಸಂತೋಷದ ಅರ್ಥಗಳನ್ನು ಕಂಡುಕೊಳ್ಳಬಹುದು.

ತಿರುವಳ್ಳುವರ್ ಮತ್ತು ಸರ್ವಜ್ಞರ ಮಾತುಗಳನ್ನು ಗಮನಿಸಿದಾಗ ಆತ್ಮಾನಂದಕ್ಕೆ ಜೀವಾನಂದಗಳು ಬೆರೆಯಬೇಕು. ಆಗ ಜೀವನದಲ್ಲಿ ನಿಜವಾದ ಸಾರ್ಥಕತೆಯನ್ನು ಪಡೆಯಬಹುದು ಎಂಬ ನಿರೂಪಣೆ ಇದೆ. ವಿಜ್ಞಾನದ ಓಡುತ್ತಿರುವ ಈ ದಿನಮಾನಗಳಲ್ಲಿ ತಿರುವಳ್ಳುವರ್ ಮತ್ತು ಸರ್ವಜ್ಞರ ಮಾತುಗಳನ್ನು ಅನುಸರಿಸಿ ನಡೆದರೆ ಸುಖಜೀವನಕ್ಕೆ ರಹದಾರಿ ಇದ್ದಂತೆ. ಆ ದಾರಿಯಲ್ಲಿ ನಡೆದರೆ ನಿಜವಾದ ಧರ್ಮಾರ್ಥ, ಪ್ರೇಮಾರ್ಥಗಳು ಕೈಗೆಟುಕುತ್ತವೆ.

□

# ಬಸವಣ್ಣ ಮತ್ತು ಕನಕದಾಸ : ಕೆಲವು ಸಾಮ್ಯ ವಿಚಾರಗಳು

**ಡಾ. ವೈ. ಸುಶ್ಮಿತಾ**

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಚನ ಚಳುವಳಿ ಮತ್ತು ಹರಿದಾಸ ಸಾಹಿತ್ಯಗಳು ಸಾಮಾಜಿಕ ಆಂದೋಲನದ ಸ್ವರೂಪದವು. ವಚನಸಾಹಿತ್ಯವು ಸಾಮಾಜಿಕ ಸುಧಾರಣೆ ಮತ್ತು ಬದಲಾವಣೆಯ ಚಿಮ್ಮುಹಲಗೆಯಾಗಿ ಮೂಡಿರುವಂತೆಯೇ ಹರಿದಾಸ ಸಾಹಿತ್ಯವೂ ಹದಿನಾರನೆಯ ಶತಮಾನದ ರಾಜಕೀಯ, ಧಾರ್ಮಿಕ ಅಸ್ಥಿರತೆಗಳಿಂದ ನರಳುತ್ತಿದ್ದ ಸಮಾಜದಲ್ಲಿ ಕೀರ್ತನೆ, ಸುಳಾದಿ, ಕಾವ್ಯಗಳ ಮೂಲಕ ಅರಿವನ್ನು ಮೂಡಿಸಿ ಶ್ರೀಸಾಮಾನ್ಯರ ಬದುಕಿಗಂಟಿದ್ದ ಮೌಢ್ಯಗಳನ್ನು ತೊಡೆದುಹಾಕುವ ಪ್ರಯತ್ನದಲ್ಲಿ ಮಹತ್ವದ ಪಾತ್ರ ವಹಿಸಿತು. ವಚನಸಾಹಿತ್ಯ ಜನಮುಖಿ ಆಂದೋಲನವಾಗಿ ರೂಪುಗೊಳ್ಳಲು ಕಾರಣ ಬಸವಣ್ಣನವರು. ಹರಿದಾಸ ಸಾಹಿತ್ಯದಲ್ಲಿ ಸಾಮಾಜಿಕ ಸಮಸ್ಯೆಗಳಿಗೆ ತೀವ್ರವಾಗಿ ಸ್ಪಂದಿಸಿ, ವ್ಯವಸ್ಥೆಯನ್ನು ಖಂಡಿಸಿ, ಎದುರು ಹಾಕಿಕೊಂಡು ತಳಸಮುದಾಯಗಳ ಅರಿವಿನ ಸಂತನಾಗಿ, ಅವರ ಆತ್ಮಸ್ಥೈರ್ಯವಾಗಿ ನಿಂತವರು ಕನಕದಾಸರು. ಸಾಮಾಜಿಕ ನ್ಯಾಯಕ್ಕಾಗಿ, ಸಮಸಮಾಜಕ್ಕಾಗಿ, ಅಸ್ಪೃಶ್ಯತೆಯ ನಿವಾರಣೆಗಾಗಿ ಈ ಇಬ್ಬರು ಯುಗಪ್ರವರ್ತಕರು ತಮ್ಮದೇ ಆದ ರೀತಿಯಲ್ಲಿ ಧ್ವನಿ ಎತ್ತಿದವರು. ಹಲವೆಡೆ ಈ ಇಬ್ಬರ ಹೋರಾಟದ ಧ್ವನಿಗಳಲ್ಲಿ ಸಾಕಷ್ಟು ಸಾಮ್ಯತೆ ಗೋಚರಿಸುತ್ತದೆ. ಬಸವಣ್ಣನವರು ಸಾಮಾಜಿಕ ಬದಲಾವಣೆಗಾಗಿ ಹನ್ನೆರಡನೆಯ ಶತಮಾನದಲ್ಲಿ ಎತ್ತಿದ ಗಟ್ಟಿದನಿ ಹದಿನಾರನೇ ಶತಮಾನದ ಕನಕರನ್ನು ಸಹಜವಾಗಿಯೇ ಪ್ರಭಾವಿಸಿರಬಹುದು. ಬಸವಣ್ಣನವರಿಗೆ ಸಾಮಾಜಿಕ ಮತ್ತು ಧಾರ್ಮಿಕ ಶುದ್ಧೀಕರಣದ ಧ್ಯೇಯ ಮುಖ್ಯವಾಗಿತ್ತು. ಕನಕರ ಉದ್ದೇಶವೂ ಅದೇ ಆಗಿತ್ತು. ಹನ್ನೆರಡನೆಯ ಶತಮಾನದಲ್ಲಿ ರಾಜಕೀಯ ವ್ಯವಸ್ಥೆಯಲ್ಲಿ ಆಂತರಿಕ ಕಲಹಗಳು ಅಧಿಕವಾಗಿದ್ದರೆ, ಹದಿನಾರನೆಯ ಶತಮಾನದಲ್ಲಿ ಮಹಮದೀಯರ ದಾಳಿಗಳು, ದೇಶೀ ರಾಜರ ಒಳಜಗಳಗಳು ಅಧಿಕವಾಗಿದ್ದವು. ಸಮಾಜದಲ್ಲಿ ರಾಜಕೀಯ ಶೈಥಿಲ್ಯ ತಲೆದೋರಿದಾಗಲೆಲ್ಲ ಒಂದಿಷ್ಟು ವರ್ಗದ ಜನರು ಜನಸಾಮಾನ್ಯರನ್ನು ಧಾರ್ಮಿಕವಾಗಿ, ಆರ್ಥಿಕವಾಗಿ ದಿಕ್ಕುತಪ್ಪಿಸುವ, ಸುಲಿಯುವ ಕೆಲಸಕ್ಕೆ ಇಳಿಯುತ್ತಾರೆ. ಈ ಎರಡೂ ಕಾಲಘಟ್ಟಗಳಲ್ಲಿ ಉಂಟಾದ ರಾಜಕೀಯ ಅಸ್ಥಿರತೆ ಇಂಥ ಸಂದಿಗ್ಧತೆಯನ್ನು ಹುಟ್ಟುಹಾಕಿತು. ಇಂತಹ ವಿಷಮ ಪರಿಸ್ಥಿತಿಯಲ್ಲಿ ಸಮಾಜಘಾತುಕ ಶಕ್ತಿಗಳ ವಿರುದ್ಧವಾಗಿ ನಿಂತು ಸಮಾಜದಲ್ಲಿ ನ್ಯಾಯ, ಸಮತೆಗಳನ್ನು ಸ್ಥಾಪಿಸಲು ಪ್ರಯತ್ನಿಸಿದವರು ಈ

ಎರಡೂ ಶತಮಾನಗಳ ದಾರ್ಶನಿಕರು. ಈ ನಿಟ್ಟಿನಲ್ಲಿ ಹಲವು ವಿಚಾರಗಳಲ್ಲಿ ಈ ಎರಡೂ ಕಾಲಘಟ್ಟದ ಸಾಮಾಜಿಕ, ಧಾರ್ಮಿಕ, ರಾಜಕೀಯ ವಿಚಾರಗಳಲ್ಲಿ ಹೋಲಿಕೆಗಳನ್ನು ಸಹ ಗುರುತಿಸಬಹುದು. ಪ್ರಸ್ತುತ ಲೇಖನದಲ್ಲಿ ಹನ್ನೆರಡನೆಯ ಶತಮಾನದ ಬಸವಣ್ಣನವರ ವಚನಗಳು ಮತ್ತು ಹದಿನಾರನೆಯ ಶತಮಾನದ ಕನಕದಾಸರ ಕೀರ್ತನೆ, ಕಾವ್ಯಗಳಲ್ಲಿನ ಸಾಮಾಜಿಕ ಕಾಳಜಿಗೆ ಸಂಬಂಧಿಸಿದ ವಿಚಾರಗಳಲ್ಲಿ ಕಂಡುಬರುವ ಕೆಲವು ಸಾಮ್ಯ ವಿಚಾರಗಳನ್ನು ಕುರಿತಂತೆ ತೌಲನಿಕವಾಗಿ ವಿಶ್ಲೇಷಿಸಲು ಉದ್ದೇಶಿಸಲಾಗಿದೆ.

ಭಕ್ತಿಯ ವಿಚಾರದಲ್ಲಿ ಬಸವ-ಕನಕರ ದೃಷ್ಟಿ ಭಿನ್ನವಾಗಿದ್ದರೂ ಸಾಮಾಜಿಕ ಕಾಳಜಿಯ ವಿಷಯ ಬಂದಾಗ ಈರ್ವರ ತತ್ವವಿಚಾರಗಳು ಸಾಕಷ್ಟು ಬಗೆಯಲ್ಲಿ ಹೋಲುತ್ತವೆ. ಇಂತಹ ವಿಚಾರಗಳನ್ನು ಈ ಲೇಖನದಲ್ಲಿ ಹಂತಹಂತವಾಗಿ ನೋಡಬಹುದು. ಮೊದಲಿಗೆ 'ಹುಟ್ಟಿನಾಧಾರಿತ ಶ್ರೇಷ್ಠತೆ'ಯನ್ನು ನಿರಾಕರಿಸುವ ನಿಟ್ಟಿನಲ್ಲಿ ಬರೆದ ಬಸವಣ್ಣನವರ ವಚನಗಳೊಂದಿಗೆ, ಅದೇ ನೆಲೆಯಲ್ಲಿ ಬರೆದ ಕನಕರ ಕೀರ್ತನೆಗಳನ್ನು ತೌಲನಿಕವಾಗಿ ನೋಡಬಹುದು.

> ಚೆನ್ನಯ್ಯನ ಮನೆಯ ದಾಸನ ಮಗನು,
> ಕಕ್ಕಯ್ಯನ ಮನೆಯ ದಾಸಿಯ ಮಗಳು,
> ಇವರಿಬ್ಬರು ಹೊಲದಲು ಬೆರಣಿಗೆ ಹೋಗಿ, ಸಂಗವ ಮಾಡಿದರು.
> ಇವರಿಬ್ಬರಿಗೆ ಹುಟ್ಟಿದ ಮಗ ನಾನು,
> ಕೂಡಲಸಂಗಮದೇವ ಸಾಕ್ಷಿಯಾಗಿ. (ಸಂ.ಕಲಬುರ್ಗಿ, ಪು. 83)

> ದಾಸದಾಸರ ಮನೆಯ ದಾಸಿಯರ ಮಗ ನಾನು । ಪ ।
> ಸಾಸಿರನಾಮದೊಡೆಯ ರಂಗಯ್ಯನ ಮನೆಯ । ಅ.ಪ ।

> ಹಲವು ದಾಸರ ಮನೆಯ ಹೊಲೆದಾಸ ನಾನಯ್ಯ
> ಕುಲವಿಲ್ಲದ ದಾಸ ಕುರುಬದಾಸ
> ಛಲದಿ ನಿನ್ನ ಭಜಿಸುವವರ ಮನೆಯ ಮಾದಿಗದಾಸ
> ಸಲೆ ಮುಕ್ತಿ ಪಾಲಿಸೆನ್ನೊಡೆಯ ಆದಿಕೇಶವನೆ ॥
> (ಸಂ. ಸತ್ಯನಾರಾಯಣರಾವ್, ಪು. 112)

ಈ ಮೇಲಿನ ವಚನ-ಕೀರ್ತನೆಗಳೆರಡೂ ಶತಮಾನಗಳಿಂದ ಸಮಾಜದಲ್ಲಿ ತಿರಸ್ಕಾರಕ್ಕೆ ಗುರಿಯಾಗಿ ಅಂಚಿಗೆ ತಳ್ಳಲ್ಪಟ್ಟ ಜನರಿಗೆ ಆತ್ಮಸ್ಥೈರ್ಯವನ್ನು ತುಂಬುವ ಹಿನ್ನೆಲೆಯಲ್ಲಿ ರಚನೆಯಾಗಿರುವುದು ಸುಸ್ಪಷ್ಟ. ಇಲ್ಲಿ ಬಸವಣ್ಣ ಮತ್ತು ಕನಕದಾಸರಿಬ್ಬರ ಉದ್ದೇಶವೂ ನೊಂದವರೊಳಗೆ ಒಂದಾಗಿ ಬೆರೆತು ಅವರೊಳಗಿನ ಕೀಳರಿಮೆಯನ್ನು ಹೋಗಲಾಡಿಸು ವುದು. ಚಾತುರ್ವರ್ಣ್ಯ ಪದ್ಧತಿ ಹುಟ್ಟು ಹಾಕಿರುವಂತಹ ಮೇಲು-ಕೀಳು, ಶ್ರೇಷ್ಠ-ಕನಿಷ್ಠ, ದ್ವಿಜ-ಅಂತ್ಯಜ, ಸ್ಪೃಶ್ಯ-ಅಸ್ಪೃಶ್ಯ ಇತ್ಯಾದಿ ತರತಮಗಳ ಅರಿವು ಸಮಾಜದಲ್ಲಿ 'ಅಂತ್ಯಜ' ಬದುಕುತ್ತಿರುವ ಹಲವು ವರ್ಗಗಳಿಗೆ ಇರುವುದಿಲ್ಲ. ನಮ್ಮ ಹುಟ್ಟು ದೈವನಿರ್ಮಿತ ನಿಯಮಗಳಿಗನುಸಾರವಾಗಿ, ಪಾಪಕರ್ಮ ಗಳಿಗನುಸಾರವಾಗಿ

ಆಗಿದೆ ಎನ್ನುವುದನ್ನೇ ಅವರು ಒಪ್ಪಿಕೊಂಡು ಬದುಕುವವರು. ಹೀಗಿರುವಾಗ ಬಸವ–ಕನಕರು ಮೊದಲಿಗೆ ಅವರೊಳಗಿನ ಕೀಳರಿಮೆಯನ್ನು, 'ಹುಟ್ಟಿನಾಧಾರಿತ ಶ್ರೇಷ್ಠ–ಕನಿಷ್ಠ ಭಾವನೆ'ಗಳನ್ನು ತೊಡೆದು ಹಾಕಲು ಪ್ರಯತ್ನಿಸಿದರು. ಇಲ್ಲಿ ಬಸವಣ್ಣ ತಾನು 'ಹೊಲೆಯರ' ಮನೆಯ ಮಗನಾಗಿ ಹುಟ್ಟಿದವನು ಎಂದರೆ, ಕನಕರು ಸಹ 'ಹಲವು ದಾಸರ ಮನೆಯ ಹೊಲೆಯ ದಾಸನು ನಾನು' ಎಂದು ತಮ್ಮ ಪರಿಚಯವನ್ನು ಹೇಳುತ್ತಾರೆ. ಈ ಇಬ್ಬರ ಉದ್ದೇಶವೂ ಹುಟ್ಟನ್ನು ಆಧರಿಸಿ ನಿರ್ಧರಿಸಲಾಗುವ ವ್ಯಕ್ತಿಗಳ ಶ್ರೇಷ್ಠತೆಯನ್ನು ನಿರಾಕರಿಸುವುದಾಗಿದೆ. ಬಸವ–ಕನಕರಂತಹ ಜ್ಞಾನಿಗಳು ತಮ್ಮ ಅಸ್ತಿತ್ವವನ್ನು ಅಂತ್ಯಜರಾಗಿ ಪರಿಚಯಿಸಿಕೊಳ್ಳುವುದು ಅಂಚಿಗೆ ತಳ್ಳಲ್ಪಟ್ಟ ಜನರಲ್ಲಿ ಆತ್ಮವಿಶ್ವಾಸವನ್ನು ತುಂಬುವ ಸಲುವಾಗಿ. ಈ ವಿಚಾರದಲ್ಲಿ ಇವರಿಬ್ಬರ ದೃಷ್ಟಿ ಒಂದೇ ತೆರನಾಗಿದೆ. ಈ ಎರಡು ವಚನ–ಕೀರ್ತನೆಗಳಲ್ಲದೇ ಹಲವು ಸಂದರ್ಭಗಳಲ್ಲಿ ಇಂತಹ ದೃಷ್ಟಿಕೋನಗಳು ಮತ್ತೆ ಮತ್ತೆ ಕಂಡುಬರುವುದನ್ನು ಇತರ ಸಾಹಿತ್ಯದಲ್ಲಿ ಗುರುತಿಸಲು ಸಾಧ್ಯವಿದೆ. ಲೇಖನದ ವ್ಯಾಪ್ತಿಯ ದೃಷ್ಟಿಯಿಂದ ಹಲವು ವಿಚಾರಗಳನ್ನು ಸಂಕ್ಷಿಪ್ತಗೊಳಿಸಲಾಗಿದೆ.

ಬಸವಣ್ಣ ಮತ್ತು ಕನಕರ ಸಾಹಿತ್ಯದಲ್ಲಿ ಕಂಡುಬರುವ ಇನ್ನೊಂದು ಪ್ರಮುಖ ವಿಚಾರವೆಂದರೆ 'ಭಕ್ತ ಅಥವಾ 'ಶರಣ'ರನ್ನು ಅವರ ಮನಸ್ಸಿನ ಪರಿಶುದ್ಧತೆ, ಸದ್ಗುಣಗಳಿಗನುಸಾರವಾಗಿ ಅವರ ಶ್ರೇಷ್ಠತೆಯನ್ನು ಗುರುತಿಸುವುದು ಮತ್ತು ಅವರನ್ನು 'ಒಡೆಯ', 'ಮಹಾತ್ಮ'ರೆಂಬಂತೆ ಕಂಡು ತಾವು ಅವರ ಅಡಿಯಾಳೆಂದು ಹೇಳಿಕೊಳ್ಳುವುದು. ಬಸವಣ್ಣನ ವಚನಗಳಲ್ಲಿ ಶಿವಶರಣರನ್ನು ಆತ 'ದೈವತ್ವ'ದ ನೆಲೆಯಲ್ಲಿಯೇ ಕಾಣುತ್ತಾರೆ. ಕನಕರು ಕೂಡ ಹರಿಭಕ್ತರಲ್ಲಿ ಹರಿಯ ಅಂಶವನ್ನು ಕಾಣುತ್ತಾ ಗೌರವಿಸುತ್ತಾರೆ. "ಭಕ್ತಿಹೀನರ ಮನೆಯ ಪಟ್ಟ ಸುಪ್ಪತ್ತಿಗೆಗಿಂತ ಭಕ್ತರ ಮನೆಯ ಕಡೆಬಾಗಿಲ ಕಾಯುವುದು ಲೇಸು" (ಸತ್ಯನಾರಾಯಣರಾವ್, ಪು.6) ಎನ್ನುವ ಕನಕರ ಮಾತು ಅವರು ಹರಿಭಕ್ತರಲ್ಲಿ ಇಟ್ಟಿದ್ದ ಪ್ರೀತಿ, ವಿಶ್ವಾಸ, ಗೌರವಾದರಗಳನ್ನು ಸೂಚಿಸುತ್ತದೆ. ಬಸವ–ಕನಕ ಕ್ರಮವಾಗಿ ಶಿವ ಮತ್ತು ವಿಷ್ಣುವಿನ ಭಕ್ತ, ಸೇವಕ, ಆಳು, ಸರ್ವಸ್ವ, ಒಡೆಯ ಎಂದೆಲ್ಲಾ ತಮ್ಮನ್ನು ಕರೆದುಕೊಂಡಿರುವಂತೆ, ಕ್ರಮವಾಗಿ ಆ ದೇವತೆಗಳ ಭಕ್ತರನ್ನೂ ಅದೇ ನೆಲೆಯಲ್ಲಿಯೇ ಕರೆದಿರುವುದು, ಗೌರವಿಸಿರುವುದನ್ನು ಕಾಣಬಹುದು. ಭಕ್ತ ಮತ್ತು ದೈವವನ್ನು ಒಂದೇ ನೆಲೆಯಲ್ಲಿ ಪರಿಗಣಿಸುವಂತಹ ದೃಷ್ಟಿ ಇಲ್ಲಿ ಎದ್ದು ಕಾಣುತ್ತಿದೆ. ಭಕ್ತನೊಳಗಿನ ಭಗವಂತನಿಗೆ ಈ ಇಬ್ಬರೂ ಸಹ ಶರಣಾಗುತ್ತಾರೆ. ಈ ಕೆಳಗಿನ ವಚನ ಮತ್ತು ಕೀರ್ತನೆಯ ಸಾಲುಗಳು ಈ ಮಾತಿಗೆ ಪೂರಕವಾಗಿವೆ.

ಚೆನ್ನ ಚೇರಮನ ಬಂಟ ನಾನಯ್ಯ,
ಎನ್ನ ಚಾಗುಬೊಲ್ಲನ ಕಾವ ಗೋವನೆಂಬರು.
ಕೂಡಲಸಂಗನ ಶರಣರೊಡೆಯರಾಗಿ
ತಮ್ಮ ತೊತ್ತಿನ ಮಗನೆಂದು ಒಲಿದಂತೆ ನುಡಿವರು. (ಸಂ. ಕಲಬುರ್ಗಿ, ಪು. 81)

ಕಾಲಕರ್ಮದೊಳುಪೇಕ್ಷೆಯ ಮಾಡಿ ಹರಿಭಕುತಿ
ಶೀಲರಹಿತ ಬ್ರಾಹ್ಮಣನಾಗಲೊಲ್ಲೆ
ಮೇಲನರಿತು ವಿಷ್ಣುಭಕುತಿಯ ಮಾಳ್ಪ ಚಾಂ–
ಡಾಲನ ಮನೆಯ ಬಾಗಿಲ ಕಾಯಿಸೆನ್ನನು

(ಸಂ. ಸತ್ಯನಾರಾಯಣರಾವ್, ಪು. 121)

ಈ ಮೇಲಿನ ವಚನ ಮತ್ತು ಕೀರ್ತನೆಗಳೆರಡರಲ್ಲೂ ಬಸವ–ಕನಕರು ತಾವು ಭಕ್ತರ ಸೇವಕರೆಂಬುದಾಗಿ ಕರೆದುಕೊಂಡಿದ್ದಾರೆ. ಬಸವಣ್ಣ ಬಿಜ್ಜಳನ ಆಸ್ಥಾನದಲ್ಲಿ ದಂಡನಾಯಕನಾಗಿದ್ದರೂ ಸಹ 'ಆನು ಈ ಬಿಜ್ಜಳಂಗೆ ಅಂಜುವೆನೆ?' ಎನ್ನುತ್ತಾ ಅವನ ದೊರೆತನವನ್ನು ನಿರಾಕರಿಸಿ ಶಿವ ಮತ್ತು ಶಿವಭಕ್ತರಿಗೆ ಆ ಸ್ಥಾನವನ್ನು ನೀಡುತ್ತಾನೆ. 'ಪ್ರಭುತ್ವ' ಮತ್ತು 'ವರ್ಣಾಶ್ರಮ' ಎಲ್ಲಾ ಕಾಲದಲ್ಲಿಯೂ ಸಮಾಜದ ಒಂದಿಷ್ಟು ಜನರನ್ನು 'ಅಂತ್ಯಜ'ರಾಗಿ ನಿಲ್ಲಿಸಿವೆ. ಆದರೆ ವಚನ ಚಳುವಳಿ ಮತ್ತು ಹರಿದಾಸ ಸಾಹಿತ್ಯ ಶತಮಾನಗಳಿಂದ ಇದ್ದಲ್ಲೇ ಇದ್ದ ಈ 'ಅಂತ್ಯಜರ ಸ್ಥಾನಪಲ್ಲಟವಾಗಲು ಸಾಧ್ಯವಾಯಿತು. ಈ ಎರಡು ಸಂದರ್ಭದಲ್ಲಿ ಭಕ್ತಿಮಾರ್ಗಗಳು ಮಾನವೀಯ ನೆಲೆಯಲ್ಲಿ, ಸಾಮಾಜಿಕ ಸಮತೆಗಾಗಿ ಟೊಂಕ ಕಟ್ಟಿ ನಿಂತದ್ದು ತಳಸಮುದಾಯಗಳು ತಮಗಾದ ಅನ್ಯಾಯವನ್ನು ಅರಿಯಲು, ಅದರಿಂದ ಆಚೆ ಬರಲು ಸಾಧ್ಯವಾಯಿತು.

ಈ ಮೇಲಿನ ವಚನ ಕೀರ್ತನೆಗಳು 'ಒಡೆಯ–ಸೇವಕ' ಸಂಬಂಧವನ್ನು ಭಿನ್ನವಾಗಿ ವ್ಯಾಖ್ಯಾನಿಸುತ್ತವೆ. ಇಲ್ಲಿ ಬಸವಣ್ಣ ಶಿವಭಕ್ತರಾದ ಚೆನ್ನ, ಚೇರ, ಚಾಗುಬೊಲ್ಲನ ಬಂಟ, ಕಾಯುವವ ಎನ್ನುತ್ತಾ ತಾನು 'ಶರಣ ಒಡೆಯರ' ತೊತ್ತಿನ ಮಗ ಎಂದು ಹೇಳಿಕೊಂಡಿರುವುದನ್ನು ಗಮನಿಸಬಹುದು. ಇದುವರೆಗೂ ಆ ಸಮಾಜದಲ್ಲಿ ಒಡೆಯ–ಸೇವಕರ ಸಂಬಂಧಗಳನ್ನು ಅಧಿಕಾರದ ನೆಲೆಯಲ್ಲಿ, ವರ್ಣಾಶ್ರಮದ ಹಿನ್ನೆಲೆಯಲ್ಲಿ ಕಂಡ ಜನತೆಗೆ ಬಸವತತ್ವ ಭಿನ್ನವಾಗಿ, ಮಾನವೀಯವಾಗಿ ಕಾಣುತ್ತದೆ. ಇಂತಹ ಪರ್ಯಾಯ ತತ್ವಗಳೇ ಅಂಚಿಗೆ ತಳ್ಳಲ್ಪಟ್ಟ ಜನರಲ್ಲಿ ಆತ್ಮವಿಶ್ವಾಸದ ಕಿಡಿ ಹೊತ್ತಲು ಕಾರಣವಾಗುತ್ತದೆ. ಮೇಲೆ ಉದಾಹರಿಸಿರುವ ಕನಕರ ಕೀರ್ತನೆಯೂ ಅಷ್ಟೇ ಸಮರ್ಥವಾಗಿ ವರ್ಣಾಶ್ರಮ ಪದ್ಧತಿಯನ್ನು ಪ್ರಶ್ನಿಸಿ ಶ್ರೇಷ್ಠ–ಕನಿಷ್ಠ, ಸ್ಪೃಶ್ಯ–ಅಸ್ಪೃಶ್ಯತೆಯ ಅರ್ಥಗಳನ್ನು ಭಿನ್ನವಾಗಿ ವ್ಯಾಖ್ಯಾನಿಸುತ್ತದೆ. ಛಾಂದೋಗ್ಯ ಉಪನಿಷತ್ತಿನಲ್ಲಿ ಚಾಂಡಾಲರನ್ನು ಅಸ್ಪೃಶ್ಯರು, ಅತ್ಯಂತ ನಿಕೃಷ್ಟರು ಎಂದು ಕರೆಯಲಾಗಿದೆ. ಯಾವುದೋ ಕಾಲ ಸಂದರ್ಭದಲ್ಲಿ ಯಾವುದೋ ಕಾರಣಕ್ಕೆ ಯಾರೋ ಬರೆದ ಇಂತಹ ಧರ್ಮಶಾಸ್ತ್ರ ನಿಯಮಗಳು ನಿರಂತರವಾಗಿ ಚಾಲ್ತಿಯನ್ನು ಪಡೆಯುವುದು ಅಮಾನವೀಯ, ವರ್ಣ, ಜಾತಿ, ವರ್ಗಗಳನ್ನು ಆ ದೇವರೇ ಸೃಷ್ಟಿ ಮಾಡಿರಲಿ, ಅವುಗಳನ್ನು ನಾವು ಸರ್ವೋದಯಕ್ಕಾಗಿ ತಿರಸ್ಕರಿಸಬೇಕಿದೆ ಎಂದು ಕುವೆಂಪು ಅವರು ಹೇಳುತ್ತಾರೆ. ಚಾಂಡಾಲ ಅಥವಾ ದ್ವಿಜನಾಗಿ ಹುಟ್ಟಿದ ಮಾತ್ರಕ್ಕೆ ಯಾವುದೇ ಮನುಷ್ಯ ಶ್ರೇಷ್ಠ ಅಥವಾ ಕನಿಷ್ಠನಲ್ಲ.

ಆತ ಶ್ರೇಷ್ಠನಾಗುವುದು ಮನಸ್ಸಿನ ಪರಿಶುದ್ಧತೆಯ ಮೂಲಕವಷ್ಟೆ. ಇದನ್ನು ಅರ್ಥ ಮಾಡಿಸಲು ನಿರ್ಮಲ ಮನದಿಂದ ಹರಿಭಕ್ತಿಯನ್ನು ಮಾಡುವ ಚಾಂಡಾಲನ ಮನೆಯ ಬಾಗಿಲನ್ನು ಕಾಯುವುದು ಶ್ರೇಷ್ಠವಾದ ಕೆಲಸವೆಂದು ಹರಿದಾಸರು ಬಹು ತೀಕ್ಷ್ಣವಾಗಿ ನುಡಿಯುತ್ತಾರೆ. ಇಲ್ಲಿ ಕನಕರು ಬ್ರಾಹ್ಮಣ ಮತ್ತು ಚಾಂಡಾಲ ಎನ್ನುವ ಎರಡೂ ಜಾತಿಗಳನ್ನು ನಿರಾಕರಿಸಿ ಪರಿಶುದ್ಧ ಭಕ್ತಿ ಮತ್ತು ಮನಸ್ಸನ್ನೇ ಶ್ರೇಷ್ಠತೆಯ ಸ್ಥಾನದಲ್ಲಿ ನಿಲ್ಲಿಸುತ್ತಾರೆ. ಈ ಮೇಲಿನ ವಚನದಲ್ಲಿನ 'ಬಂಟ', 'ಕಾವ' ಎನ್ನುವ ಪದಗಳು, ಕೀರ್ತನೆಯಲ್ಲಿನ 'ಬಾಗಿಲನ್ನು ಕಾಯಿಸೆನ್ನ' ಎನ್ನುವ ಪದಗಳಲ್ಲಿ ಈ ಇಬ್ಬರೂ ಭಕ್ತರನ್ನು ಭಗವಂತನಂತೆ ನೋಡಿರುವುದು ಒಂದು ದೃಷ್ಟಿಯಾದರೆ, 'ಅಂತ್ಯಜರೆನಿಸಿಕೊಂಡವರ ಕೀಳರಿಮೆಗಳನ್ನು ತೊಡೆಯಲು ಅವರೊಳಗೆ ಒಂದಾಗಿ ಬೆರೆಯುವ ಇನ್ನೊಂದು ಮಾರ್ಗವೂ ಆಗಿರುವಂತಿದೆ.

ಈ ಇಬ್ಬರು ದಾರ್ಶನಿಕರ ಸಾಹಿತ್ಯದಲ್ಲಿ ಸಾಮ್ಯವಾಗಿ ಕಾಣುವ ಮತ್ತೊಂದು ವಿಚಾರವೆಂದರೆ 'ಕುಲದ ಪ್ರಶ್ನೆ'. ಕುಲದ ಶ್ರೇಷ್ಟತೆಯನ್ನು ಈ ಈರ್ವರೂ ಕಟುವಾಗಿಯೇ ವಿರೋಧಿಸುತ್ತಾರೆ. ಪಂಪನಿಂದ ಇಲ್ಲಿಯವರೆಗೂ ಕನ್ನಡದ ಕವಿ, ಚಿಂತಕರನ್ನು ಕುಲದ ಪ್ರಶ್ನೆ ತೀವ್ರವಾಗಿ ಕಾಡಿದೆ. ಕಾಲಕಾಲಕ್ಕೆ ಕವಿಗಳು, ದಾರ್ಶನಿಕರು, ಸಂತರು 'ಕುಲಹಿರಿಮೆ'ಯನ್ನು ತಿರಸ್ಕರಿಸಿ ಕುಲವನ್ನಿಟ್ಟುಕೊಂಡು ಸಮಾಜದಲ್ಲಿ ಅಂತರ ಸೃಷ್ಟಿಸುವವರನ್ನು ಅನೇಕ ಬಗೆಯಲ್ಲಿ ಪ್ರಶ್ನಿಸಿ, ಕುಲಶ್ರೇಷ್ಠತೆಯ ಪ್ರಜ್ಞೆಯನ್ನು ಅವೈಜ್ಞಾನಿಕವೆಂದು ನಿರಾಕರಿಸಿದ್ದಾರೆ. ಪಂಪ 'ಕುಲಂ ಕುಲಮಲ್ತು, ಚಲಂ ಕುಲಂ, ಗುಣಂ ಕುಲಂ, ಅಭಿಮಾನವೊಂದೆ ಕುಲಂ, ಅಣ್ಬು ಕುಲಂ' ಎಂದು ಹೇಳಬೇಕಾದರೆ ಅಂದಿನ ಸಮಾಜದಲ್ಲಿ 'ಕುಲಶ್ರೇಷ್ಠತೆ' ಒಂದು ಪಿಡುಗಿನ ರೀತಿ ಹಬ್ಬಿತ್ತೆಂದೇ ಊಹಿಸಬಹುದು. ಹನ್ನೆರಡನೆಯ ಶತಮಾನದಲ್ಲೂ ಈ ಪ್ರಜ್ಞೆ ಮುಂದುವರೆದಿದ್ದರಿಂದಲೇ ಬಸವಣ್ಣನವರು ಅನೇಕ ವಚನಗಳಲ್ಲಿ ಇದನ್ನು ಟೀಕಿಸಿ, ನಿರಾಕರಿಸಿರುವುದು. ಸ್ವತಃ ತಾವೇ ತಮ್ಮನ್ನು "ಉತ್ತಮಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯಾ" (ಕಲಬುರ್ಗಿ, ಪು.83) ಎಂಬುದಾಗಿ ಶರಣರಲ್ಲಿ ವಿನಂತಿಸಿಕೊಳ್ಳುತ್ತಾರೆ. "ಆವ ಕುಲವಾದಡೇನು? ಶಿವಲಿಂಗವಿದ್ದವನೆ ಕುಲಜನು, ಕುಲವನರಸುವರೆ ಶರಣರಲ್ಲಿ, ಜಾತಿಸಂಕರನಾದ ಬಳಿಕ?" (ಕಲಬುರ್ಗಿ, ಪು.180) ಎನ್ನುತ್ತಾ ಕುಲಜನೆಂದರೆ ಯಾರು ಎಂಬುದನ್ನು ತಿಳಿಸುತ್ತಾರೆ. "ಕುಲವನರಸದಿರಿಂ ಭೋ! ಕುಲದಿಂದ ಮುನ್ನೇನಾದಿರಿಂ ಭೋ! ಸಾಕ್ಷಾತ್ ಅಗತ್ಯ ಕಬ್ಬಿಲ, ದುರ್ವಾಸ ಮುಚ್ಚಿಗ, ಕಶ್ಯಪ ಕಮ್ಮಾರ.." (ಕಲಬುರ್ಗಿ, ಪು.147). "ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ... ಕರ್ಣದಲ್ಲಿ ಜನಿಸಿದರುಂಟೆ ಜಗದೊಳಗೆ?.." (ಕಲಬುರ್ಗಿ, ಪು.148) ಎನ್ನುತ್ತಾ 'ಕುಲಶ್ರೇಷ್ಠತೆ'ಯ ಜನ್ಮ ಜಾಲಾಡುತ್ತಾರೆ.

ಮುಂದುವರೆದು "ಸಕಲಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲಸಂಗನ ಶರಣರೆ ಕುಲಜರು" (ಕಲಬುರ್ಗಿ, ಪು.148) ಎಂಬ ನಿಲುವಿಗೆ ಬಂದು ನಿಲ್ಲುತ್ತಾರೆ.

ಹನ್ನೆರಡನೆಯ ಶತಮಾನದ ಬಸವಣ್ಣನವರನ್ನು 'ಕುಲದ ಪ್ರಶ್ನೆ' ಕಾಡಿರುವಂತೆ ಹದಿನಾರನೆಯ ಶತಮಾನದ ಕನಕದಾಸರನ್ನೂ ಸಹ ಕಾಡಿದೆ. ಅದರಲ್ಲೂ ಸಮಾಜದ ತಳಸಮುದಾಯದಿಂದ ಬಂದಂತಹ ಕನಕರು ಸ್ವತಃ ಸಾಕಷ್ಟು ಅವಮಾನಗಳನ್ನು 'ಕುಲ'ದ ಕಾರಣಕ್ಕಾಗಿಯೇ ಅನುಭವಿಸಿದರು. 'ರಾಮಧಾನ್ಯ ಚರಿತ್ರೆ' ಕನಕರ ಆತ್ಮಚರಿತ್ರೆಯಂತೆ ತೋರುತ್ತದೆ. 'ನರೆದಲಗ' ಮತ್ತು 'ಸ್ನೇಹಿ'ಯನ್ನು ಸಾಂಕೇತಿಕವಾಗಿ ಬಳಸಿಕೊಂಡು ಮೇಲ್ವರ್ಗದವರ ಹುನ್ನಾರವನ್ನು ಬಯಲಿಗೆಳೆಯುತ್ತಾರೆ. ಕನಕರನ್ನು ಕುಲದ ಕಾರಣಕ್ಕೆ ಅವಮಾನಿಸಿದವರಿಗೆ ಅವರು ನೀಡಿರುವ ತಿರುಗೇಟಿನಂತೆ ಇದು ಕಾಣುತ್ತದೆ. ಕನಕರು ಕೀರ್ತನೆಗಳ ಮೂಲಕ ಸಾಕಷ್ಟು ಕಡೆಗಳಲ್ಲಿ ಕುಲದ ವಿಚಾರವಾಗಿ ಮಾತನಾಡುತ್ತಾರೆ. ಬಸವಣ್ಣನವರು 'ಶಿವಶರಣರೇ ಕುಲಜರು' ಎಂದಿರುವಂತೆ ಕನಕರು "ಸಿರಿಕಾಗಿನೆಲೆಯಾದಿಕೇಶವರಾಯನ ಚರಣಕಮಲವನು ಕೀರ್ತಿಸುವನೆ ಕುಲಜ" (ಸತ್ಯನಾರಾಯಣರಾವ್, ಪು.182), ಮುಂದುವರೆದು 'ಕುಲವಿಲ್ಲ ಜ್ಞಾನಿಗಳಿಗೆ' ಎನ್ನುವ ನಿಲುವನ್ನು ತಾಳುತ್ತಾರೆ. ಈ ಕೆಳಗಿನ ಕನಕರ ಕೀರ್ತನೆಯೊಂದು ಕುಲ ಶ್ರೇಷ್ಠತೆಯನ್ನು ಸ್ಪಷ್ಟವಾಗಿ ನಿರಾಕರಿಸುತ್ತದೆ.

ಕುಲ ಕುಲ ಕುಲವೆಂದು ಹೊಡೆದಾಡದಿರಿ
ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ ॥ ಪ ॥

ಹುಟ್ಟದ ಯೋನಿಗಳಿಲ್ಲ ಮೆಟ್ಟದ ಭೂಮಿಗಳಿಲ್ಲ
ಅಟ್ಟು ಉಣ್ಣದ ವಸ್ತುಗಳಿಲ್ಲ
ಗುಟ್ಟು ಕಾಣಿಸ ಬಂತು ಹಿರಿದೇನು ಕಿರಿದೇನು ॥

ನೆಟ್ಟನೆ ಸರ್ವಜ್ಞನ ನೆನೆ ಕಂಡ್ಯ ಮನುಜ
ಜಲವೆ ಸಕಲ ಕುಲಕ್ಕೆ ತಾಯಿಯಲ್ಲವೆ
ಜಲದ ಕುಲವನೇನಾದರೂ ಬಲ್ಲಿರಾ
ಜಲದ ಬೊಬ್ಬುಳಿಯಂತೆ ಸ್ಥಿರವಲ್ಲ ಈ ದೇಹ
ನೆಲೆಯ ಅರಿತು ನೀನೆನೆ ಕಂಡ್ಯ ಮನುಜ ॥

(ಸತ್ಯನಾರಾಯಣರಾವ್, ಪು.182)

ಈ ಕೀರ್ತನೆ ಹದಿನಾರನೆಯ ಶತಮಾನದ ಸಾಮಾಜಿಕ ಪರಿಸ್ಥಿತಿಗೆ ಕನ್ನಡಿ ಹಿಡಿದಂತಿದೆ. 'ಕುಲಪ್ರಶ್ನೆ'ಯನ್ನಿಟ್ಟುಕೊಂಡು ಸಮಾಜದಲ್ಲಿ ಅಂತರವನ್ನು ಸೃಷ್ಟಿಸುವವರಿಗೆ ಈ ಕೀರ್ತನೆ ದಿಟ್ಟವಾದ ಅರಿವಿನ ಉತ್ತರವಾಗಿ ನಿಲ್ಲುತ್ತದೆ. ಪ್ರತಿಯೊಂದು ಜೀವಿಯ ಹುಟ್ಟು ಯೋನಿಮಾರ್ಗದಲ್ಲಿಯೇ ಆಗುತ್ತದೆ! ಮೆಟ್ಟುವ ನೆಲ, ಕುಡಿಯುವ ಜಲವೂ ಒಂದೇ ಆಗಿದೆ. ಹೀಗಿರುವಾಗ ಕುಲ ಕುಲವೆಂದು ಬಡಿದಾಡುವುದು ಅವೈಜ್ಞಾನಿಕ ಎಂಬ

ಭಾವ ಈ ಕೀರ್ತನೆಯಲ್ಲಿದೆ. ಬಸವಣ್ಣನವರ ವಚನಗಳೂ ಸಹ ಇದೇ ರೀತಿ ಕುಲದ ಅವೈಜ್ಞಾನಿಕತೆಯನ್ನೇ ಹೇಳಿರುವುದನ್ನು ಈ ಹಿಂದೆಯೇ ವಿವರಿಸಲಾಗಿದೆ. ಬಸವಣ್ಣನವರ "ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ, ಜಲವೊಂದೆ ಶೌಚಾಚಮನಕ್ಕೆ, ಕುಲವೊಂದೆ: ತನ್ನ ತಾನರಿದವಂಗೆ" (ಕಲಬುರ್ಗಿ, ಪು.229) ಎಂಬ ವಚನ ಈ ಕೀರ್ತನೆಯನ್ನು ಹೋಲುತ್ತದೆ. ಕನಕ 'ಹುಟ್ಟದ ಯೋನಿಗಳಿಲ್ಲ' ಎಂದು ಹೇಳಿದರೆ, ಬಸವಣ್ಣ ಮಾರ್ಮಿಕವಾಗಿ 'ಕರ್ಣದಲ್ಲಿ ಜನಿಸಿದವರುಂಟೆ?' ಎಂದು ಪ್ರಶ್ನಿಸಿ ಕುಲ ಶ್ರೇಷ್ಠತೆಯನ್ನು ನಿರಾಕರಿಸಿದ್ದಾರೆ.

ಇನ್ನೊಂದು ಪ್ರಮುಖ ಸಾಮ್ಯತೆ ಎಂದರೆ ಬಸವ-ಕನಕರಿಬ್ಬರೂ ಏಕದೇವತಾರಾಧನೆಗೆ ಒತ್ತು ಕೊಟ್ಟಿದುದು ಮತ್ತು ಕ್ಷುದ್ರದೈವಗಳನ್ನು ನಿರಾಕರಿಸಿದುದು. ಬಸವ ಶಿವನನ್ನು, ಕನಕ ವಿಷ್ಣುವನ್ನು ದೈವವಾಗಿ ಸ್ವೀಕರಿಸಿ, ಆ ದೈವಗಳಿಗೆ ತಮ್ಮ ಇಡೀ ಬದುಕನ್ನೇ ಸಮರ್ಪಿಸಿದವರು. ಏಕದೇವತಾರಾಧನೆಯನ್ನು ಪ್ರತಿಪಾದಿಸಿರುವ ಬಗೆಗಿನ ಚರ್ಚೆಗಳೇನೆ ಇರಲಿ, ಇದು ಜನಸಾಮಾನ್ಯರನ್ನು ಒಗ್ಗೂಡಿಸುವ ಮೂಲಕ, ಸಾಮಾನ್ಯ ಜನತೆಯನ್ನು ಧಾರ್ಮಿಕ ವಂಚನೆಗಳಿಂದ ಕಾಪಾಡಿರುವುದಂತೂ ನಿಜ. ಹಲವು ದೈವಗಳನ್ನು ಸೃಷ್ಟಿಸಿ ಸಮಾಜದ ಕೆಲವು ವರ್ಗಗಳು ಅದರಿಂದ ಲಾಭ ಮಾಡಿಕೊಂಡದ್ದು ಚಾರಿತ್ರಿಕ ಸತ್ಯ. ಬಸವ-ಕನಕರಿಬ್ಬರೂ ಇಂತಹ ಧಾರ್ಮಿಕ ವಂಚನೆಗಳ ವಿರುದ್ಧ ಗಟ್ಟಿಯಾಗಿ ಧ್ವನಿ ಎತ್ತಿದ್ದಾರೆ ಎನ್ನುವುದಕ್ಕೆ ಈ ಕೆಳಗಿನ ಕಾವ್ಯ ಭಾಗಗಳು ಪುರಾವೆ ನೀಡುತ್ತವೆ.

ಮಡಕೆ ದೈವ, ಮೊರ ದೈವ, ಬೀದಿಯ ಕಲ್ಲು ದೈವ
ಹಣಿಗೆ ದೈವ, ಬಿಲ್ಲನಾರಿ ದೈವ, ಕಾಣಿರೊ
ಕೊಳಗ ದೈವ, ಗಿಣ್ಣಿಲು ದೈವ, ಕಾಣಿರೊ
ದೈವ ದೈವವೆಂದು ಕಾಲಿಡಲಿಂಬಿಲ್ಲ,
ದೈವನೊಬ್ಬನೆ ಕೂಡಲಸಂಗಮದೇವ (ಕಲಬುರ್ಗಿ, ಪು. 139, 140)

ಠಕ್ಕು ದೈವದ ಗೊಡವೆ ಬೇಡ ನರಕ ತಪ್ಪದು
ಸುತ್ತಣವರ ಮಾತ ಕೇಳಿ ಗುತ್ತಿಯ ಎಲ್ಲಮ್ಮಗೊಲಿದು
ಬತ್ತಲೆಯ ದೇವರೆದುರು ಬರುವುದು ನೋಡಿರೊ
ಮತ್ತೆ ಬೇವಿನುಡಿಗೆಯ ಅರ್ಥಿಯಿಂದುಟುಗೊಂಡು
.......................................................................... ॥ 2 ॥

ಬಾಳುತಿಪ್ಪ ಕೋಣ ಕುರಿಯ ಏಳಬೀಳ ಕೊರಳ ಕೊಯ್ದು
ಬೀಳಬೇಡಿ ನರಕಕೆಂದು ಹೇಳ ಬಂದೆನೊ ॥ 3 ॥
.......................................................
ಜಡದೈವಗಳ ಇಂಥ ಪೂಜೆ ಬೇಡ ಕಾಣಿರೋ ॥5॥

(ಸತ್ಯನಾರಾಯಣರಾವ್, ಪು.71)

ಈ ಮೇಲಿನ ಬಸವ-ಕನಕರ ಕೀರ್ತನೆಗಳಲ್ಲಿ ದೇವರು-ಧರ್ಮದ ಆಚರಣೆಗಳ ಹೆಸರಿನಲ್ಲಿ ಜನತೆ ಮೋಸ ಹೋಗುತ್ತಿರುವವರೆಂಬ ನೋವಿದೆ. ಏಕದೇವತಾರಾಧನೆಯ

ಮೂಲಕ ಸರಳ ಭಕ್ತಿ–ಮುಕ್ತಿಯನ್ನು ಪ್ರತಿಪಾದಿಸಿ ಇಂತಹ ಅಂಧ ಆಚರಣೆಗಳು, ಅಮಾನವೀಯ ಪದ್ಧತಿಗಳಿಂದ ದೂರವಿರುವಂತೆ ಮಾಡಲು ಈ ಇಬ್ಬರೂ ಜನರಲ್ಲಿ ಅರಿವು ಮೂಡಿಸುವ ಕೆಲಸವನ್ನು ಮಾಡುತ್ತಾರೆ. "ಸಾಮಾನ್ಯರಲ್ಲಿ ಪ್ರಚಲಿತವಾಗಿರುವ ಪ್ರಾದೇಶಿಕ ದೈವಗಳ ಪೂಜೆ ಎರಡು ಬಗೆಯ ದುಷ್ಪರಿಣಾಮಗಳನ್ನು ಮೂಡಿಸಬಹುದು: ಒಂದು, ಜನತೆಯನ್ನು ಬೇರೆ ಬೇರೆ ಗುಂಪುಗಳಾಗಿ ಒಡೆಯುತ್ತದೆ; ಇನ್ನೊಂದು, ಅವರಲ್ಲಿ ವಿಚಿತ್ರವಾದ ಅಥವಾ ಅಮಾನುಷವಾದ ಆಚರಣೆಗಳಿಗೆ (rituals) ದಾರಿ ಮಾಡಿಕೊಡುತ್ತದೆ. ಎಷ್ಟೇ ಆದರೂ ತಾವು ಪೂಜಿಸುವ ಮಾರಿ ಮಸಣಿ ಮೈಲಾರ ಎಕ್ಕನಾತಿ ಧೂಳಿಮಕಾಳ ಇತ್ಯಾದಿ ದೈವಗಳು ಕೀಳು ಎಂಬ ಭಾವನೆ ಆ ಜನರಲ್ಲಿರುವುದರಿಂದ ತಾವೂ ಕೀಳು ಎಂಬ ಭಾವನೆಯಿಂದ ತಪ್ಪಿಸಿಕೊಳ್ಳಲು ಅವರಿಂದ ಸಾಧ್ಯವೇ ಆಗುವುದಿಲ್ಲ. ಬಸವಣ್ಣ ಶಿವನೇ ದೈವ ಎಂಬುದನ್ನು ಒತ್ತಿ ಹೇಳಿ ಆ ಪ್ರಾದೇಶಿಕ ದೈವಗಳ ಪೂಜೆಯನ್ನು ಬಿಡಿಸಿದ್ದರಿಂದ, ಸಾಮಾನ್ಯ ಜನತೆಯನ್ನು ಒಂದು ದೈವದ ಭಕ್ತರನ್ನಾಗಿ ಮಾಡಿ ತಾವೆಲ್ಲ ಸಮಾನರು, ಶಿವನ ಮಕ್ಕಳು ಎಂಬ ವಿಶ್ವಾಸವನ್ನು ಅವರಲ್ಲಿ ಮೂಡಿಸಿದ. ಸಾತ್ವಿಕ ಆಚರಣೆಗಳಿಗೆ ಮಹತ್ವ ಬಂದಿದ್ದರಿಂದ ಬಾಯಿಬೀಗ, ಬೆಂಕಿ ತುಳಿಯುವುದು, ತಲೆಯ ಮೇಲೆ ಮಲದ ಬುಟ್ಟಿ ಹೊರುವುದು ಇತ್ಯಾದಿ ಅನಾಗರಿಕ ಮತೀಯ, ಜಾತೀಯ ಆಚರಣೆಗಳು ತಾವಾಗಿ ಅಳಿಸಿಹೋದವು. ಶಿವನನ್ನು ಒಪ್ಪಿಕೊಂಡಿದ್ದರಿಂದ ಆ ಜನಕ್ಕೆ ತಮ್ಮಲ್ಲಿ ಆತ್ಮವಿಶ್ವಾಸ ಮೂಡಿತು. ಶಿವ ಪ್ರಾದೇಶಿಕ ದೈವವಲ್ಲ; ಭಾರತೀಯ ದೈವ, ಎಲ್ಲ ವರ್ಗದವರೂ ಪೂಜಿಸುವ ದೈವ" (ಪು.33) ಎಂದು ಡಾ. ಚಿದಾನಂದ ಮೂರ್ತಿಯವರು ಅಭಿಪ್ರಾಯಪಟ್ಟಿರುವುದು ವಾಸ್ತವ ವಿಚಾರ. ಈ ಮಾತನ್ನು ಕನಕರ ಕಾವ್ಯಕ್ಕೂ ಅನ್ವಯಿಸಿಕೊಳ್ಳಬಹುದು.

ಹೀಗೆ ಹನ್ನೆರಡನೆಯ ಶತಮಾನದ ಬಸವಣ್ಣನವರ ವಚನ ವಿಚಾರಗಳಿಗೂ, ಹದಿನಾರನೆಯ ಶತಮಾನದ ಕನಕರ ಕೀರ್ತನೆ–ಕಾವ್ಯಗಳಲ್ಲಿನ ವಿಚಾರಗಳಿಗೂ ಸಾಕಷ್ಟು ಸಾಮ್ಯತೆಗಳಿರುವುದನ್ನು ಗುರುತಿಸಬಹುದು. ಬಸವಣ್ಣ ಮತ್ತು ಕನಕರ ಆರಾಧ್ಯದೈವ ಬೇರೆ, ಆದರೆ ಸಾಮಾಜಿಕ ನ್ಯಾಯ, ಸಮಾನತೆಯನ್ನು ಪ್ರತಿಪಾದಿಸುವಲ್ಲಿ, ಸಾಮಾಜಿಕ ಪಿಡುಗುಗಳನ್ನು ವಿರೋಧಿಸುವಲ್ಲಿ ಇಬ್ಬರ ತಾತ್ವಿಕ ವಿಚಾರಗಳೂ ಸಾಕಷ್ಟು ಸಾಮ್ಯತೆಯನ್ನು ಹೊಂದಿವೆ. ಈ ಸಾಮ್ಯತೆಗೆ ಹನ್ನೆರಡು ಮತ್ತು ಹದಿನಾರನೆಯ ಶತಮಾನದಲ್ಲಿ ಅಸ್ತಿತ್ವದಲ್ಲಿದ್ದ ಸಾಮಾಜಿಕ ಸಮಸ್ಯೆಗಳು ಹೆಚ್ಚೂಕಡಿಮೆ ಒಂದೇ ತೆರನಾಗಿದ್ದುದು ಒಂದು ಪ್ರಮುಖ ಕಾರಣ. ಅಲ್ಲದೇ ಬಸವ–ಕನಕರಿಬ್ಬರ ಉದ್ದೇಶವೂ ಸಮಸಮಾಜ ನಿರ್ಮಾಣ ಮತ್ತು ಸರ್ವೋದಯವಾಗಿರುವುದರಿಂದ ಸಾಮ್ಯತೆಗಳುಂಟಾಗಿವೆ. ಕೆಲವು ಕಡೆ ಬಸವಣ್ಣನ ವಚನಗಳ ಪ್ರೇರಣೆಯನ್ನು ಕನಕರ ಕಾವ್ಯದಲ್ಲಿ ಗುರುತಿಸಬಹುದು. ಒಟ್ಟಾರೆಯಾಗಿ, ಈ ಇಬ್ಬರು ದಾರ್ಶನಿಕರ ದೃಷ್ಟಿ ಅಂತಿಮವಾಗಿ ಸಮಾಜ ಸುಧಾರಣೆ ಮತ್ತು ಬದಲಾವಣೆಯೇ ಆಗಿತ್ತೆನ್ನಬಹುದು.

□

ಗ್ರಂಥ ಪರಾಮರ್ಶೆ

# ಪ್ರತಿಬಿಂಬ – ಕೃತಿ ಅವಲೋಕನ

**ಡಾ. ಪ್ರದೀಪಕುಮಾರ ಹೆಬ್ರಿ**

ಮೈಸೂರು ಜಿಲ್ಲೆ ನಗರ್ಲೆ ಗ್ರಾಮದವರಾದ ಲೇಖಕರು, ಸಾಹಿತಿಗಳಾದ ನಗರ್ಲೆ ಶಿವಕುಮಾರರವರ ಕೃತಿ 'ಪ್ರತಿಬಿಂಬ'ವು ಲೇಖನಗಳು, ಕೃತಿ ಪರಿಚಯ ಹಾಗೂ ಕವನಗಳನ್ನೊಳಗೊಂಡ ಕೃತಿಯಾಗಿದೆ. ಕೃತಿಯನ್ನು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ (ರಿ) ಮೈಸೂರು ಜಿಲ್ಲಾ ಘಟಕ ಹೊರತಂದಿದ್ದು, ಕೃತಿ 216 ಪುಟಗಳದ್ದು. ಮುಖಬೆಲೆ ರೂ. 100/– ಗಳಾಗಿದೆ. ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಭಯೋತ್ಪಾದಕರ ದಾಳಿಯಲ್ಲಿ ಮೃತಪಟ್ಟವರ ದಿವ್ಯಚೇತನಗಳಿಗೆ ಈ ಕೃತಿಯನ್ನು ಸಮರ್ಪಿಸಿದ್ದಾರೆ. 24 ಲೇಖನಗಳು, 7 ಕೃತಿಗಳ ಪರಿಚಯ ಹಾಗೂ 17 ಕವನಗಳನ್ನು 'ಪ್ರತಿಬಿಂಬ' ಒಳಗೊಂಡಿದೆ.

ಮುನ್ನುಡಿಯಲ್ಲಿ ಬೆಳಗಾವಿಯ ಶ್ರೀ ಪ್ರಕಾಶ ಗಿರಿಮಲ್ಲನವರ ಇವರು "ಈ ಕೃತಿಯ ಬಹುತೇಕ ಲೇಖನಗಳು ಆಯಾ ಸಂದರ್ಭಕ್ಕೆ ಮೂಡಿ ಬಂದ ಅಭಿವ್ಯಕ್ತಿಯ ಅನುಸಂಧಾನಗಳೇ ಆಗಿವೆ. ಹೀಗಾಗಿ ಈ ಬರಹಗಳು ವಿದ್ವದ್ರಸಿಕರ ಮನಸ್ಸನ್ನು ಸೂರೆಗೊಳ್ಳುವುದರಲ್ಲಿ ಸಂದೇಹವಿಲ್ಲ. ಚಿಕ್ಕ ಚಿಕ್ಕ ಲೇಖನಗಳಲ್ಲಿ ಬಹುಮುಖ್ಯವಾದ ವಿಷಯ ಗಾಂಭೀರ್ಯದ ತತ್ವಪ್ರಣಾಲಿಯನ್ನು ವಿವೇಚನೆಗೆ ಒಳಪಡಿಸಿ ಹೊಸ ಹೊಳವುಗಳನ್ನು, ಆಯಾ ವ್ಯಕ್ತಿಯ, ಆಯಾ ಕೃತಿಗಳ ವೈಶಿಷ್ಟ್ಯಗಳನ್ನು ಮನಗಾಣಿಸಿಕೊಡುವಲ್ಲಿ ಶ್ರೀ ನಗರ್ಲೆ ಶಿವಕುಮಾರ ಅವರು ಸಿದ್ಧಹಸ್ತರಾಗಿದ್ದಾರೆ .ಈ ಕೃತಿಯ ಬರೆಹಗಳು ಶರಣ ಸಾಹಿತ್ಯ ಅಧ್ಯಯನಾಸಕ್ತರಿಗೆ ನೂತನ ಬಾಗಿಲನ್ನು ತೆರೆದಂತಾಗಿದೆ" ಎಂದಿದ್ದಾರೆ. ಬೆನ್ನುಡಿಯಲ್ಲಿ ನಿವೃತ್ತ ಪ್ರಾಧ್ಯಾಪಕರಾದ ಡಾ. ಎನ್.ಎಂ. ಗಿರಿಜಾಪತಿ ಯವರು," ಸಾಹಿತ್ಯದ ಪರಿಚಾರಿಕೆಗೆ ಪ್ರತಿಭೆ ಇದ್ದರೆ ಸಾಲದು, ವ್ಯತ್ಪತ್ತಿ ಮತ್ತು ಔಚಿತ್ಯ ಪ್ರಜ್ಞೆಗಳ ಅವಶ್ಯಕವಿದೆ ಎಂಬ ವಿವೇಚನೆ ಲೇಖಕರಲ್ಲಿದೆ. ' ದೃಷ್ಟಿಯಂತೆ ಸೃಷ್ಟಿ ' ಎನ್ನುವ ಗಡಿಗಳನ್ನು ಮೀರುವ ಛಾತಿಯೂ ಇದೆ" ಎಂದಿದ್ದಾರೆ.

ಕೃತಿಕಾರರ ಲೇಖನಗಳನ್ನು ಗಮನಿಸುವ ಮೊದಲು ಅವರ ನುಡಿಗಳ ಕೆಲವು ಮಾತುಗಳು ನಿಮಗಾಗಿ. ಈ ನುಡಿಗಳೇ ಲೇಖಕರ ಧೀಶಕ್ತಿ ಹಾಗೂ ಲೇಖನಗಳ ಹಿರಿಮೆಯನ್ನು ದಾಖಲಿಸಿವೆ :

ಮನುಷ್ಯ ದೈಹಿಕ ಶ್ರಮಕ್ಕಿಂತಲೂ ಮಾನಸಿಕ ಒತ್ತಡಗಳಿಗೆ ಇಂದು ಬಲಿಯಾಗುತ್ತಿದ್ದಾನೆ. ನ್ಯಾಯ, ನೀತಿ, ಧರ್ಮ ಯಾರಿಗೂ ಬೇಡವಾಗಿದೆ. ಮರ ಹೂ ಬಿಟ್ಟು ಕಾಯಿಯಾಗಿ, ಹಣ್ಣಾಗುವವರೆಗೆ ಕಾಯದೆ ಒಂದೇ ಬಾರಿಗೆ ಹಣ್ಣು ಬಿಡಬೇಕೆಂಬ ತವಕದಲ್ಲಿ ಇದ್ದಾನೆ. ಜೀವನದ ಮೌಲ್ಯಗಳಿಗೆ ಬೆಲೆ ಇಲ್ಲವಾಗಿ, ನಿಯತ್ತಿನ ಜೀವನ ನಡೆಸಲು ಯಾರಿಗೂ ಇಷ್ಟವಿಲ್ಲವಾಗಿದೆ. ಧರ್ಮವನ್ನು ರಕ್ಷಿಸಬೇಕಾದವರು, ಧರ್ಮವನ್ನು ಬಿಟ್ಟು ಅನ್ಯಮಾರ್ಗಗಳಲ್ಲಿ ಹೋಗುತ್ತಿದ್ದಾರೆ. ನುಡಿದಂತೆ ನಡೆಯುವುದು ಕಷ್ಟವಾಗಿದೆ. ಅಂತಹವರು ಇದ್ದರೂ ಅತಿ ವಿರಳರಾಗಿದ್ದಾರೆ. ಇವೆಲ್ಲವುಗಳ ನಡುವೆಯೂ ಆಶಾಭಾವನೆಯಿಂದ ಜೀವನದಲ್ಲಿ ವೃತ್ತಿ ಮತ್ತು ಪೃವೃತ್ತಿಯನ್ನು ಹಾಗೂ ಕಲೆ, ಸಾಹಿತ್ಯ, ಸಂಸ್ಕೃತಿ, ಆಚಾರ, ವಿಚಾರಗಳನ್ನು ಉಳಿಸಿ ಬೆಳೆಸಿಕೊಂಡು ಹೋಗಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯ."

ಇನ್ನು ಈ ಕೃತಿಯಲ್ಲಿನ ಹಲವು ಲೇಖನಗಳಲ್ಲಿನ ಹಲವಾರು ಮನನೀಯ ನುಡಿಗಳು ನಿಮಗಾಗಿ :

ಕನ್ನಡನಾಡು ಒಂದಾಗಲು ಹಲವಾರು ಜನ ಮಹನೀಯರು ಶ್ರಮಿಸಿದ್ದಾರೆ. ರಾಜ್ಯದಿಂದ ಬಿಟ್ಟುಹೋಗಿರುವ ಹಲವಾರು ಗ್ರಾಮಗಳ ಸಮಸ್ಯೆಯನ್ನು ಬಗೆಹರಿಸುವ ಮನಸ್ಸು ಯಾವ ರಾಜಕಾರಣಿಗೂ ಇದ್ದಂತಿಲ್ಲ." (ಕನ್ನಡ ನಾಡು ನುಡಿ ಬೆಳವಣಿಗೆಯ ಹಾದಿ)

ವಿಶ್ವಗುರು ಬಸವಣ್ಣನವರು ಒಬ್ಬ ಚಾರಿತ್ರಿಕ ಯುಗಪುರುಷರಾಗಿದ್ದಾರೆ. ಅವರ ವಚನಗಳು ಅವರ ವ್ಯಕ್ತಿತ್ವದ ಸಾಧನೆಯ ಪ್ರತಿಬಿಂಬಗಳಾಗಿವೆ. ಪ್ರತಿಯೊಂದು ವಚನದಲ್ಲಿಯೂ ಅವರ ಸೈದ್ಧಾಂತಿಕ ನಿಲುವು ಸುಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಅವರ ಇಡೀ ಜೀವನವೇ ಎಲ್ಲ ಮಾನವರ ಪಾಲಿಗೆ ಒಂದು ಉನ್ನತ ಆದರ್ಶವಾಗಿ ನಿಲ್ಲುವಂತಹುದು." (ಕರ್ನಾಟಕದ ಸಾಸ್ಕೃತಿಕ ನಾಯಕ ಬಸವಣ್ಣನವರು)

770 ಜನ ಅಮರಗಣಂಗಳಲ್ಲಿ ಎರಡು ನೂರಾ ಎಪ್ಪತ್ತು ಜನರಾದರೂ ಒಂದೊಂದು ಕಾಯಕವರ್ಗಕ್ಕೆ ಸೇರಿದವರಾಗಿರಬಹುದು. ಮಹಾನುಭಾವ ಬಸವಣ್ಣನವರ ಬಹುಮುಖ ಕ್ರಾಂತಿಯಲ್ಲಿ ಊರ ಹೊರಗಿನ ಜನಾಂಗದವರು, ಯಾವುದೇ ಭೇದಭಾವವಿಲ್ಲದೆ, ಸಹಜವಾಗಿಯೇ ಕಲ್ಯಾಣದ ಅನುಭವಮಂಟಪದಲ್ಲಿ ಭಾಗವಹಿಸಿ, ಆ ಕ್ರಾಂತಿಯ ಭಾಗವಾದರಷ್ಟೇ ಅಲ್ಲ, ಅನುಭವಮಂಟಪದ ಪರಮಗಂತವ್ಯವಾದ ಆತ್ಮೋದ್ಧಾರವನ್ನು ಸಾಧಿಸಿದರು. ಅಂತಹ ಶರಣರಲ್ಲಿ ಮಾದಾರ ಧೂಳಯ್ಯನವರು ಒಬ್ಬರು. (ಶರಣ ಮಾದಾರ ಧೂಳಯ್ಯನವರ ವೈಚಾರಿಕತೆ)

ಹನ್ನೆರಡನೆಯ ಶತಮಾನದಲ್ಲಿ ಕನ್ನಡ ನಾಡಿನ ಶರಣರು ನಡೆಸಿದ ಅಭೂತಪೂರ್ವ ಧಾರ್ಮಿಕ, ಸಾಮಾಜಿಕ ಕ್ರಾಂತಿಯ ಜೊತೆಗೆ ಅಕ್ಷರರೂಪದ ದಾಖಲೆಯಾದ ವಚನ

ಸಾಹಿತ್ಯ ವಿಶಿಷ್ಟವಾದುದು. ವಚನ ಸಾಹಿತ್ಯದಲ್ಲಿ ವರ್ತಮಾನದ ಪ್ರಜಾಪ್ರಭುತ್ವದ ವ್ಯವಸ್ಥೆಯ ಮೂಲತತ್ವಗಳೆಲ್ಲವನ್ನೂ ನಾವು ಕಾಣುತ್ತೇವೆ. ಶರಣ ಸಾಹಿತ್ಯ ಸರ್ವಕಾಲಕ್ಕೂ ಪ್ರಸ್ತುತವಾಗುವ ನಿತ್ಯಜೀವಂತಿಕೆ ಹೊಂದಿದೆ. (ವಚನಕಾರ್ತಿಯರ ಸಾಮಾಜಿಕ ಕಳಕಳಿ)

" ಪ್ರಪಂಚದಲ್ಲಿ ಜನಿಸಿದ ಮೇಲೆ ಬದುಕಬೇಕಾಗುತ್ತದೆ. ಬದುಕಬೇಕಾದರೆ ಜೀವನ ನಡೆಸಬೇಕಾಗುತ್ತದೆ. ಆದರೆ ಇಲ್ಲಿ ಬದುಕುವ ರೀತಿ ಮಹತ್ವದ್ದು. ಒಬ್ಬ ವ್ಯಕ್ತಿ ಎಷ್ಟು ದಿನ ಬದುಕಿರುವನೆಂದು ನೋಡುವುದಕ್ಕಿಂತ ಹೇಗೆ ಬದುಕಿದನೆಂಬುದು ಮಹತ್ವದ್ದು. ಲೇಸಾಗಿ ಬದುಕಬೇಕು. ಲೇಸಿಗಾಗಿ ಬದುಕಬೇಕು. ಒಳ್ಳೆಯದಾಗಿ ಬದುಕಬೇಕು. ಒಳ್ಳೆಯದಕ್ಕಾಗಿ ಬದುಕಬೇಕೆಂಬುದು ಶರಣರ ಕಟ್ಟುನಿಟ್ಟಾಗಿತ್ತು. (ಲೇಸು ಬಯಸುವ ಕಾಯಕ ಮುಖ್ಯವೆಂದರು ಕಾಣಾ)

"ಕನ್ನಡ ಸಾಹಿತ್ಯ ಭಂಡಾರಕ್ಕೆ ಹನ್ನೆರಡನೆಯ ಶತಮಾನದಲ್ಲಿ ಸೇರಿದ ಬೃಹತ್ ಪ್ರಮಾಣದ ಸಂಪತ್ತು ವಚನ ಸಾಹಿತ್ಯ. ಇಂದು ನಮಗೆ ದೊರೆತಿರುವ ವಚನ ಸಾಹಿತ್ಯದ ಬಹುಪಾಲನ್ನು ಮೊದಲಿಗೆ ಬೆಳಕಿಗೆ ತಂದಕೀರ್ತಿ ಡಾ. ಫ.ಗು. ಹಳಕಟ್ಟಿ ಅವರಿಗೆ ಸಲ್ಲುತ್ತದೆ. ತಮ್ಮ ತ್ಯಾಗ, ಅಭಿಮಾನ, ಪರಿಶ್ರಮದಿಂದ ಹೊಸ ಇತಿಹಾಸ ಬರೆದವರು ಹಾಗೂ ಮನುಕುಲದ ಏಳ್ಗೆಗಾಗಿ ಸಂಕಲ್ಪತೊಟ್ಟು ಬದುಕಿದವರು ಫ.ಗು.ಹಳಕಟ್ಟಿಯವರು. (ವಚನ ಪಿತಾಮಹ ಡಾ.ಫ. ಗು. ಹಳಕಟ್ಟಿಯವರು)

"ಬುದ್ಧನಿಗೆ ಮನುಷ್ಯನ ಅಸ್ತಿತ್ವ ಮಹತ್ವದ್ದಾಗಿತ್ತು. ಸಾಮಾಜಿಕ ಕ್ರಾಂತಿಕಾರಿಯಾಗಿದ್ದ. ಪ್ರಜಾಪ್ರಭುತ್ವವಾದಿಯಾಗಿದ್ದ. ನಾನಾ ನಮೂನೆಯ ಶೋಷಣೆಗೆ ಒಳಗಾಗಿದ್ದ ಮನುಷ್ಯರನ್ನು ಸ್ವತಂತ್ರಗೊಳಿಸಿ ಅವರಿಗೆ ಅವರದೇ ಆದ ಗುರುತನ್ನು ನೀಡುವಲ್ಲಿ ಶ್ರಮಿಸಿದರು. (ಬುದ್ಧನ ಸಿದ್ಧಾಂತಗಳು ಎಂದೆಂದಿಗೂ ಪ್ರಸ್ತುತ)

ಸಿದ್ಧಗಂಗಾ ಶ್ರೀಗಳವರು ವೇದಿಕೆಯ ಮೇಲೆ ಕುಳಿತು ಉಪದೇಶವನ್ನು ಕೊಡುವುದರ ಬದಲಿಗೆ ತಾವೇ ಹೊಲದಲ್ಲಿ, ಅಡುಗೆಮನೆಯಲ್ಲಿ, ಶಾಲೆಯ ಕೋಣೆಯಲ್ಲಿ, ಕಟ್ಟಡ ಕಟ್ಟುವ ನಿವೇಶನದಲ್ಲಿ ಇಳಿದು ಕೆಲಸಮಾಡಿ ದುಡಿಮೆಯ ಅಗ್ಗಳಿಕೆಯನ್ನು ಮೆರೆಸಿದ್ದಾರೆ. (ಸಿದ್ದಗಂಗೆಯ ನಿಜದ ಜಂಗಮ)

"ನಾಡಿನ ಶರಣ ಸಂಸ್ಕೃತಿಯಲ್ಲಿ ಗುರು– ಜಂಗಮರಾಗುವವರು ಶ್ರೀ ಗೌರೀಶಂಕರ ಮಹಾಸ್ವಾಮಿಗಳವರ ಜೀವನ ಚರಿತ್ರೆಯನ್ನು ಅಭ್ಯಾಸ ಮಾಡಿದರೆ ಜಂಗಮನಾದರೂ ಎಷ್ಟೆಲ್ಲ ವಿದ್ವತ್ತನ್ನು ಪಡೆಯಬಹುದು ಎಂಬ ಸ್ಫೂರ್ತಿ ದೊರೆಯುತ್ತದೆ. (ಸಾಂಸ್ಕೃತಿಕ ಕಾಶಿ ಶ್ರೀ ಗೌರೀಶಂಕರ ಮಹಾಸ್ವಾಮಿಗಳು)

ಕರುನಾಡು ಶರಣರ ಸಂತರ, ದಾಸರ, ಪವಾಡಪುರುಷರ, ಮಹಾತ್ಮರ ಪುಣ್ಯಧಾಮ. ಈ ನಾಡಿನಲ್ಲಿ ನಡೆದಿರುವ ಅನ್ನ ಮತ್ತು ಅರಿವಿನ ದಾಸೋಹದಲ್ಲಿ ವೀರಶೈವ ಲಿಂಗಾಯತ ಮಠಗಳ ಪಾತ್ರ ಅಮೋಘವಾದದ್ದು. ಸಕಲ ಜೀವಾತ್ಮರಿಗೆ ಲೇಸನ್ನೇ

ಬಯಸಿದ ಶರಣರ ನಾಡಿನಲ್ಲಿ ಸುತ್ತೂರು ಶ್ರೀಮಠದ ಸೇವೆ ಅನನ್ಯ. ಶ್ರೀಮಠದ ಮಹಾಮಹಿಮರಲ್ಲಿ ಕ್ಯಾತನಹಳ್ಳಿ ಶ್ರೀ ಶಿವಪ್ರಭು ಸ್ವಾಮಿಗಳೂ ಒಬ್ಬರು. (ಮಹಾಮಹಿಮರು ಕ್ಯಾತನಹಳ್ಳಿ ಶ್ರೀಗಳು)

ಕೆಲವು ಕವನಗಳನ್ನು ಅವಲೋಕಿಸೋಣ :

"ರಾಮಾಯಣ ಮಹಾಭಾರತಕ್ಕೆ ನಾಂದಿ ಹಾಡಿದ ಆಕೆ/ ಗಾಂಧೀ ಬುದ್ಧ ಬಸವ ವಿವೇಕಾನಂದರ ಹಡೆದವಳಾಕೆ" (ಭಾರತಾಂಬೆ)

"ಅಕ್ಕ ಎಂದರೆ ವೈರಾಗ್ಯನಿಧಿ/ ಅರಸನಿಗೆ ಇಟ್ಟಳು ಷರತ್ತುಗಳ ವಿಧಿ/ಅಕ್ಕ ಎಂದರೆ ಆಧ್ಯಾತ್ಮಿಕ ಸೆಲೆ/ಶರಣರ ಸನ್ನಿಹಿತ ಸುಖದ ಕಲ್ಪನಾ ತರಂಗಿಣಿಯ ನೆಲೆ" (ಅಕ್ಕ ಎಂದರೆ...)

"ನೀ ಧರ್ಮದ ಭಿಕ್ಷು/ ನೀ ಮರ್ಮದ ಚಕ್ಷು/ ನೀ ಶಿಕ್ಷಣ ಪ್ರೇಮಿ/ ನೀ ಸಂಸ್ಕೃತ ನೇಮಿ/ ನೀ ಕಾರುಣ್ಯಸಿಂಧು/ ನೀ ಅನಾಥ ಬಂಧು//" (ಓ ರಾಜೇಂದ್ರ ಗುರುವೇ)

"ಏನನ್ನಾದರೂ ಮರೆ ಓ ಮಿತ್ರ/ ಅಮ್ಮನನ್ನ ಮರೆಯದಿರು/ ಬದುಕಿನಲಿ ಸನ್ಮಾರ್ಗ ತೋರಿದವಳು ಅಮ್ಮ/ ಏನನ್ನೂ ನಿರೀಕ್ಷಿಸದೆ ಸೇವೆ ಮಾಡಿದವಳು ಅಮ್ಮ" (ಅಮ್ಮ)

ಹೀಗೆ ಶ್ರೀ ನಗರ್ಲೆ ಶಿವಕುಮಾರ (98456 09652) ಅವರ "ಪ್ರತಿಬಿಂಬ" ವೈವಿಧ್ಯಮಯ ಕನ್ನಡದ ಸಾಹಿತ್ಯ ಪ್ರಕಾರಗಳನ್ನು ತನ್ನೊಡಲಿನಲ್ಲಿ ತುಂಬಿಕೊಂಡು ಓದುಗರ ಮನಗೆಲ್ಲುವಲ್ಲಿ ನಿಶ್ಚಿತವಾಗಿ ಯಶಸ್ವಿಯಾಗುತ್ತದೆಂಬ ನಂಬಿಕೆಯಲ್ಲಿ ಲೇಖಕರನ್ನು ಹಾರ್ದಿಕವಾಗಿ ಅಭಿನಂದಿಸುತ್ತೇವೆ.

ಈ ಪರಂಜ್ಯೋತಿ ಪ್ರಕಾಶವಾದ ಬೆಳಗ
ನೋಡಿ ನೋಟವ ಮರೆದೆ
ಕೂಡಿ ಕೂಟವ ಮರೆದೆ.
ತಾನು ತಾನಾಗಿಪ್ಪ ಮಹಾಬೆಳಗಿನಲ್ಲಿ
ನಾನು ಓಲಾಡಿ ಸುಖಿಯಾದೆನಯ್ಯಾ
ಚೆನ್ನಮಲ್ಲೇಶ್ವರನ ಕರುಣವಿಡಿದು
ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ.

**ಹಡಪದಪ್ಪಣ್ಣಗಳ ಪುಣ್ಯಸ್ತ್ರೀ ಲಿಂಗಮ್ಮ**

# ವಾರ್ತಾ ವಿಹಾರ

**ಕುಮಾರಸ್ವಾಮಿ ವಿರಕ್ತಮಠ**

## ಸುತ್ತೂರು ಜಾತ್ರಾ ಮಹೋತ್ಸವ 2026

ಸುತ್ತೂರು ಶ್ರೀಕ್ಷೇತ್ರದಲ್ಲಿ ಜನವರಿ 15ರಿಂದ 20ರವರೆಗೆ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವವು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ವಿಜೃಂಭಣೆಯಿಂದ ಜರುಗಿತು.

**ಜಾತ್ರೆಗಳಿಂದ ಸಂಸ್ಕೃತಿ–ಪರಂಪರೆ ಜೀವಂತ**

ಜಾತ್ರೆಗಳು ದೇಶದ ಪರಂಪರೆಯ ಪ್ರತೀಕ, ಆಧುನಿಕ ಜಗತ್ತಿನಲ್ಲಿ ವೈಜ್ಞಾನಿಕವಾದ ಬದಲಾವಣೆಗಳು ಆದಾಗ್ಯೂ ಸಹ ಜಾತ್ರೆಗಳಿಂದ ನಮ್ಮ ಸಂಸ್ಕೃತಿ, ಪರಂಪರೆಗಳು ಜೀವಂತವಾಗಿವೆ ಎಂದು ಮಾಜಿ ಮುಖ್ಯಮಂತ್ರಿಗಳು ಮತ್ತು ಸಂಸದರಾದ ಶ್ರೀ ಜಗದೀಶ್ ಎಸ್. ಶೆಟ್ಟರ್‌ರವರು ಜನವರಿ 15ರಂದು ಜಾತ್ರಾ ಮಹೋತ್ಸವದಲ್ಲಿ ವಸ್ತುಪ್ರದರ್ಶನ, ಕೃಷಿಮೇಳ, ಸಾಂಸ್ಕೃತಿಕ ಮೇಳಗಳ ಉದ್ಘಾಟನೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ತಿಳಿಸಿದರು. ಆಧುನಿಕ, ವೈಜ್ಞಾನಿಕ ಭರಾಟೆಯ ನಡುವೆಯೂ ಸಹ ನಮ್ಮ ದೇಶದ ಸಂಸ್ಕೃತಿ ಪರಂಪರೆಯನ್ನು ಬಿಡದೆ ನಮ್ಮ ಹಿರಿಯರು ಮತ್ತು ಯುವಕರು ಭಾಗಿಯಾಗುತ್ತಿದ್ದಾರೆ, ಮನುಷ್ಯನಿಗೆ ಜೀವನದಲ್ಲಿ ಶಾಂತಿ ಮುಖ್ಯ, ಧಾರ್ಮಿಕ ನಂಬಿಕೆ ಆಧ್ಯಾತ್ಮಿಕ ಶಕ್ತಿಯ ಮೂಲಕ ಮಾನಸಿಕ ನೆಮ್ಮದಿಯನ್ನು ಪಡೆಯಲು ಸಾಧ್ಯ. ಸುತ್ತೂರು ಶ್ರೀಮಠವು ಧಾರ್ಮಿಕ ಜಾಗೃತಿಯ ಜೊತೆಗೆ ಶೈಕ್ಷಣಿಕ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ಸಹ ನಮ್ಮ ದೇಶ ವಿದೇಶಗಳಲ್ಲಿ ಗಣನೀಯವಾಗಿ ಸೇವೆಯ ಕ್ಷೇತ್ರವನ್ನು ವ್ಯಾಪಿಸಿದೆ, ಇತ್ತೀಚಿನ ದಿನಗಳಲ್ಲಿ ಟಿವಿ ಮತ್ತು ಮೊಬೈಲ್ ಬಳಕೆಯಿಂದಾಗಿ ಜನರು ಮಾನಸಿಕ ಖಿನ್ನತೆಗೆ ಒಳಗಾಗುತ್ತಿದ್ದಾರೆ, ಜಾತ್ರಾ ಮಹೋತ್ಸವದ ಮೂಲಕ ಮೊಬೈಲ್ ಗೀಳಿನ ಬಗ್ಗೆ ಜಾಗೃತಿ ಮೂಡಿಸುವ ಕೆಲಸವಾಗುತ್ತಿದೆ. ಸುತ್ತೂರು ಜಾತ್ರೆ ಆಧ್ಯಾತ್ಮಿಕ ಪರಂಪರೆ, ಸಾಮಾಜಿಕ ಸೌಹಾರ್ದತೆ ಮತ್ತು ಸಾಂಸ್ಕೃತಿಕ ಚೈತನ್ಯವನ್ನು ಜೀವಂತವಾಗಿರಿಸಿದೆ, ಆಧುನಿಕ ಭಾರತದ ವಿಜ್ಞಾನ, ತಂತ್ರಜ್ಞಾನ ಕ್ಷೇತ್ರದಲ್ಲಿ ಬದಲಾವಣೆಯಾಗುತ್ತಿದೆ, ಅದಕ್ಕೆ ತಕ್ಕಂತೆ ಜೆಎಸ್‌ಎಸ್ ಶ್ರೀಮಠವು ನಮ್ಮ ಪರಂಪರೆಯನ್ನೂ ರಕ್ಷಣೆ ಮಾಡುತ್ತಿದೆ. ಎಲ್ಲ ಕ್ಷೇತ್ರಗಳಲ್ಲೂ ಜನರಿಗೆ ತಿಳುವಳಿಕೆ ಮೂಡಿಸುವ ಕೆಲಸ ಮಾಡುತ್ತಿದೆ ಎಂದರು.

ಸಂಸದರಾದ ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್‌ರವರು ಭಾರತವು ವಿಜ್ಞಾನ– ತಂತ್ರಜ್ಞಾನದಿಂದಾಗಿ ಅತ್ಯಂತ ವೇಗವಾಗಿ ಅಭಿವೃದ್ಧಿ ಕಂಡಿದೆ. ಆದರೆ, ನಮ್ಮ ಆಧ್ಯಾತ್ಮಿಕತೆಯ ಬೇರುಗಳನ್ನು ಎಂದಿಗೂ ಮರೆಯಬಾರದು. ಅಭಿವೃದ್ಧಿಯ ಹಾದಿಯಲ್ಲೂ ಆಧ್ಯಾತ್ಮಿಕ ಚಿಂತನೆ ಅತ್ಯಂತ ಅವಶ್ಯಕ, ಭವಿಷ್ಯದ ಭಾರತ ರೂಪಿಸಲು ಆಧ್ಯಾತ್ಮಿಕ ಬೇರು ಮತ್ತು ಆಧುನಿಕ ಆಲೋಚನೆಗಳು ಜೊತೆಗೂಡಿ ಸಾಗಬೇಕು. ಅನೇಕ ಋಷಿ ಮುನಿಗಳು ತಮ್ಮ ತಪಶ್ಶಕ್ತಿಯಿಂದಾಗಿ ನಮ್ಮ ಸಂಸ್ಕೃತಿ ಪರಂಪರೆಯನ್ನು ರಕ್ಷಣೆ ಮಾಡಿದ್ದಾರೆ, ಸಂಸ್ಕೃತಿ ಸಂರಕ್ಷಣೆ ಕಾರ್ಯದ ಮೂಲಕ ಶ್ರೇಷ್ಠ ಭಾರತವನ್ನು ನಿರ್ಮಿಸಲು ಸಾಧ್ಯ ಎಂದರು.

ವಿಧಾನಪರಿಷತ್ ಸದಸ್ಯರಾದ ಶ್ರೀ ಕೆ. ಶಿವಕುಮಾರ್‌ರವರು ಸರಳ ಸಾಮೂಹಿಕ ವಿವಾಹದ ಮೂಲಕ ಬಡಜನರಿಗೆ ಶ್ರೀಮಠ ನೆರವಾಗಿದೆ. ವಚನಗಳಿಂದಾಗಿ ಜಾತ್ಯತೀತ ಸಮಾಜ ನಿರ್ಮಾಣವನ್ನು ಕಂಡಿದ್ದೇವೆ. ಈ ನಿಟ್ಟಿನಲ್ಲಿ ಶ್ರೀಮಠವು ವಚನ ಶಾಲೆಗಳನ್ನು ಪ್ರಾರಂಭಿಸಬೇಕು. ವಚನಗಳ ಅರ್ಥವನ್ನು ಜನರಿಗೆ ತಿಳಿಸುವ ಮೂಲಕ ಮುಕ್ತ ಸಮಾಜವನ್ನು ನಿರ್ಮಿಸಲು ಮುಂದಾಗಬೇಕು ಎಂದು ಹೇಳಿದರು.

ಅಥಣಿಯ ಶ್ರೀ ಗಚ್ಚಿನಮಠದ ಶ್ರೀ ಶಿವಬಸವ ಸ್ವಾಮಿಗಳು, ಉಪ್ಪಿನಬೆಟಗೇರಿ ಶ್ರೀ ವಿರಕ್ತಮಠದ ಶ್ರೀ ಕುಮಾರ ವಿರೂಪಾಕ್ಷ ಸ್ವಾಮಿಗಳು, ಅಮೀನಗಡದ ಶ್ರೀ ಪ್ರಭುಶಂಕರ ಮಠದ ಶ್ರೀ ಶಂಕರರಾಜೇಂದ್ರ ಸ್ವಾಮಿಗಳು, ಶಾಸಕರಾದ ಶ್ರೀ ಎಚ್.ಡಿ. ತಮ್ಮಯ್ಯ, ಶ್ರೀ ಹೆಚ್.ಕೆ. ಸುರೇಶ್, ಶ್ರೀ ಎ. ಬಣ್ಣಾರಿ, ಜಿಲ್ಲಾ ಪಂಚಾಯತ್ ಸಿಇಒ ಶ್ರೀ ಎಸ್. ಉಕೇಶ್‌ಕುಮಾರ್‌ರವರುಗಳು ಮಾತನಾಡಿದರು. ಶ್ರೀಮತಿ ಶಿಲ್ಪಾ ಜಗದೀಶ್ ಶೆಟ್ಟರ್ ಉಪಸ್ಥಿತರಿದ್ದರು. ಪ್ರೊ. ಬಿ.ಎಂ. ಸದಾಶಿವಮೂರ್ತಿ ಸ್ವಾಗತಿಸಿದರು. ಶ್ರೀ ಬಿ. ನಂಜುಂಡಸ್ವಾಮಿ ವಂದಿಸಿದರು. ಶ್ರೀ ಬಿ. ನಿರಂಜನಮೂರ್ತಿ ಕಾರ್ಯಕ್ರಮ ನಿರೂಪಿಸಿದರು.

**ವಿವಾಹ ಒಂದು ಪವಿತ್ರ ಕಾರ್ಯ**

ವಿವಾಹ ಎಂಬುದು ಪವಿತ್ರ ಕಾರ್ಯ ಎಂದು ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಆರ್.ವಿ. ದೇಶಪಾಂಡೆಯವರು ಜನವರಿ 16ರಂದು ನಡೆದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ತಿಳಿಸಿದರು. ಗುರುಗಳ ಆಶೀರ್ವಾದದಿಂದ ದಾಂಪತ್ಯ ಜೀವನಕ್ಕೆ ಕಾಲಿಟ್ಟಿರುವವರು ಚೆನ್ನಾಗಿ ಬಾಳಬೇಕು. ಕುಟುಂಬ ಮತ್ತು ಸಮಾಜದ ದೃಷ್ಟಿಯಲ್ಲಿ ಆದರ್ಶ ಬದುಕು ನಿಮ್ಮದಾಗಬೇಕು. ಸುತ್ತೂರು ಶ್ರೀಕ್ಷೇತ್ರದಲ್ಲಿ ಗುರುಗಳ ಆಶೀರ್ವಾದದಿಂದ ಈ ಕಾರ್ಯಕ್ರಮ ನಡೆಯುತ್ತಿದೆ. ಒಂದು ಮದುವೆಗೆ ಲಕ್ಷ ಲಕ್ಷ ಹಣ ಖರ್ಚು ಮಾಡುತ್ತೇವೆ. ಸಾಮೂಹಿಕ ಮದುವೆಗಳು ದುಂದು ವೆಚ್ಚವಿಲ್ಲದೆ ನಡೆಯುತ್ತವೆ. ಗುರುಗಳ ಆಶೀರ್ವಾದ ನವದಂಪತಿಗಳ ಮೇಲಿರುತ್ತದೆ. ಇದು ನಿಜಕ್ಕೂ ಪವಿತ್ರಕಾರ್ಯ ಎಂದರು. ಇಂತಹ ಕಾರ್ಯಕ್ರಮಗಳಿಗೆ ಎಷ್ಟು ಕೃತಜ್ಞತೆ ಹೇಳಿದರೂ ಸಾಕಾಗುವುದಿಲ್ಲ. ಸಾಮೂಹಿಕ ಮದುವೆ

ಎಲ್ಲೆಡೆ ಆಗಬೇಕು. ಇದರಿಂದ ದುಂದು ವೆಚ್ಚ ಕಡಿಮೆಯಾಗುತ್ತದೆ. ಹಣ ಉಳಿಯುತ್ತದೆ. ಇಂದು ಕರ್ನಾಟಕವೂ ಸೇರಿದಂತೆ ಭಾರತವು ಎಲ್ಲಾ ಹಂತದಲ್ಲಿಯೂ ಪ್ರಗತಿ ಹೊಂದುತ್ತಿದೆ ಎಂದು ತಿಳಿಸಿದರು.

ಸಚಿವರಾದ ಶ್ರೀ ರಾಮಲಿಂಗಾ ರೆಡ್ಡಿಯವರು ಇಂತಹ ಸಾಮೂಹಿಕ ವಿವಾಹ ಸಾರ್ವಜನಿಕರಿಗೆ ಹತ್ತಿರವಾದ ಕಾರ್ಯಕ್ರಮ. ಲಕ್ಷಾಂತರ ಜನ ಇಲ್ಲಿ ಭಾಗಿಯಾಗಿದ್ದಾರೆ. ದಾಸೋಹದ ಜತೆಗೆ ವಿದ್ಯಾ ದಾನಕ್ಕೂ ಒತ್ತು ನೀಡಲಾಗುತ್ತಿದೆ. ರಾಜ್ಯ, ರಾಷ್ಟ್ರಮಟ್ಟದಲ್ಲಿ ವಿದ್ಯಾಸಂಸ್ಥೆಗಳು ಇವೆ. ಲಕ್ಷಾಂತರ ಜನ ಇಲ್ಲಿ ಓದಿ ಜೀವನ ಕಟ್ಟಿಕೊಂಡಿದ್ದಾರೆ. ಹಿಂದಿನ ಎಲ್ಲಾ ಮಠಾಧಿಪತಿಗಳ ಸೇವೆಯನ್ನೂ ಸ್ಮರಿಸಬೇಕು. ಸಾಮೂಹಿಕ ಮದುವೆಗೆ ಶ್ರೀಮಠ ಒತ್ತು ನೀಡುತ್ತಿದೆ. ಹೆಚ್ಚು ಸಾಮೂಹಿಕ ಮದುವೆಗಳು ಆಗಬೇಕು. ಪೂಜ್ಯರಿಗೆ ಎಲ್ಲರ ಪರವಾಗಿ ಗೌರವಪೂರ್ವಕ ಅಭಿನಂದನೆ ಸಲ್ಲಿಸುತ್ತೇನೆ ಎಂದು ಹೇಳಿದರು.

134 ಜೋಡಿ ವಧುವರರು ಸತಿಪತಿಗಳಾಗಿ ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ತಿರುವನಂತಪುರಂನ ಮೆಟ್ರೋಪಾಲಿಟಿನ್ ಇಂಡಿಯನ್ ಅರ್ಥೋಡೆಕ್ಸ್ ಚರ್ಚ್‌ನ ಬಿಷಪ್‌ರವರಾದ ರೆ.ಫಾ. ಡಾ. ಗೇಬ್ರಿಯಲ್ ಮಾರ್ ಗ್ರೆಗೋರಿಯಸ್, ಪಡುಗೂರು ಶ್ರೀಗಳು ಮತ್ತು ಚಿಕಲಪರ್ವಿ ಶ್ರೀಗಳು, ಮೈಸೂರು ಬಿಷಪ್‌ರವರಾದ ರೆ.ಫಾ. ಫ್ರಾನ್ಸಿಸ್ ಸೆರಾವ್ ಎಸ್.ಜೆ., ಶಾಸಕರಾದ ಶ್ರೀ ಹಂಪನಗೌಡ ಬಾದರ್ಲಿ, ಮಾಜಿ ಸಚಿವರಾದ ಶ್ರೀ ಅಲ್ಲಂ ವೀರಭದ್ರಪ್ಪ, ಅಮೆರಿಕದ ಬಾಸ್ಟನ್ ಕನ್ಸಲ್ಟಿಂಗ್‌ನ ಹಿರಿಯ ನಿರ್ದೇಶಕರಾದ ಶ್ರೀ ರಾಜಣ್ಣ ಹೆಗ್ಗಡಳ್ಳಿ, ಸರಗೂರು ಶ್ರೀ ವೆಂಕಟೇಶ್‌ರವರುಗಳು ಮಾತನಾಡಿದರು. ಕನಕಪುರದ ಹಿರಿಯ ಶ್ರೀಗಳು, ಹೈದರಾಬಾದ್ ರಾಮೋಜಿ ಫಿಲಂ ಸಿಟಿಯ ಶ್ರೀ ವೆಂಕಟನಾಗೇಶ್ವರರಾವ್, ಶ್ರೀ ಮಲ್ಲಿಕಾರ್ಜುನ್, ಕೆಪಿಸಿಸಿ ಕಾರ್ಯದರ್ಶಿಗಳಾದ ಶ್ರೀ ಆನಂದಕುಮಾರ್, ಸಂಯೋಜಕರಾದ ಶ್ರೀ ಸಿ.ಎಸ್. ರಘು, ವಿದ್ಯಾವಿಕಾಸ ಶಿಕ್ಷಣ ಸಂಸ್ಥೆಯ ಶ್ರೀ ಕವೀಶ್‌ಗೌಡ, ಶ್ರೀ ನಿತೀಶ್‌ಗೌಡ, ಉಪಸ್ಥಿತರಿದ್ದರು. ಶ್ರೀ ಅಸಗೋಡು ಜಯಸಿಂಹ ಪ್ರತಿಜ್ಞಾವಿಧಿ ಬೋಧಿಸಿದರು. ಶ್ರೀ ಉಡಿಗಾಲ ಕುಮಾರಸ್ವಾಮಿ ಸ್ವಾಗತಿಸಿದರು. ಶ್ರೀ ದುಗ್ಗಹಟ್ಟಿ ಮಲ್ಲಿಕಾರ್ಜುನಸ್ವಾಮಿ ವಂದಿಸಿದರು. ಶ್ರೀಮತಿ ದಿವ್ಯ ಆಲೂರು ಕಾರ್ಯಕ್ರಮ ನಿರೂಪಿಸಿದರು.

**ದೇಶದ ಸಂಸ್ಕೃತಿಯ ಸಂರಕ್ಷಣೆ ಅಗತ್ಯ**

ಆಧ್ಯಾತ್ಮಿಕತೆ ಭಾರತ ದೇಶದ ಆತ್ಮ, ನಮ್ಮ ದೇಶದ ಸಂಸ್ಕೃತಿ ಮತ್ತು ಧರ್ಮ ಆಚಾರ ಹಾಗೂ ವಿಚಾರವನ್ನು ಸಂರಕ್ಷಿಸುವ ಅಗತ್ಯವಿದೆ ಎಂದು ಕೇಂದ್ರದ ರಾಜ್ಯ ಸಚಿವರಾದ ಕು. ಶೋಭಾ ಕರಂದ್ಲಾಜೆಯವರು ಜನವರಿ 16ರಂದು ರಾಜ್ಯಮಟ್ಟದ ಭಜನಾ ಮೇಳ, ದೇಸಿ ಆಟಗಳು, ಸೋಬಾನೆ ಪದ, ರಂಗೋಲಿ ಹಾಗೂ ರಾಗಿ ಬೀಸುವ ಸ್ಪರ್ಧೆಯ ಉದ್ಘಾಟನೆಯಲ್ಲಿ ಮಾತನಾಡುತ್ತಾ ತಿಳಿಸಿದರು. ಭಾರತದ ಅಸ್ತಿತ್ವವಿರುವುದು

ಆಧ್ಯಾತ್ಮಿಕತೆಯಲ್ಲಿ, ಆಧ್ಯಾತ್ಮಿಕತೆ ಇಲ್ಲದೆ ಭಾರತವಿಲ್ಲ. ನಮ್ಮ ಸಂಸ್ಕೃತಿ, ಧರ್ಮ, ಆಚಾರ, ವಿಚಾರ, ನಮ್ಮ ದೇವಾಲಯಗಳಲ್ಲಿದೆ. ದೇಶದಲ್ಲಿ ಶಾಂತಿ ನೆಲೆಸಲು ಆಧ್ಯಾತ್ಮಿಕತೆಯಿಂದ ಮಾತ್ರ ಸಾಧ್ಯ. ದೇಶದಲ್ಲಿ ಸಂಸ್ಕೃತಿ ಸಂಸ್ಕಾರವನ್ನು ಬೆಳೆಸುವ ದೊಡ್ಡ ಕೆಲಸವನ್ನು ಮಠಮಾನ್ಯಗಳು ನಿರ್ವಹಿಸುತ್ತಿವೆ. ಪುಸ್ತಕದ ಶಿಕ್ಷಣದ ಜೊತೆಗೆ ಜನರಿಗೆ ಮೌಲ್ಯದ ಶಿಕ್ಷಣವನ್ನು ನೀಡುತ್ತಿವೆ. ಸುತ್ತೂರು ಜಾತ್ರೆಗೆ ಬರುವುದೇ ಖುಷಿಯ ಸಂಗತಿ ಮತ್ತು ಹೆಮ್ಮೆಯಾಗಿದೆ. ಸುತ್ತೂರು ಜಾತ್ರೆ ವಸ್ತುಗಳ ಖರೀದಿಯ ಜೊತೆಗೆ ಬುದ್ಧಿಯನ್ನು ಕೊಂಡೊಯ್ಯುವ ಯಾತ್ರೆಯಾಗಿದೆ. ಶ್ರೀಮಠವು ಧಾರ್ಮಿಕ ಕೈಂಕರ್ಯದ ಜೊತೆಗೆ ಈ ಭಾಗದ ಗ್ರಾಮೀಣ ಜನರಿಗೆ ಅವಶ್ಯವಿರುವ ಜ್ಞಾನವನ್ನು ಹಂಚುವ ಕೆಲಸವನ್ನು ಮಾಡುತ್ತಿದೆ ಎಂದು ಹೇಳಿದರು.

ಸಂಸದರು ಹಾಗೂ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಎಸ್. ಬೊಮ್ಮಾಯಿಯವರು ಸುತ್ತೂರು ಶ್ರೀಮಠವು ಶಿಕ್ಷಣ ದಾಸೋಹ ಹಾಗೂ ಆಧ್ಯಾತ್ಮಿಕತೆಯನ್ನು ಮೀರಿ ದೇಶಕ್ಕೆ ಅನ್ನ ಕೊಡುವ ರೈತರಿಗೆ ನೀರು ಒದಗಿಸುವ ಕೆಲಸವನ್ನು ಮಾಡಿದೆ. ಶ್ರೀಗಳ ದೂರದೃಷ್ಟಿಯ ಫಲವಾಗಿ ನೀರಾವರಿ ಸಚಿವನಾಗಿದ್ದ ವೇಳೆ ಸುತ್ತೂರು ಶ್ರೀಗಳ ಸಲಹೆಯಂತೆ ಚಾಮರಾಜನಗರ ಭಾಗದ ಕೆರೆಗಳನ್ನು ತುಂಬಿಸುವ ಕೆಲಸವನ್ನು ಮಾಡಿದ್ದೇನೆ. ಅಭಿವೃದ್ಧಿ ಮತ್ತು ಪರಂಪರೆ ಒಂದೇ ಸ್ಥಳದಲ್ಲಿರುವುದು ಸುತ್ತೂರು ಮಠದಲ್ಲಿ ಮಾತ್ರ. ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ವರ್ಷದಿಂದ ವರ್ಷಕ್ಕೆ ಶ್ರೀಮಂತಗೊಳಿಸುವ ಕೆಲಸವನ್ನು ಪೂಜ್ಯರು ಮಾಡುತ್ತಿದ್ದಾರೆ ಎಂದರು.

ಸಂಸದರಾದ ಶ್ರೀ ತೇಜಸ್ವಿ ಸೂರ್ಯರವರು ಒಂದು ಮಠ ವಿವಿಧ ಆಯಾಮಗಳಲ್ಲಿ ಹೇಗೆ ಸೇವೆ ಸಲ್ಲಿಸಬಹುದು ಎಂಬುದಕ್ಕೆ ಸುತ್ತೂರು ಶ್ರೀಮಠ ನಿದರ್ಶನವಾಗಿದೆ. ಸುತ್ತಮುತ್ತಲ ರೈತರಿಗೆ ಅನುಕೂಲವಾಗುವಂತೆ ಕೆರೆಕಟ್ಟೆಗಳನ್ನು ತುಂಬಿಸಿದ ಕೀರ್ತಿ ಪೂಜ್ಯರಿಗೆ ಸಲ್ಲುತ್ತದೆ. ಮಠಮಾನ್ಯಗಳು ಸಾತ್ವಿಕತೆಯ ಜೊತೆಗೆ ಯಾವ ರೀತಿ ಸಂಘಟನೆ ಮಾಡಬಹುದು ಎಂಬುದಕ್ಕೆ ಶ್ರೀಮಠ ಸಾಕ್ಷಿಯಾಗಿದೆ. ಭಾರತದ ಸಂಸ್ಕೃತಿಯನ್ನು ವಿದೇಶಗಳಲ್ಲಿ ಪಸರಿಸುತ್ತಿದೆ. ನಶಿಸಿ ಹೋಗುವ ಸ್ಥಿತಿಯಲ್ಲಿರುವ ಗ್ರಾಮೀಣ ದೇಸಿ ಆಟಗಳನ್ನು ಉಳಿಸಿ ಬೆಳೆಸುವ ಸಲುವಾಗಿ ದೇಸೀಯ ಆಟಗಳಿಗೆ ಉತ್ತೇಜನ ನೀಡುತ್ತಿರುವುದು ಶ್ಲಾಘನೀಯ ಕಾರ್ಯ ಎಂದರು.

ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ಉಡುಪಿ ಶ್ರೀ ಸೋದೆ ಮಠದ ಶ್ರೀ ವಿಶ್ವವಲ್ಲಭತೀರ್ಥ ಶ್ರೀಪಾದಂಗಳು, ಊಟಿ ಶಾಸಕರಾದ ಶ್ರೀ ಆರ್. ಗಣೇಶ್, ಸಿಎಫ್‌ಟಿಆರ್‌ಐ ನಿರ್ದೇಶಕರಾದ ಡಾ. ಗಿರಿಧರ್ ಪರ್ವತಂ, ಎಂಸಿಸಿಐ ಅಧ್ಯಕ್ಷರಾದ ಶ್ರೀ ಕೆ.ಬಿ. ಲಿಂಗರಾಜು, ಮಂಡ್ಯ ಜಿಲ್ಲಾಧಿಕಾರಿಗಳಾದ ಡಾ. ಕುಮಾರ್, ಉದ್ಯಮಿಗಳಾದ ಶ್ರೀ ಹೆಚ್.ಎಸ್. ರಾಘವೇಂದ್ರರಾವ್, ಕೆಪಿಎಸ್‌ಸಿ ಸದಸ್ಯರಾದ ಡಾ. ಪ್ರಭುದೇವ್‌ರವರು

ಮಾತನಾಡಿದರು. ಶ್ರೀ ಜಿ.ಎಲ್. ತ್ರಿಪುರಾಂತಕ ಸ್ವಾಗತಿಸಿದರು. ಶ್ರೀ ನಗರ್ಲೆ ಶಿವಕುಮಾರ ವಂದಿಸಿದರು. ಶ್ರೀಮತಿ ಜ್ಯೋತಿ ಪರಮೇಶ್ ಕಾರ್ಯಕ್ರಮ ನಿರೂಪಿಸಿದರು.

**ಸುತ್ತೂರು ಶ್ರೀಮಠ ಸಾಮಾಜಿಕ ಸುಧಾರಣೆಗೆ ದಾರಿ ದೀಪವಾಗಿದೆ**

ಸುತ್ತೂರು ಶ್ರೀಮಠವು ಬುದ್ಧ, ಬಸವ, ಅಂಬೇಡ್ಕರ್ ಮತ್ತು ಗಾಂಧೀಜಿಯವರ ಚಿಂತನೆಗಳನ್ನು ನಿಜವಾಗಿಯೂ ಕಾರ್ಯರೂಪಕ್ಕೆ ತರುವ ಮೂಲಕ ಸಾಮಾಜಿಕ ಸುಧಾರಣೆಗೆ ದಾರಿದೀಪವಾಗಿ ಕೆಲಸ ಮಾಡುತ್ತಿದೆ ಎಂದು ಸಚಿವರಾದ ಶ್ರೀ ಕೆ.ಎಚ್. ಮುನಿಯಪ್ಪ ಜನವರಿ 17ರಂದು ನಡೆದ ಧಾರ್ಮಿಕ ಸಭೆಯಲ್ಲಿ ಮಾತನಾಡುತ್ತಾ ತಿಳಿಸಿದರು. ಬಸವಣ್ಣನವರ ಅನುಭವ ಮಂಟಪದಂತೆ ಎಲ್ಲ ಜಾತಿ, ಧರ್ಮ ವರ್ಗದ ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಜಾತ್ರಾ ಮಹೋತ್ಸವದಲ್ಲಿ ಸಮಾನ ಅವಕಾಶ ಕಲ್ಪಿಸಿ ಒಟ್ಟಾಗಿ ಕರೆದುಕೊಂಡು ಹೋಗುವ ಮೂಲಕ ಭಾವೈಕ್ಯತೆಯನ್ನು ಸಾರುತ್ತಿದೆ. ಶ್ರೀಮಠದ ವಿದ್ಯಾಸಂಸ್ಥೆಗಳಲ್ಲಿ ಎಲ್ಲಾ ಜಾತಿ ಜನಾಂಗ, ಧರ್ಮದ ಬಡ ವಿದ್ಯಾರ್ಥಿಗಳಿಗೆ ಬಸವಣ್ಣನವರ ಮಾದರಿಯಲ್ಲಿ ಸಂಸ್ಕಾರ, ಮಾನವೀಯ ಮೌಲ್ಯ, ಸಾಮಾಜಿಕವಾಗಿ ಬದುಕು ಹೇಗೆ ಕಟ್ಟಿಕೊಳ್ಳಬೇಕು ಎಂಬ ಬಗ್ಗೆ ತಿಳಿಸಿಕೊಡುತ್ತಿದೆ. ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸಿ ಸಮಾಜದ ಸುಧಾರಣೆಗೆ ದಾರಿದೀಪವಾಗಿ ಕೆಲಸ ಮಾಡುತ್ತಿದೆ ಎಂದು ಹೇಳಿದರು.

ಶಾಸಕರಾದ ಶ್ರೀ ಜಿ.ಟಿ. ದೇವೇಗೌಡರು ಬಸವಣ್ಣನವರು 12ನೇ ಶತಮಾನದಲ್ಲಿ ಅನುಭವ ಮಂಟಪದ ಮೂಲಕ ಸಮಾಜದಲ್ಲಿ ಸಮಾನತೆಯನ್ನು ತಂದುಕೊಟ್ಟ ಮಾದರಿಯಲ್ಲಿ ಎಲ್ಲಾ ಜಾತಿ, ಎಲ್ಲಾ ಧರ್ಮ, ಎಲ್ಲಾ ಪಂಥದವರನ್ನು ಒಟ್ಟಾಗಿ ಕರೆದುಕೊಂಡು ಸುತ್ತೂರು ಶ್ರೀಮಠವು ಸಾಗುತ್ತಿದೆ. ಜಾತ್ರಾ ಮಹೋತ್ಸವದ ಮೂಲಕ ದೇಶವನ್ನು ಅಭಿವೃದ್ಧಿ ಪಥದತ್ತ ನಡೆಸಿ ನಾಡನ್ನು ಕಟ್ಟುವಂತಹ ಜ್ಞಾನವನ್ನು ಜನರಲ್ಲಿ ಹಂಚುವ ಕೆಲಸವನ್ನು ಮಾಡುತ್ತಿದೆ ಎಂದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್ ರವರು ಜಾತ್ರೆಗಳು ಬದುಕಿನ ಯಾತ್ರೆಯಿದ್ದಂತೆ. ಜಾತ್ರೆಯ ಮೂಲಕ ಜಾತ್ಯತೀತ, ಪಕ್ಷಾತೀತವಾಗಿ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ಹೃದಯಗಳ ಮಿಲನದ ಸಂಸ್ಕೃತಿಯ ಹಬ್ಬವೇ ಜಾತ್ರೆ. ಎಲ್ಲರ ಹೃದಯವನ್ನು ಬೆಸುಗೆ ಹಾಕುವುದೇ ನಿಜವಾದ ಧರ್ಮದ ಆಶಯ. ಸುತ್ತೂರು ಶ್ರೀಮಠವು ಜಾತ್ರೆಯ ಆಚರಣೆಯ ಮೂಲಕ ಧರ್ಮದ ನೆಲೆಯಲ್ಲಿ ಸಾಂಸ್ಕೃತಿಕ ಸಂಸ್ಕೃತಿಯ ಸ್ಪರ್ಶವನ್ನು ನೀಡುವ ಮೂಲಕ ಭಾವೈಕ್ಯತೆಯ ಸಂಗಮವಾಗಿ ಕೆಲಸ ಮಾಡುತ್ತಿದೆ ಎಂದರು.

ಶ್ರೀ ಸಿದ್ದಗಂಗಾ ಮಠದ ಶ್ರೀ ಶಿವಸಿದ್ದೇಶ್ವರ ಮಹಾಸ್ವಾಮಿಗಳು, ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಪಿ.ಎಂ. ನರೇಂದ್ರಸ್ವಾಮಿ, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಸದಸ್ಯರಾದ ಶ್ರೀ ರಾಜಣ್ಣ ಕೊರವಿ, ನಾಸಾ ವಿಜ್ಞಾನಿಗಳಾದ ಶ್ರೀ ಶಿವ್ ಆನಂದ್,

ಅಮೆರಿಕದ ಮೆ. ಮಾರ್ಸ್ಲಿಲ್ಲಿ ಅಧ್ಯಕ್ಷರಾದ ಶ್ರೀ ಕುಮಾರ್ ರಾಜಶೇಖರ್, ಮೈಸೂರು ಪ್ರಾದೇಶಿಕ ಆಯುಕ್ತರಾದ ಶ್ರೀ ನಿತೇಶ್ ಪಾಟೀಲ್, ಕೇರಳದ ಶ್ರೀ ಶಂಕರ ಪಿಳ್ಳೈ, ಶ್ರೀ ಸಾಲಿ ಸಿದ್ದಯ್ಯ ಸ್ವಾಮಿಯವರುಗಳು ಮಾತನಾಡಿದರು. ಶ್ರೀ ರಾಚಪ್ಪ ಹೋಳುರು ಉಪಸ್ಥಿತರಿದ್ದರು. ಪ್ರೊ. ಮೊರಬದ ಮಲ್ಲಿಕಾರ್ಜುನ ಸ್ವಾಗತಿಸಿದರು. ಶ್ರೀ ಕೆ.ಪಿ. ಬಸವರಾಜು ವಂದಿಸಿದರು. ಡಾ. ಜೆ. ಲೋಹಿತ್ ಕಾರ್ಯಕ್ರಮ ನಿರೂಪಿಸಿದರು.

## ಜನ–ಜಾನುವಾರುಗಳನ್ನು ಉಳಿಸುವ ಸುತ್ತೂರು ಶ್ರೀಮಠದ ಪ್ರಯತ್ನ ಶ್ಲಾಘನೀಯ

ಜನ–ಜಾನುವಾರುಗಳನ್ನು ಉಳಿಸುವ ಸುತ್ತೂರು ಶ್ರೀಮಠದ ಪ್ರಯತ್ನ ಶ್ಲಾಘನೀಯ ಎಂದು ಚಿತ್ರದುರ್ಗದ ಶ್ರೀ ಮಾದಾರ ಚನ್ನಯ್ಯ ಗುರುಪೀಠದ ಜಗದ್ಗುರು ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮಿಗಳು ಜನವರಿ 17ರಂದು ಐವತ್ತೈದನೆಯ ದನಗಳ ಜಾತ್ರೆ, ಚಿತ್ರಕಲೆ ಮತ್ತು ಗಾಳಿಪಟ ಸ್ಪರ್ಧೆಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ತಿಳಿಸಿದರು. ಆಧುನಿಕ ಯುಗಕ್ಕೆ ಎಲ್ಲರೂ ಬಾಗಿಲು ತೆರೆದು ನುಗ್ಗುತ್ತಿರುವ ಈ ಕಾಲಘಟ್ಟದಲ್ಲಿ ಸುತ್ತೂರು ಶ್ರೀಗಳು ಹಳೆಯ ಪರಂಪರೆಯ ಆಹಾರ ಶೈಲಿ, ಆಟೋಟ, ಜೀವನವನ್ನು ಉಳಿಸಲು ಪ್ರಯತ್ನ ನಡೆಸಿದ್ದಾರೆ. ಐಟಿ–ಬಿಟಿಗೆ ಮಾರುಹೋದ ಯುವ ಪಡೆ ಮತ್ತೆ ಗ್ರಾಮೀಣ ಬದುಕು ಹಾಗೂ ಕೃಷಿಯತ್ತ ಮುಖ ಮಾಡುವ ಕಾಲ ಸದ್ಯದಲ್ಲೇ ಬರಲಿದೆ. ಮನೆ ಹಾಗೂ ಜೇಬಿನಲ್ಲಿ ಮಾತ್ರೆಗಳನ್ನಿಟ್ಟುಕೊಳ್ಳದೆ ಮಾತನಾಡುವ ಕಾಲ ಬಂದಾಗಲೇ ಆರೋಗ್ಯಕರ ಸಮಾಜ ನಿರ್ಮಾಣ ಸಾಧ್ಯ ಎಂದರು.

ಚಲನಚಿತ್ರ ಕಲಾವಿದರಾದ ಶ್ರೀ ಡಾಲಿ ಧನಂಜಯರವರು ಸುತ್ತೂರು ಶ್ರೀಮಠದ ಶಿಕ್ಷಣ ಮತ್ತು ಆರೋಗ್ಯದ ಸೇವೆಗೆ ಎಂದಿಗೂ ಅಭಾರಿಯಾಗಿದ್ದೇನೆ, ಸಂಸ್ಥೆಯ ಮೂಲಕ ಶಿಕ್ಷಣ ಕಲಿತು ಈ ಹಂತಕ್ಕೆ ತಲುಪಿರುವುದಕ್ಕೆ ಶ್ರೀಮಠಕ್ಕೆ ಕೃತಜ್ಞನಾಗಿರುತ್ತೇನೆ. ಎಲ್ಲರೂ ಕನ್ನಡ ಕಲಾವಿದರನ್ನು ಆಶೀರ್ವದಿಸಬೇಕು. ಬಡವರ ಮನೆ ಮಕ್ಕಳು ಬೆಳೆಯಬೇಕು ಎಂಬುದು ದೊಡ್ಡ ಆಶಯ. ಅದು ಹೇಳುವುದರಿಂದ ಆಗುವುದಿಲ್ಲ, ನಿರಂತರವಾಗಿ ಶ್ರದ್ಧೆಯಿಂದ ತ್ಯಾಗ, ಸಹನೆಯಿಂದ ಕೆಲಸ ಮಾಡುವುದರಿಂದ ಸಾಧ್ಯವಾಗುತ್ತದೆ. ನನಗೆ ದಾಸೋಹ ಅತ್ಯಂತ ಪ್ರಿಯವಾದದ್ದು. ಹಾಗಾಗಿಯೇ ನಾನು ನಮ್ಮ ವಿವಾಹ ಸಂದರ್ಭದಲ್ಲಿ ಊಟಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದಾಗಿ ಅವರು ತಿಳಿಸಿದರು.

ಚಲನಚಿತ್ರ ಕಲಾವಿದರಾದ ಶ್ರೀ ನೀನಾಸಂ ಸತೀಶ್‌ರವರು ಬಸವಣ್ಣನವರು ಮನುಷ್ಯ ಕುಲ ಒಂದೇ ಎಂದಿದ್ದರು. ದೇವರು ನಮ್ಮಲ್ಲೇ ಇದ್ದಾನೆ. ನಾವು ಒಳ್ಳೆಯ ಕೆಲಸಗಳನ್ನು ಮಾಡುವ ಮೂಲಕ, ಗುರು ಹಿರಿಯರು ಮತ್ತು ಮಕ್ಕಳಲ್ಲಿ ದೇವರನ್ನು ಕಾಣಬೇಕು ಎಂದು ಹೇಳಿದರು.

ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಪಿ.ಎಂ. ನರೇಂದ್ರಸ್ವಾಮಿಯವರು ಜೆಎಸ್‌ಎಸ್ ಸಂಚಾರಿ ಗ್ರಂಥಮಾಲೆಯನ್ನು ಉದ್ಘಾಟಿಸಿದರು.

ರಬಕವಿ ಶ್ರೀ ಗುರುದೇವ ಬ್ರಹ್ಮಾನಂದ ಆಶ್ರಮದ ಶ್ರೀ ಗುರುಸಿದ್ಧೇಶ್ವರ ಸ್ವಾಮಿಗಳು, ದೇವನೂರು ಶ್ರೀ ಗುರುಮಲ್ಲೇಶ್ವರ ದಾಸೋಹ ಮಹಾಸಂಸ್ಥಾನ ಮಠದ ಶ್ರೀ ಮಹಾಂತ ಸ್ವಾಮಿಗಳು, ವಿಧಾನಸಭೆಯ ಉಪಾಧ್ಯಕ್ಷರಾದ ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ, ಶಾಸಕರಾದ ಶ್ರೀ ಸಿ.ಕೆ. ರಾಮಮೂರ್ತಿ, ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷರಾದ ಶ್ರೀ ಶಿವಶಂಕರಪ್ಪ, ಸಾಹುಕಾರ್, ಸದಸ್ಯರಾದ ಡಾ. ಹೆಚ್.ಎಸ್. ನರೇಂದ್ರ, ಶ್ರೀಮತಿ ಬಿ.ವಿ. ಗೀತಾ, ರಂಗಕರ್ಮಿಗಳಾದ ಶ್ರೀ ಹೆಗ್ಗೋಡು ಪ್ರಸನ್ನ, ಕಲಾವಿದರಾದ ಶ್ರೀ ಎನ್.ಎಸ್. ನಾಗಭೂಷಣ, ಶ್ರೀ ವಾಸುಕಿ ವೈಭವ್‌ರವರುಗಳು ಮಾತನಾಡಿದರು. ಕನಕಪುರದ ಹಿರಿಯ ಶ್ರೀಗಳು, ಶ್ರೀ ಜಿ.ಎಸ್. ಜಯದೇವ್, ಶ್ರೀ ಗುಂಡಪ್ಪಗೌಡ, ಶ್ರೀ ವಿಶ್ವನಾಥ್, ಶ್ರೀ ಸೋಮಶೇಖರ್, ಉಪಸ್ಥಿತರಿದ್ದರು. ಶ್ರೀ ಎಸ್. ನಂದೀಶ್ ಸ್ವಾಗತಿಸಿದರು. ಶ್ರೀ ಆರ್.ಎಸ್. ಕುಮಾರ್ ವಂದಿಸಿದರು. ಶ್ರೀ ಬಿ.ಆರ್. ಪಂಚಾಕ್ಷರಿ ಕಾರ್ಯಕ್ರಮ ನಿರೂಪಿಸಿದರು.

**ಮನುಷ್ಯ ಧರ್ಮ ಮೇಲು**

ಎಲ್ಲ ಧರ್ಮಗಳಿಗಿಂತ ಮಾನವ ಧರ್ಮ ಮೇಲು. ನಾವೆಲ್ಲರೂ ಮನುಷ್ಯರು ಎಂದು ಅರ್ಥ ಮಾಡಿಕೊಂಡು ಬದುಕಬೇಕು ಎಂದು ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಜನವರಿ 18ರಂದು ಕೃಷಿ ವಿಚಾರಸಂಕಿರಣ ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. ಶಿಕ್ಷಣದಿಂದ ವ್ಯಕ್ತಿತ್ವವನ್ನು ಹಾಗೂ ಮನುಷ್ಯತ್ವವನ್ನು ರೂಪಿಸಿಕೊಳ್ಳಲು ಸಾಧ್ಯ. ದಯೆಯೇ ಧರ್ಮದ ಮೂಲವಯ್ಯ, ದಯೆಯಿಲ್ಲದ ಧರ್ಮ ಯಾವುದಯ್ಯ ಎಂದು ಬಸವಣ್ಣನವರು ಧರ್ಮದ ಕುರಿತು ವ್ಯಾಖ್ಯಾನಿಸಿದ್ದಾರೆ. ಎಲ್ಲಾ ಧರ್ಮಕ್ಕಿಂತ ಮಾನವ ಧರ್ಮ ಮೇಲು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಎಲ್ಲ ಧರ್ಮಗಳೂ ಮನುಷ್ಯರು ಪರಸ್ಪರ ಪ್ರೀತಿಸಬೇಕು ಎಂದು ಹೇಳುತ್ತವೆಯೇ ಹೊರತು ದ್ವೇಷ ಮಾಡಿ ಎಂದು ಹೇಳುವುದಿಲ್ಲ. ಹಿಂದೂ, ಇಸ್ಲಾಂ, ಕ್ರೈಸ್ತ, ಬೌದ್ಧ, ಜೈನ ಸೇರಿದಂತೆ ಯಾವುದೇ ಧರ್ಮವಾದರೂ ನಾವು ಪರಸ್ಪರ ಪ್ರೀತಿಯಿಂದ ಇರುವುದೇ ಮುಖ್ಯ. ನಾವು ಪರಸ್ಪರ ಪ್ರೀತಿಸಬೇಕೇ ಹೊರತು ದ್ವೇಷಿಸಬಾರದು ಎಂದು ಅವರು ಹೇಳಿದರು. ಸುತ್ತೂರಿನಲ್ಲಿ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವ ನಡೆಯುತ್ತಿದೆ. ಈ ಜಾತ್ರೆ ಬಹಳ ವರ್ಷಗಳಿಂದ ನಡೆಯುತ್ತಿದೆ. ನಾನು ಅನೇಕ ವರ್ಷಗಳಿಂದ ಜಾತ್ರೆಯಲ್ಲಿ ಭಾಗಿಯಾಗಿದ್ದೇನೆ. ಶ್ರೀಮಠದಲ್ಲಿ ಹಿಂದಿನಿಂದಲೂ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಧಾರ್ಮಿಕವಾಗಿ ತೊಡಗಿಸಿಕೊಳ್ಳುವುದರ ಜೊತೆಗೆ ಜ್ಞಾನ, ಅನ್ನದಾಸೋಹಕ್ಕೆ ಶ್ರೀಮಠ ಹೆಚ್ಚು ಮಹತ್ವ ನೀಡುತ್ತಿದೆ ಎಂದು ಅವರು ಹೇಳಿದರು.

ಸಚಿವರಾದ ಡಾ. ಶರಣಪ್ರಕಾಶ ಆರ್. ಪಾಟೀಲ್‌ರವರು ರೈತರ ಬದುಕಿನಲ್ಲಿ ಸುಧಾರಣೆಯಾದರೆ ಮಾತ್ರ ದೇಶ ಅಭಿವೃದ್ಧಿಯಾಗುತ್ತದೆ. ಈ ನಿಟ್ಟಿನಲ್ಲಿ ಸುತ್ತೂರು

ಶ್ರೀಮಠದ ಕಾರ್ಯ ಶ್ಲಾಘನೀಯ. ಸುತ್ತೂರು ಜಾತ್ರೆ ಜನಪ್ರಿಯವಾಗಿದ್ದು, ಎಲ್ಲೆಡೆ ಪ್ರಸಿದ್ಧವಾಗಿದೆ. ಬಸವಾದಿ ಶರಣರ ತತ್ತ್ವದ ಜೊತೆಗೆ ಭಕ್ತಿಭಾವವನ್ನು ಜನರಲ್ಲಿ ಮೂಡಿಸುತ್ತಿದೆ. ಕಾಯಕ, ದಾಸೋಹ ಪರಂಪರೆಯನ್ನು ಉಳಿಸಿದೆ. ಅನ್ನದಾಸೋಹದ ಜೊತೆಗೆ ಅಕ್ಷರ ದಾಸೋಹವೂ ಮುಖ್ಯ ಎಂದು ಅನೇಕ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ ವಿದ್ಯಾದಾನ ಮಾಡುತ್ತಿದೆ ಎಂದರು.

ಸಚಿವರಾದ ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್‌ರವರು ಶ್ರೀಮಠದಿಂದ ನಡೆಯುತ್ತಿರುವ ಜಾತ್ರಾ ಮಹೋತ್ಸವದಲ್ಲಿ ನಾನಾ ಧಾರ್ಮಿಕ ಕಾರ್ಯಕ್ರಮಗಳ ಜೊತೆಗೆ ಕೃಷಿಕರಿಗೆ ಅಗತ್ಯ ಅರಿವು ಮೂಡಿಸಲಾಗುತ್ತಿದೆ ಎಂದರು.

ವಾಟಾಳು ಹಾಗೂ ಕನಕಪುರ ಶ್ರೀ ದೇಗುಲಮಠದ ಕಿರಿಯ ಶ್ರೀಗಳು, ಸಚಿವರಾದ ಡಾ. ಎಂ.ಸಿ. ಸುಧಾಕರ್, ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ಅಮೆರಿಕದ ಪ್ರಿಸಿಷನ್ ಆರೋಗ್ಯ ಸಂಸ್ಥೆಯ ಸಲಹೆಗಾರರಾದ ಶ್ರೀಮತಿ ಮಮತಾ ಶೇಖರ್, ಚಾಮುಲ್ ಅಧ್ಯಕ್ಷರಾದ ಶ್ರೀ ಎಂ. ನಂಜುಂಡಸ್ವಾಮಿ, ಕೇರಳದ ಅಪರ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಕೆ.ಆರ್. ಜ್ಯೋತಿಲಾಲ್, ದುಬೈನ ಡಾ. ಗಿರೀಶ್‌ಚಂದ್ರ ವರ್ಮರವರುಗಳು ಮಾತನಾಡಿದರು. ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪ, ಶಾಸಕರಾದ ಡಾ. ಮಂಥರ್‌ಗೌಡ, ಶ್ರೀ ಡಿ. ರವಿಶಂಕರ್, ಶ್ರೀ ಎ.ಆರ್. ಕೃಷ್ಣಮೂರ್ತಿ, ಡಾ. ಯತೀಂದ್ರ ಸಿದ್ದರಾಮಯ್ಯ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಎಚ್.ಎಂ. ರೇವಣ್ಣ, ಉಪಾಧ್ಯಕ್ಷರಾದ ಡಾ. ಪುಷ್ಪಾ ಅಮರನಾಥ್, ಮಾಜಿ ಶಾಸಕರಾದ ಶ್ರೀ ಎಂ.ಕೆ. ಸೋಮಶೇಖರ್ ಉಪಸ್ಥಿತರಿದ್ದರು. ಪ್ರಗತಿಪರ ರೈತರಾದ ಶ್ರೀಮತಿ ಆಶಾ ಕನ್ನಂಗಿ, ಮಂಡ್ಯ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಡಾ. ಕೆ.ಎಂ. ಹರಿಣಿಕುಮಾರ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಪ್ರಗತಿಪರ ರೈತರು ಹಾಗೂ ರೈತ ಮಹಿಳೆಯರನ್ನು ಸನ್ಮಾನಿಸಲಾಯಿತು. 'ಕ್ರಾಪ್ ಇಂಪ್ರುಮೆಂಟ್', 'ಕ್ರಾಪ್ ಪ್ರೊಡಕ್ಷನ್' ಹಾಗೂ 'ಕ್ರಾಪ್ ಪ್ರೊಟೆಕ್ಷನ್' ಕೃತಿಗಳನ್ನು ಬಿಡುಗಡೆಗೊಳಿಸಲಾಯಿತು. ಡಾ. ಜ್ಞಾನೇಶ್ ಸ್ವಾಗತಿಸಿದರು. ಡಾ. ಎಂ.ಪಿ. ಸೋಮಶೇಖರ್ ವಂದಿಸಿದರು. ಶ್ರೀಮತಿ ಸವಿತಾ ಶಿವಕುಮಾರ್ ಕಾರ್ಯಕ್ರಮ ನಿರೂಪಿಸಿದರು.

**ಸುತ್ತೂರು ಶ್ರೀಮಠ ಕೃಷಿಗೆ ಆದ್ಯತೆ ನೀಡುತ್ತಿರುವುದು ಶ್ಲಾಘನೀಯ**

ಸುತ್ತೂರು ಶ್ರೀಮಠ ಕೃಷಿಗೆ ಆದ್ಯತೆ ನೀಡುತ್ತಿರುವುದು ಶ್ಲಾಘನೀಯ ಎಂದು ಸಚಿವರಾದ ಶ್ರೀ ಎನ್. ಚಲುವರಾಯಸ್ವಾಮಿಯವರು ಜನವರಿ 18ರಂದು ಕೃಷಿ ವಿಚಾರಸಂಕಿರಣ ಸಮಾರೋಪದಲ್ಲಿ ಮಾತನಾಡುತ್ತಾ ತಿಳಿಸಿದರು. ಬೆಳೆಗಳನ್ನು ಮೌಲ್ಯವರ್ಧನೆ ಮಾಡಿ ರೈತರು ಸಹ ಉದ್ಯಮಿಗಳಾಗಬಹುದು ಎಂಬ ಬಗ್ಗೆ ತಿಳುವಳಿಕೆ ಮೂಡಿಸುತ್ತಿರುವುದು ಉತ್ತಮ ಕಾರ್ಯವಾಗಿದೆ. ಈ ಭಾಗದ ರೈತರಿಗೆ ಕೃಷಿ ಪದ್ಧತಿಗಳ

ಕುರಿತು ಸಲಹೆಗಳನ್ನು ನೀಡಿ ಸಬಲೀಕರಣಗೊಳಿಸಲು ಶ್ರೀಮಠ ಶ್ರಮಿಸುತ್ತಿದೆ ಎಂದರು.

ಬಿಜೆಪಿ ರಾಜ್ಯಾಧ್ಯಕ್ಷರು ಹಾಗೂ ಶಾಸಕರಾದ ಶ್ರೀ ಬಿ.ವೈ. ವಿಜಯೇಂದ್ರರವರು ಸುತ್ತೂರು ಜಾತ್ರೆ ಗ್ರಾಮೀಣ ಜನತೆಗೆ ಶಕ್ತಿ ತುಂಬುವ ಜಾತ್ರೆ. ಉದ್ಯಮಿಗಳು ನೆಮ್ಮದಿಯ ಜೀವನ ನಡೆಸುತ್ತಿರುವಂತೆ, ರೈತರೂ ನೆಮ್ಮದಿ ಜೀವನ ಸಾಗಿಸಿದಾಗ ಮಾತ್ರ ರಾಷ್ಟ್ರದ ಅಭಿವೃದ್ಧಿ ಸಾಧ್ಯ. ಈ ನಿಟ್ಟಿನಲ್ಲಿ ರೈತಾಪಿ ವರ್ಗಕ್ಕೆ ದಿಕ್ಕು ತೋರಿಸುವ ಕೆಲಸವನ್ನು ಜಾತ್ರೆಯ ಮೂಲಕ ಶ್ರೀಮಠವು ನಡೆಸಿ ದೇಶಕ್ಕೆ ಮಾದರಿಯಾಗಿ ಕಾರ್ಯನಿರ್ವಹಿಸುತ್ತಿರುವುದು ಶ್ಲಾಘನೀಯ ಎಂದರು.

ವಿಜಯಪುರದ ಡಾ. ಶ್ರೀ ಬಸವಕುಮಾರ ಸ್ವಾಮಿಗಳು, ಕೇರಳದ ಶ್ರೀ ಪಂಚದಾಸನಾಮ ಅವಹಾನ್ ಅಖಾಡದ ಶ್ರೀ ಸ್ವಾಮಿ ಪ್ರಭಾಕರಾನಂದ ಸರಸ್ವತಿ ಮಹಾರಾಜ್, ಮೈಸೂರು ಶ್ರೀ ಸ್ವರ್ಣನೃಸಿಂಹ ದತ್ತ ಸಾಯಿಪೀಠದ ಶ್ರೀ ಅರ್ಜುನ ಅವಧೂತ ಗುರೂಜಿ, ಶಾಸಕರಾದ ಶ್ರೀ ಕೆ. ಹರೀಶ್‌ಗೌಡ, ಕುಲಪತಿಗಳಾದ ಡಾ. ಎಂ.ಆರ್. ಗಂಗಾಧರ್, ಶ್ರೀ ಎಸ್. ಗುರುಸ್ವಾಮಿಯವರುಗಳು ಮಾತನಾಡಿದರು. ಮಾಜಿ ಶಾಸಕರಾದ ಶ್ರೀ ಎಲ್. ನಾಗೇಂದ್ರ, ಶ್ರೀ ರಘು ಕೌಟಿಲ್ಯ, ಶ್ರೀ ಎಂ. ರುದ್ರೇಶ್, ಉಪಸ್ಥಿತರಿದ್ದರು. ಹಾವೇರಿಯ ಪ್ರಗತಿಪರ ರೈತರಾದ ಶ್ರೀಮತಿ ರಾಜೇಶ್ವರಿ ಪಾಟೀಲ್ ಮತ್ತು ಸಾವಯವ ಕೃಷಿ ಉದ್ಯಮಿಗಳಾದ ಶ್ರೀ ಯೋಗಿಶ್ ಅಪ್ಪಾಜಯ್ಯ ಉಪನ್ಯಾಸ ನೀಡಿದರು. ಡಾ. ನಂದೀಶ್ ಹಂಚೆ ಸ್ವಾಗತಿಸಿದರು. ಡಾ. ಕೆ.ವಿ. ಯೋಗೀಶ್ ವಂದಿಸಿದರು. ಶ್ರೀಮತಿ ಸಂಗೀತ ಗೌಡ ಕಾರ್ಯಕ್ರಮ ನಿರೂಪಿಸಿದರು.

**ಭವ್ಯ ಭಾರತ ನಿರ್ಮಿಸುವಲ್ಲಿ ಮಠಮಾನ್ಯಗಳ ಕೊಡುಗೆ ಅಪಾರ**

ದೇಶದಲ್ಲಿ ಮಠಮಾನ್ಯಗಳು ಶಿಕ್ಷಣಕ್ಕೆ ಒತ್ತು ನೀಡಿ ಜವಾಬ್ದಾರಿಯನ್ನು ನಿರ್ವಹಿಸದೆ ಹೋಗಿದ್ದರೆ ಇಂದು ಭಾರತ ದೇಶ ವಿಶ್ವಮಾನವ ದೇಶವಾಗಿ ರೂಪುಗೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಭವ್ಯ ಭಾರತದ ಭವಿಷ್ಯ ನಿರ್ಮಿಸುವಲ್ಲಿ ಮಠಮಾನ್ಯಗಳ ಕೊಡುಗೆ ಅಪಾರವಾಗಿದೆ ಎಂದು ಮಾಜಿ ಸಚಿವರಾದ ಶ್ರೀ ಸಿ.ಎಸ್. ಪುಟ್ಟರಾಜುರವರು ಜನವರಿ 19ರಂದು ಭಜನಾ ಮೇಳದ ಸಮಾರೋಪದಲ್ಲಿ ಮಾತನಾಡುತ್ತಾ ತಿಳಿಸಿದರು. ರಾಜ್ಯ ಮತ್ತು ದೇಶದಲ್ಲಿ ಮಠಮಾನ್ಯಗಳು ಶಿಕ್ಷಣಕ್ಕೆ ಆದ್ಯತೆ ನೀಡಿ ಕೆಲಸ ನಿರ್ವಹಿಸುವ ಮೂಲಕ ದೇಶದ ಅಭಿವೃದ್ಧಿಗೆ ಕಾರಣೀಭೂತವಾಗಿವೆ. ಸುತ್ತೂರು ಶ್ರೀಮಠವು ದೇಶ ಮತ್ತು ವಿದೇಶಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ತೆರೆದುದಲ್ಲದೆ ಗ್ರಾಮೀಣ ಭಾಗದ ಅಭಿವೃದ್ಧಿಗೆ ಮುನ್ನುಡಿ ಬರೆದಿದೆ. ಶ್ರೀಮಠದ ಸಂಸ್ಥೆಗಳಲ್ಲಿ ವಿದ್ಯಾಭ್ಯಾಸವನ್ನು ಪಡೆದ ಲಕ್ಷಾಂತರ ಜನರು ದೇಶ ವಿದೇಶಗಳಲ್ಲಿ ಪ್ರಖ್ಯಾತಿಯನ್ನು ಪಡೆದಿದ್ದಾರೆ. ಶ್ರೀಮಠವು ಆಧ್ಯಾತ್ಮಿಕ ಮತ್ತು ಶಿಕ್ಷಣಕ್ಕೆ ಮಾತ್ರ ಸೀಮಿತವಾಗದೆ ಹಳ್ಳಿಗಳು ಅಭಿವೃದ್ಧಿ ಕಂಡಲ್ಲಿ ದೇಶದ ಅಭಿವೃದ್ಧಿ ಸಾಧ್ಯ ಎಂಬ

ಮಹಾತ್ಮಗಾಂಧೀಜಿಯವರ ಆಶಯದಂತೆ ಗ್ರಾಮೀಣ ಭಾಗದ ಜನರಿಗೆ ಅವಶ್ಯವಿರುವ ಎಲ್ಲ ಜ್ಞಾನವನ್ನು ಸವಲತ್ತುಗಳನ್ನು ಒದಗಿಸುವ ಮೂಲಕ ಸಮಾಜಮುಖಿಯಾಗಿ ಕೆಲಸ ಮಾಡುತ್ತಿರುವುದು ಶ್ಲಾಘನೀಯ ಎಂದು ತಿಳಿಸಿದರು.

ಶಾಸಕರಾದ ಶ್ರೀ ಜಿ.ಡಿ. ಹರೀಶ್‌ಗೌಡರವರು ಸುತ್ತೂರು ಮಠವು ಲಕ್ಷಾಂತರ ವಿದ್ಯಾರ್ಥಿಗಳಿಗೆ ಅನ್ನ ಆಶ್ರಯ ನೀಡಿ ಅವರ ಭವಿಷ್ಯ ರೂಪಿಸಿಕೊಳ್ಳುವುದರ ಜೊತೆಗೆ ಭವ್ಯ ಭಾರತ ದೇಶದ ಭವಿಷ್ಯವನ್ನೂ ರೂಪಿಸುವ ಮಹತ್ತರ ಪಾತ್ರವನ್ನು ನಿರ್ವಹಿಸುತ್ತಿದೆ. ದೇಸೀಯ ಕಲಾವಿದರನ್ನು ಪ್ರೋತ್ಸಾಹಿಸಿ ಉತ್ತೇಜನ ನೀಡುವ ಮೂಲಕ ನಮ್ಮ ಸಂಸ್ಕೃತಿ, ಪರಂಪರೆಯನ್ನೂ ಉಳಿಸಲು ಮುಂದಾಗಿದೆ ಎಂದರು.

ಮಾಜಿ ಶಾಸಕರಾದ ಡಾ. ಕೆ. ಅನ್ನದಾನಿಯವರು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಮಾಡಲಾರದ ಕೆಲಸವನ್ನು ಶ್ರೀಮಠವು ಮಾಡುತ್ತಿದೆ. ಧಾರ್ಮಿಕತೆಯನ್ನು ಹೊರತುಪಡಿಸಿ ಜನರಿಗೆ ಬೇಕಾದ ಜ್ಞಾನ ತಿಳವಳಿಕೆಯನ್ನು ಮೂಡಿಸುವ ಕೆಲಸ ಮಾಡುತ್ತಿದೆ. ಬಡವರಿಗೆ, ಅಂಧರಿಗೆ ಅಂಗವಿಕಲರಿಗೆ, ವಿಶೇಷವಾದ ಸೌಲಭ್ಯವನ್ನು ಮಠದ ಮೂಲಕ ಕಲ್ಪಿಸಿ ಸಮಾಜಮುಖಿಯಾಗಿ ಕೆಲಸ ಮಾಡುತ್ತಿರುವುದು ಅವಿಸ್ಮರಣೀಯ ಎಂದು ಹೇಳಿದರು.

ಮೈಸೂರು ಶ್ರೀ ಅವಧೂತ ದತ್ತ ಪೀಠದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮಿಗಳು, ಹೂವಿನಹಡಗಲಿಯ ಶ್ರೀ ಗವಿಸಿದ್ದೇಶ್ವರ ಶಾಖಾಮಠದ ಡಾ. ಶ್ರೀ ಹಿರಿಶಾಂತವೀರ ಸ್ವಾಮಿಗಳು, ಸಿಂದಗಿ ಶ್ರೀ ಸಾರಂಗಮಠದ ಶ್ರೀ ಪ್ರಭುಸಾರಂಗದೇವ ಶಿವಾಚಾರ್ಯ ಸ್ವಾಮಿಗಳು, ಡಾ. ಶ್ರೀ ಪ್ರಭು ಸ್ವಾಮಿಗಳು, ವಿಧಾನಪರಿಷತ್ ಸದಸ್ಯರಾದ ಶ್ರೀ ಕೆ. ವಿವೇಕಾನಂದ, ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಎಂ. ಕೃಷ್ಣಪ್ಪ, ಮೈಮುಲ್ ಅಧ್ಯಕ್ಷರಾದ ಶ್ರೀ ಈರೇಗೌಡ, ಕೆಎಸ್‌ಆರ್‌ಪಿ ಡಿಐಜಿ ಶ್ರೀ ಆರ್. ಜನಾರ್ಧನ, ಜಿಎಸ್‌ಟಿ ಆಯುಕ್ತರಾದ ಶ್ರೀ ಸಿ.ವಿ.ಎನ್. ಸುರೇಶ್‌ಬಾಬುರವರುಗಳು ಮಾತನಾಡಿದರು. ಮಾಜಿ ಶಾಸಕರಾದ ಶ್ರೀ ಬಿ. ಹರ್ಷವರ್ಧನ್, ಕೆಎಸ್‌ಸಿಎ ಶ್ರೀ ಶ್ರೀನಿವಾಸ್‌ರವರು ಉಪಸ್ಥಿತರಿದ್ದರು. ಪ್ರೊ. ಸುಬ್ಬಪ್ಪ ಸ್ವಾಗತಿಸಿದರು. ಶ್ರೀ ಎನ್. ಮಂಜುನಾಥ್ ವಂದಿಸಿದರು. ಪ್ರೊ. ಡಿ.ಎಸ್. ಸದಾಶಿವಮೂರ್ತಿ ಕಾರ್ಯಕ್ರಮ ನಿರೂಪಿಸಿದರು.

**ಸರ್ವಧರ್ಮಗಳನ್ನೂ ಒಗ್ಗೂಡಿಸುವ ಸುತ್ತೂರು ಜಾತ್ರೆ**

ಸರ್ವಧರ್ಮಗಳನ್ನೂ ಸುತ್ತೂರು ಜಾತ್ರೆ ಒಗ್ಗೂಡಿಸುತ್ತಿದೆ ಎಂದು ಶಾಸಕರಾದ ಶ್ರೀ ರಿಜ್ವಾನ್ ಅರ್ಷದ್‌ರವರು ಜನವರಿ 19ರಂದು ರಾಜ್ಯಮಟ್ಟದ ಕುಸ್ತಿ ಪಂದ್ಯಾವಳಿ ಉದ್ಘಾಟನೆಯಲ್ಲಿ ಮಾತನಾಡುತ್ತಾ ತಿಳಿಸಿದರು. ನಾನು ಪ್ರತಿವರ್ಷವು ಸುತ್ತೂರು ಜಾತ್ರೆಯಲ್ಲಿ ಬಹಳ ಉತ್ಸಾಹದಿಂದ ಭಾಗವಹಿಸುತ್ತಿದ್ದೇನೆ. ಸುತ್ತೂರು ಜಾತ್ರೆ ಈ ಭಾಗಕ್ಕೆ ಮಾತ್ರ ಸೀಮಿತವಾಗಿಲ್ಲ. ರಾಜ್ಯದ ಬಹುಮುಖ್ಯ ಜಾತ್ರೆಗಳಲ್ಲಿ ಒಂದಾಗಿದೆ. ಜಾತ್ರೆಯಲ್ಲಿ ನಡೆಯುತ್ತಿರುವ ಕುಸ್ತಿ ಪಂದ್ಯಾವಳಿ ಕೇವಲ ರಾಜ್ಯಮಟ್ಟವಲ್ಲ, ರಾಷ್ಟ್ರಮಟ್ಟದ ಪಂದ್ಯಾವಳಿ

ಯಾಗಿದೆ. ಇತ್ತೀಚೆಗೆ ಯುವಕರು ಮಾದಕ ವಸ್ತುಗಳಿಗೆ ಬಲಿಯಾಗುತ್ತಿದ್ದಾರೆ. ಕುಸ್ತಿಯಂತಹ ಕ್ರೀಡೆಗಳನ್ನು ನಡೆಸುವುದರಿಂದ ದೈಹಿಕ ಹಾಗೂ ಮಾನಸಿಕವಾಗಿ ಸದೃಢರಾಗಬಹುದು ಎಂದು ತಿಳಿಸಿದರು.

ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ತನ್ವಿರ್ ಸೇಠ್‌ರವರು ಸುತ್ತೂರು ಜಾತ್ರೆಯಲ್ಲಿ ಕುಸ್ತಿ ಪಂದ್ಯಾವಳಿಗಳನ್ನು ಆಯೋಜನೆ ಮಾಡಿರುವುದು ಕುಸ್ತಿಪ್ರಿಯರಿಗೆ ಸಂತೋಷದ ಸಂಗತಿಯಾಗಿದೆ. ಶ್ರೀಗಳು ಜಾತ್ರೆಯನ್ನು ಧಾರ್ಮಿಕ ಹಾಗೂ ಶೈಕ್ಷಣಿಕವಾಗಿ ಮಾಹಿತಿ ನೀಡುವ ಸ್ಥಳವನ್ನಾಗಿ ಬದಲಾವಣೆ ಮಾಡಿದ್ದಾರೆ. ಮಹಾರಾಜರ ಕಾಲದಿಂದಲೂ ಕುಸ್ತಿ ಪಂದ್ಯಾವಳಿಗಳು ನಡೆದಿವೆ. ಯುವಕರು ಡ್ರಗ್ಸ್ ಜಾಲಗಳಿಗೆ ಬಲಿ ಬೀಳುತ್ತಿದ್ದು, ಎಚ್ಚೆತ್ತುಕೊಂಡು ಕ್ರೀಡೆಯತ್ತ ಗಮನಹರಿಸಬೇಕು ಎಂದರು.

ಮಲ್ಲನಮೂಲೆ ಶ್ರೀಗಳು, ಶಾಸಕರಾದ ಶ್ರೀ ದರ್ಶನ್ ಧ್ರುವನಾರಾಯಣ್, ಚಾಮರಾಜನಗರ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಶ್ರೀ ಎಂ. ಮುತ್ತುರಾಜ್, ಮಾಜಿ ಶಾಸಕರಾದ ಶ್ರೀ ಬಿ. ಹರ್ಷವರ್ಧನ್, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ಶ್ರೀ ದೊಡ್ಡಸ್ವಾಮೇಗೌಡ. ಡಾ. ದತ್ತೇಶ್‌ಕುಮಾರ್, ಪ್ರೊ. ಶಿವರಾಜಪ್ಪನವರುಗಳು ಮಾತನಾಡಿದರು. ಮಾಜಿ ಶಾಸಕರುಗಳಾದ ಶ್ರೀಮತಿ ಪರಿಮಳ ನಾಗಪ್ಪ, ಶ್ರೀ ಕಳಲೆ ಕೇಶವಮೂರ್ತಿ, ಶ್ರೀ ಎಂ. ಪ್ರದೀಪ್‌ಕುಮಾರ್‌ರವರು ಉಪಸ್ಥಿತರಿದ್ದರು. ಡಾ. ಸಿ.ಎಸ್. ಹೊನ್ನೇಗೌಡ ಸ್ವಾಗತಿಸಿದರು. ಶ್ರೀ ದೇವರಾಜಮೂರ್ತಿ ವಂದಿಸಿದರು. ಶ್ರೀ ಬಿ.ಕೆ. ರವಿಕುಮಾರ್ ಕಾರ್ಯಕ್ರಮ ನಿರೂಪಿಸಿದರು.

**ಸಾವಯವ ಕೃಷಿಗೆ ಒತ್ತು ನೀಡಬೇಕು**

ಸಾವಯವ ಕೃಷಿಗೆ ಒತ್ತು ನೀಡಬೇಕು ಎಂದು ಸಚಿವರಾದ ಶ್ರೀ ದಿನೇಶ್ ಗುಂಡೂರಾವ್‌ರವರು ಜನವರಿ 19ರಂದು ಕೃಷಿ ಮೇಳ ಮತ್ತು ದನಗಳ ಜಾತ್ರೆ ಸಮಾರೋಪದಲ್ಲಿ ಮಾತನಾಡುತ್ತಾ ತಿಳಿಸಿದರು. ದೇಶ ಸ್ವಾತಂತ್ರ್ಯಾನಂತರ ಆಹಾರೋತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿದ್ದರೂ ಬದಲಾದ ಸನ್ನಿವೇಶದಲ್ಲಿ ಆಹಾರೋತ್ಪಾದನೆಯಲ್ಲಿ ಹೊಸ ಸವಾಲುಗಳು ಎದುರಾಗುತ್ತಿವೆ. ಅವುಗಳನ್ನು ಸಮರ್ಥವಾಗಿ ಎದುರಿಸಲು ಕೃಷಿ ಕ್ಷೇತ್ರವನ್ನು ಬಲಗೊಳಿಸಬೇಕಿದೆ. ಬದಲಾದ ಸನ್ನಿವೇಶದಲ್ಲಿ ಮಿತಿ ಮೀರಿದ ರಾಸಾಯನಿಕಗಳ ಬಳಕೆಯಿಂದಾಗಿ ಕೃಷಿಭೂಮಿ ವಿಷಯುಕ್ತವಾಗುತ್ತಿದೆ. ಸುಸ್ಥಿರ ಕೃಷಿಯೊಂದಿಗೆ ಆರೋಗ್ಯಪೂರ್ಣ ಸಮಾಜ ನಿರ್ಮಾಣ ಮಾಡಬೇಕಿದೆ. ವಿಶ್ವಮಟ್ಟದಲ್ಲಿ ಭಾರತಕ್ಕೆ ವ್ಯಾಪಕ ಮನ್ನಣೆ ಇದ್ದು, ಜಗತ್ತಿನ ಅತ್ಯಂತ ಹೆಚ್ಚು ಜನಸಂಖ್ಯೆ ಹೊಂದಿರುವ ಭಾರತ ಭವಿಷ್ಯದಲ್ಲಿ ಆಧುನಿಕ ಮತ್ತು ಶಕ್ತಿಶಾಲಿ ರಾಷ್ಟ್ರವಾಗಿಯೂ ಗುರುತಿಸಿಕೊಳ್ಳಬೇಕಾದಲ್ಲಿ ದೇಶದ 140 ಕೋಟಿಗೂ ಹೆಚ್ಚು ಸಂಖ್ಯೆಯ ಜನರ ಬುದ್ಧಿಶಕ್ತಿಯನ್ನು ಬಳಸಿಕೊಂಡು ಪ್ರಗತಿಯತ್ತ ಸಾಗಬೇಕಿದೆ ಎಂದು ತಿಳಿಸಿದರು.

ದನಗಳ ಜಾತ್ರೆಯಲ್ಲಿ ವಿವಿಧ ವಿಭಾಗಗಳಲ್ಲಿ ಉತ್ತಮ ಪ್ರದರ್ಶನ ತೋರಿದ ರಾಸುಗಳಿಗೆ ಬಹುಮಾನ ವಿತರಿಸಲಾಯಿತು. ಬರಗೂರು ಶ್ರೀ ದ್ರೋಣಗಿರಿ ಮಠದ ಶ್ರೀ ಅಶೋಕ ರಾಜೇಂದ್ರ ಸ್ವಾಮಿಗಳು, ಶ್ರೀ ಭಾಷ್ಯಂ ಸ್ವಾಮಿಗಳು, ವಿಧಾನಪರಿಷತ್ ಸದಸ್ಯರಾದ ಡಾ. ಡಿ. ತಿಮ್ಮಯ್ಯ, ಶ್ರೀ ಸಿ.ಎನ್. ಮಂಜೇಗೌಡ, ಶಾಸಕರಾದ ಶ್ರೀ ಅನಿಲ್ ಚಿಕ್ಕಮಾದು, ಶ್ರೀಮತಿ ಲತಾ ಮಲ್ಲಿಕಾರ್ಜುನ್, ಮಾಜಿ ಸಚಿವರಾದ ಶ್ರೀ ಸಾ.ರಾ. ಮಹೇಶ್, ಅಮೆರಿಕದ ಜೆಎಸ್ಎಸ್ ಆಧ್ಯಾತ್ಮಿಕ ಕೇಂದ್ರದ ಸಲಹಾ ಸಮಿತಿ ಅಧ್ಯಕ್ಷರಾದ ಡಾ. ಸುಭಾಷ್ ಮಲ್ಗನ್, ಅಮೆರಿಕದ ನಿವೃತ್ತ ವಿಜ್ಞಾನಿಗಳಾದ ಶ್ರೀಮತಿ ಜಯಶ್ರೀ ಜಗದೀಶ್, ಮಂಡ್ಯ ಜಿಲ್ಲಾ ಪಂಚಾಯತ್ ಸಿಇಒ ಶ್ರೀಮತಿ ಕೆ.ಆರ್. ನಂದಿನಿ, ಮೈಲ್ಯಾಕ್ ಮಾಜಿ ಅಧ್ಯಕ್ಷರಾದ ಶ್ರೀ ವೆಂಕಟೇಶ್‌ರವರುಗಳು ಮಾತನಾಡಿದರು. ಶಾಸಕರಾದ ಶ್ರೀ ಅನಿಲ್ ಚಿಕ್ಕಮಾದು, ಶ್ರೀ ಎಂ.ಆರ್. ಮಂಜುನಾಥ್, ಮಾಜಿ ಶಾಸಕರಾದ ಶ್ರೀ ಸಿ.ಎಸ್. ನಿರಂಜನ್‌ಕುಮಾರ್, ಶ್ರೀ ಅಶ್ವಿನ್‌ಕುಮಾರ್, ಮೂಡಾ ಮಾಜಿ ಅಧ್ಯಕ್ಷರಾದ ಶ್ರೀ ಹೆಚ್.ವಿ. ರಾಜೀವ್, ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆಯ ಕಾರ್ಯನಿರ್ವಾಹಕ ಉಪಾಧ್ಯಕ್ಷರಾದ ಶ್ರೀ ವೇಲುಸ್ವಾಮಿ, ಉಪಾಧ್ಯಕ್ಷರಾದ ಶ್ರೀ ಸತೀಶ್, ಶ್ರೀ ಶರವಣನ್, ವಕೀಲರಾದ ಶ್ರೀ ಶಂಕರಶೆಟ್ಟಿ, ಪ್ರೊ. ಎಂ. ಕೃಷ್ಣೇಗೌಡ, ಕಾಮಾಕ್ಷಿ ಆಸ್ಪತ್ರೆಯ ಶ್ರೀ ಮಹೇಶ್ ಶೆಣೈ ಉಪಸ್ಥಿತರಿದ್ದರು. ಪ್ರೊ. ಪಿ.ಎಂ. ಮಹದೇವಸ್ವಾಮಿ ಸ್ವಾಗತಿಸಿದರು. ಡಾ. ವಿನಯ್‌ಕುಮಾರ್ ಹಾಗೂ ಶ್ರೀ ಉಮಾ ಮಹೇಶ್ವರನ್ ಕೃಷಿಮೇಳ ಮತ್ತು ದನಗಳ ಜಾತ್ರೆಯ ವರದಿ ಮಂಡಿಸಿದರು. ಶ್ರೀ ಮಲ್ಲೇಶಪ್ಪ ವಂದಿಸಿದರು. ಶ್ರೀ ಮಂಜುನಾಥ್ ಕಾರ್ಯಕ್ರಮ ನಿರೂಪಿಸಿದರು.

**ಮೈಸೂರು ಭಾಗದ ಕೃಷಿ ಉತ್ಪನ್ನಗಳಿಗೆ ಅಂತಾರಾಷ್ಟ್ರೀಯ ಮಾನ್ಯತೆ ಐತಿಹಾಸಿಕ ಸಾಧನೆ**

ಮೈಸೂರು ಭಾಗದ ಸಾಂಪ್ರದಾಯಿಕ ಕೃಷಿ ಉತ್ಪನ್ನಗಳಿಗೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹೊಸ ಆಯಾಮ ದೊರೆತಿರುವುದು ಒಂದು ಐತಿಹಾಸಿಕ ಸಾಧನೆಯಾಗಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಜನವರಿ 15ರಂದು ಬೆಂಗಳೂರಿನ ಕೃಷಿ ಮತ್ತು ಸಂಸ್ಕರಿಸಿದ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ, ಮೈಸೂರಿನ ತೋಟಗಾರಿಕೆ ಇಲಾಖೆ ಹಾಗೂ ಐಸಿಎಆರ್‌ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರಗಳ ಸಹಯೋಗದೊಂದಿಗೆ ಸುತ್ತೂರು ಶ್ರೀಕ್ಷೇತ್ರದದಲ್ಲಿ ಮೈಸೂರಿನ ಜಿಐ ಟ್ಯಾಗ್ ಬೆಳೆಗಳಾದ ನಂಜನಗೂಡು ರಸಬಾಳೆ ಹಾಗೂ ಮೈಸೂರು ವೀಳ್ಯದೆಲೆಯನ್ನು ಹೊರದೇಶಕ್ಕೆ ರಫ್ತು ಮಾಡುವ ಪ್ರಕ್ರಿಯೆ ಚಾಲನೆ ನೀಡುವ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಮೈಸೂರಿನ ಪರಂಪರೆಯ ಕೃಷಿ ಉತ್ಪನ್ನಗಳು ಇಂದು ದೂರದ ಮಾಲ್ಡಿವ್ಸ್‌ಗೆ ರಫ್ತು ಆಗುತ್ತಿರುವುದು ಅತ್ಯಂತ ಸಂತಸದ ಸಂಗತಿಯಾಗಿದೆ. ನಂಜನಗೂಡು ರಸಬಾಳೆ ಹಾಗೂ ಮೈಸೂರು ವೀಳ್ಯದೆಲೆಗಳು ಮುಂದಿನ ದಿನಗಳಲ್ಲಿ ಬೇರೆ ದೇಶಗಳಿಗೂ ರಫ್ತಾಗಬೇಕು. ಹೊರದೇಶಗಳಲ್ಲಿನ ಬೇಡಿಕೆಯನ್ನು ಮನಗಂಡು ರೈತ ಬಾಂಧವರು ಸಾವಯವ ಕೃಷಿಗೆ ಹೆಚ್ಚು ಒತ್ತು ನೀಡಿ ತಮ್ಮ ಕೃಷಿ ಉತ್ಪನ್ನಗಳಿಗೆ ಉತ್ತಮ ಬೆಲೆ ಕಂಡುಕೊಳ್ಳಬೇಕೆಂದು ಹೇಳಿದರು.

ಮೈಸೂರಿನ ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕರಾದ ಶ್ರೀ ಮಂಜುನಾಥ ಅಂಗಡಿ, ಐಸಿಎಆರ್ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥ ಡಾ. ಬಿ.ಎನ್. ಜ್ಞಾನೇಶ್, ಕುರಹಟ್ಟಿಯ ಶ್ರೀ ನಂಜುಂಡಸ್ವಾಮಿಯವರ ನಂಜನಗೂಡು ರಸಬಾಳೆ ಹಾಗೂ ಮಾರ್ಬಳ್ಳಿಯ ಶ್ರೀ ಚಿಕ್ಕಸ್ವಾಮಿಯವರ ಮೈಸೂರು ವೀಳ್ಯದೆಲೆಯ ಕೃಷಿ ಉತ್ಪನ್ನಗಳನ್ನು ರಫ್ತು ಮಾಡಲು ಕ್ರಮವಹಿಸಲಾಯಿತು. ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಸಿಬ್ಬಂದಿ ವರ್ಗದವರು, ರೈತರು ಉಪಸ್ಥಿತರಿದ್ದರು.

**ಶತಾಯುಷಿ ಶ್ರೀ ಭೀಮಣ್ಣ ಖಂಡ್ರೆಯವರ ಅಗಲುವಿಕೆಗೆ ಸಂತಾಪ**

ಕರ್ನಾಟಕದ ಹಿರಿಯ ರಾಜಕೀಯ ಮುತ್ಸದ್ಧಿ ಗಳಲ್ಲೊಬ್ಬರಾಗಿದ್ದ ಶ್ರೀ ಭೀಮಣ್ಣ ಖಂಡ್ರೆಯವರು 16 ಜನವರಿ 2026ರಂದು ದೈವಾಧೀನರಾದುದು ವಿಷಾದದ ಸಂಗತಿ.

ಕಲ್ಯಾಣ ಕರ್ನಾಟಕದ ಪ್ರಮುಖ ರಾಜಕಾರಣಿ ಗಳಲ್ಲಿ ಒಬ್ಬರಾಗಿದ್ದರು. ಸಹಕಾರಿ ಕ್ಷೇತ್ರದ ಧುರೀಣ ರಾಗಿ ಖ್ಯಾತರಾಗಿದ್ದರು. ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಹೈದರಾಬಾದ್ ವಿಮೋಚನಾ ಹೋರಾಟದಲ್ಲೂ ಪ್ರಮುಖರಾಗಿ ಪಾಲ್ಗೊಂಡಿದ್ದರು. ಬೀದರ್ ಜಿಲ್ಲೆಯ ಧೀಮಂತ ನಾಯಕರಾಗಿದ್ದರು. ಭಾಲ್ಕಿ ಕ್ಷೇತ್ರದಿಂದ ನಾಲ್ಕು ಬಾರಿ ವಿಧಾನಸಭೆಗೆ ಹಾಗೂ ಎರಡು ಬಾರಿ ವಿಧಾನಪರಿಷತ್ತಿಗೆ ಆಯ್ಕೆಯಾಗಿದ್ದರು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು. ಸಾರಿಗೆ ಸಚಿವರಾಗಿದ್ದರು. ಸುದೀರ್ಘ ರಾಜಕಾರಣದಲ್ಲಿ ಪರಿಶುದ್ಧತೆಯನ್ನು ಕಾಪಾಡಿಕೊಂಡು ಬಂದಿದ್ದ ವೈಶಿಷ್ಟ್ಯ ಅವರದು.

ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭೆಯ ಅಧ್ಯಕ್ಷರಾಗಿ ಬಹಳ ಸುದೀರ್ಘ ಕಾಲ ನಿಸ್ಪೃಹ್ಯತೆಯಿಂದ ಸೇವೆ ಸಲ್ಲಿಸಿದ್ದರು. ಸಮಾಜಕ್ಕೆ ಅನ್ಯಾಯವಾದಾಗ ಸಿಡಿದೆದ್ದು ಪ್ರತಿಭಟಿಸಿದ್ದರು. ಪ್ರಸ್ತುತ ಸಚಿವರಾಗಿರುವ ಶ್ರೀ ಈಶ್ವರ್ ಖಂಡ್ರೆಯವರು ಅವರ ಸುಪುತ್ರರು. ಮೊಮ್ಮಗನಾದ ಶ್ರೀ ಸಾಗರ್ ಖಂಡ್ರೆಯವರು ಸಂಸದರು. ಅವರುಗಳು ಶ್ರೀ ಭೀಮಣ್ಣ ಖಂಡ್ರೆಯವರ ಸಮಾಜಸೇವಾ ಕಾರ್ಯಗಳನ್ನು ಮುಂದುವರಿಸಿದ್ದಾರೆ.

ಮಠಮಾನ್ಯಗಳ ಬಗ್ಗೆ ಅಪಾರ ಶ್ರದ್ಧಾಭಕ್ತಿಗಳನ್ನು ಹೊಂದಿದ್ದರು. ಸುತ್ತೂರು ಶ್ರೀಕ್ಷೇತ್ರದಲ್ಲಿ 2011ರಲ್ಲಿ ನಡೆದ 22ನೇ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮಹಾ ಅಧಿವೇಶನ ಅವರ ಅಧ್ಯಕ್ಷತೆಯಲ್ಲಿ ಅತ್ಯಂತ ಯಶಸ್ವಿಯಾಗಿ ನೆರವೇರಿದುದು ಎಲ್ಲರ ಮನಸ್ಸಿನಲ್ಲಿಯೂ ಇನ್ನೂ ಹಸಿರಾಗಿಯೇ ಇದೆ.

ಸಾರ್ವಜನಿಕ ಜೀವನದಲ್ಲಿ ಅಜಾತಶತ್ರುಗಳಾಗಿದ್ದರು. ಶತಾಯುಷಿಗಳಾಗಿ ಸಾರ್ಥಕ ಬದುಕು ಸಾಗಿಸಿದ್ದರು. ಅವರ ಅಗಲುವಿಕೆಯಿಂದ ರಾಜ್ಯದ ಹಿರಿಯ ಚೇತನವೊಂದು ಅಸ್ತಂಗತವಾಗಿದೆ. ಶ್ರೀಯುತರ ಆತ್ಮಕ್ಕೆ ಶಾಂತಿಯನ್ನು, ಅವರ ಕುಟುಂಬವರ್ಗದವರು ಮತ್ತು ಅಸಂಖ್ಯಾತ ಅಭಿಮಾನಿಗಳಿಗೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲೆಂದು ಪರಮಪೂಜ್ಯ ಜಗದ್ಗುರುಗಳವರು ಹಾರೈಸಿದ್ದಾರೆ.

**ಧಾರ್ಮಿಕ ಪೂಜೆಗಳಿಂದ ಸನಾತನ ಧರ್ಮ ಗಟ್ಟಿಯಾಗಿದೆ**

ಧಾರ್ಮಿಕ ಶ್ರದ್ಧಾ ಕೇಂದ್ರಗಳು, ಮಠಮಾನ್ಯಗಳು ಲೋಕ ಕಲ್ಯಾಣಾರ್ಥವಾಗಿ ನಡೆಸುವ ಧಾರ್ಮಿಕ ಕಾರ್ಯಕ್ರಮ ಮತ್ತು ದೇವರ ಪೂಜೆಯಿಂದಾಗಿ ಸನಾತನಧರ್ಮ ಗಟ್ಟಿಯಾಗಿ ನೆಲೆಯೂರಲು ಸಾಧ್ಯವಾಗಿದೆ ಎಂದು ಶಾಸಕ ಟಿ.ಎಸ್. ಶ್ರೀವತ್ಸರವರು ಜನವರಿ 20ರಂದು ಸಾಂಸ್ಕೃತಿಕ ಮೇಳ ಮತ್ತು ವಸ್ತುಪ್ರದರ್ಶನ ಸಮಾರೋಪದಲ್ಲಿ ಮಾತನಾಡುತ್ತಾ ತಿಳಿಸಿದರು. ಸುತ್ತೂರು ಜಾತ್ರಾ ಮಹೋತ್ಸವವು ಮೈಸೂರು ದಸರಾ ಮಾದರಿಯಲ್ಲಿಯೇ ನಾಡಿನ ಕಲೆ, ಸಂಸ್ಕೃತಿ, ಪರಂಪರೆಯನ್ನು ಬಿಂಬಿಸುವ ಜಾತ್ರೆಯಾಗಿದೆ. ಜಾತ್ರಾ ಮಹೋತ್ಸವದ ಮೂಲಕ ಈ ಭಾಗದ ಗ್ರಾಮೀಣರ ಸೊಗಡಿನ ಸಂಸ್ಕೃತಿಯನ್ನು ಉತ್ತೇಜಿಸಿ, ನಮ್ಮ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗಾಗಿ ಉಳಿಸಿ ಬೆಳೆಸುವ ಕಾರ್ಯದಲ್ಲಿ ಶ್ರೀಮಠವು ನಿರತವಾಗಿದೆ ಎಂದು ಹೇಳಿದರು.

ಹೆಬ್ಬಾಳು ಶ್ರೀ ರುದ್ರೇಶ್ವರ ವಿರಕ್ತಮಠದ ಶ್ರೀ ಮಹಾಂತರುದ್ರೇಶ್ವರ ಸ್ವಾಮಿಗಳು ರಾಜ್ಯದಲ್ಲಿ ಮಠಮಾನ್ಯಗಳು ಸನಾತನ ಸಂಸ್ಕೃತಿಯನ್ನು ಸಂರಕ್ಷಿಸುವ ಕೆಲಸವನ್ನು ನಿರ್ವಹಿಸುತ್ತಿವೆ. ಬಡವರ್ಗದ ಜನರಿಗೆ ಧಾರ್ಮಿಕ ಶಿಕ್ಷಣದ ಜೊತೆಗೆ ಸಂಸ್ಕಾರ, ಮಾನವೀಯ ಮೌಲ್ಯ ಮತ್ತು ದೇಶದ ಸಂಸ್ಕೃತಿಯನ್ನು ಕಲಿಸುವಂತಹ ಕೆಲಸವನ್ನು ನಿರಂತರವಾಗಿ ಮಾಡುತ್ತಿರುವ ಕಾರಣ ಸನಾತನ ಸಂಸ್ಕೃತಿ ಜೀವಂತವಾಗಿ ಉಳಿದಿದೆ ಎಂದರು.

ಶಾಸಕರಾದ ಶ್ರೀ ಎ.ಆರ್. ಕೃಷ್ಣಮೂರ್ತಿಯವರು ಸುತ್ತೂರು ಶ್ರೀಮಠವು ಸಮಾಜಮುಖಿ ಸೇವಾ ಕಾರ್ಯಗಳಿಂದಾಗಿ ರಾಜ್ಯದ ಜನರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ. ಜಾತ್ರಾ ಮಹೋತ್ಸವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಭಾಗವಹಿಸಿ ಜಾತ್ರಾ ಅನುಭವವನ್ನು ಪಡೆದಿರುವುದೇ ಇದಕ್ಕೆ ಸಾಕ್ಷಿಯಾಗಿದೆ ಎಂದರು.

ನಿವೃತ್ತ ಕುಲಪತಿಗಳಾದ ಪ್ರೊ. ಜಿ ಹೇಮಂತ್‌ಕುಮಾರ್‌ರವರು ಯುವಕರಿಗೆ ಕೇವಲ ವಿದ್ಯಾಭ್ಯಾಸ ನೀಡುವುದು ಸಲ್ಲದು, ಅವರ ಭವಿಷ್ಯವನ್ನು ರೂಪಿಸಿಕೊಳ್ಳಲು ಸಂಸ್ಕಾರಯುತ ಮಾರ್ಗ ತೋರಬೇಕು. ಈ ನಿಟ್ಟಿನಲ್ಲಿ ಜೆಎಸ್‌ಎಸ್ ಸಂಸ್ಥೆಯು ನಾಲ್ಕು ವಿಶ್ವವಿದ್ಯಾನಿಲಯ ಗಳನ್ನು ತೆರೆದು, ಹಲವಾರು ಶಾಲಾ ಕಾಲೇಜುಗಳನ್ನು ತೆರೆದು ಯುವಕರಿಗೆ ತಕ್ಕ ತರಬೇತಿ ಮತ್ತು ಉತ್ತೇಜನ ನೀಡಿ ಅವರ ಭವಿಷ್ಯವನ್ನು ರೂಪಿಸಿಕೊಳ್ಳಲು ದಾರಿಯನ್ನು ತೋರುತ್ತಿದೆ ಎಂದು ಹೇಳಿದರು.

ತಲಕಾಡು ಶ್ರೀ ಹಸ್ತಿಕೇರಿಮಠದ ಡಾ. ಶ್ರೀ ಸಿದ್ಧಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳವರ 'ಚೇಳಿನ ವಿಷ ಚಿಕಿತ್ಸೆ' ಕೃತಿಯನ್ನು ಬಿಡುಗಡೆಗೊಳಿಸಲಾಯಿತು. ಪಾಂಡೋಮಟ್ಟಿ ಶ್ರೀ ವಿರಕ್ತಮಠದ ಶ್ರೀ ಗುರುಬಸವ ಸ್ವಾಮಿಗಳು, ಶ್ರೀ ಸಾಲೂರು ಮಠದ ಡಾ. ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು, ನಳಂದ ಶಿಕ್ಷಣ ಸಂಸ್ಥೆ ಅಧ್ಯಕ್ಷರಾದ ಶ್ರೀ ಎಸ್‌ಎಲ್‌ಎನ್ ಸಾತಪ್ಪನ್, ಬೆಂಗಳೂರು ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷರಾದ ಶ್ರೀ ಜಿ. ಮರಿಸ್ವಾಮಿ, ಮೂಡಾ ಮಾಜಿ ಅಧ್ಯಕ್ಷರಾದ ಶ್ರೀ ಹೆಚ್.ವಿ. ರಾಜೀವ್,

ಕುಲಪತಿಗಳಾದ ಪ್ರೊ. ಶರಣಪ್ಪ ವಿ. ಹಲಸೆಯವರುಗಳು ಮಾತನಾಡಿದರು. ಮಾಜಿ ಸಚಿವರು ಹಾಗೂ ಶಾಸಕರಾದ ಶ್ರೀ ಎಸ್.ಟಿ. ಸೋಮಶೇಖರ್, ಮಾಜಿ ಶಾಸಕರಾದ ಶ್ರೀ ತೋಂಟದಾರ್ಯ, ಮಾಜಿ ಮೇಯರ್ ಶ್ರೀಮತಿ ಪುಷ್ಪಲತ ಜಗನ್ನಾಥ್, ಅರಮನೆ ಮಂಡಳಿ ಅಧ್ಯಕ್ಷರಾದ ಶ್ರೀ ಟಿ.ಡಿ. ಸುಬ್ರಹ್ಮಣ್ಯ, ಶ್ರೀ ಸಂಜಯ್ ಪಾಟೀಲ್ ಉಪಸ್ಥಿತರಿದ್ದರು. ಶ್ರೀ ಸಿದ್ಧಮಲ್ಲಿಕಾರ್ಜುನಸ್ವಾಮಿ ಸ್ವಾಗತಿಸಿದರು. ಶ್ರೀ ಮಾಲಂಗಿ ಸುರೇಶ್ ವಂದಿಸಿದರು. ಶ್ರೀ ಹೆಚ್.ಎಂ. ದಯಾನಂದಸ್ವಾಮಿ, ಶ್ರೀ ಎಸ್. ಬಸವರಾಜು, ಶ್ರೀ ಜಿ. ಮಹದೇವಸ್ವಾಮಿ ಯವರು ಸಾಂಸ್ಕೃತಿಕ ಮೇಳ ಹಾಗೂ ವಸ್ತುಪ್ರದರ್ಶಣದ ವರದಿ ಮಂಡಿಸಿದರು. ಡಾ. ರೇಚಣ್ಣ ಕಾರ್ಯಕ್ರಮ ನಿರೂಪಿಸಿದರು.

**ಜ್ಞಾನದಿಂದ ಲೋಕ ಗೌರವ**

ಜ್ಞಾನ ಸಂಪಾದನೆ ಮಾಡಿದ ವ್ಯಕ್ತಿ ಲೋಕದ ಗೌರವಕ್ಕೆ ಪಾತ್ರನಾಗುತ್ತಾನೆ ಎಂದು ಪರಮಪೂಜ್ಯ ಜಗದ್ಗುರುಗಳವರು ಜನವರಿ 25ರಂದು ಗುಂಡ್ಲುಪೇಟೆ ತಾಲ್ಲೂಕು ದೊಡ್ಡತುಪ್ಪೂರಿನಲ್ಲಿ ಜ್ಞಾನಸಂಗಮ ಪ್ರತಿಷ್ಠಾನದಿಂದ ನೂತನವಾಗಿ ನಿರ್ಮಿಸಿರುವ ರೇಡಿಯಂಟ್ ಶಾಲೆ, ಪದವಿಪೂರ್ವ ಕಾಲೇಜು ಮತ್ತು ರೇಡಿಯಂಟ್ ಅಕಾಡೆಮಿ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಮನುಷ್ಯನಿಗೆ ಜ್ಞಾನ ಎಂಬುದು ಅವಶ್ಯ. ಓದುವುದು, ಕಲಿಯುವುದು ಮಾತ್ರ ಮುಖ್ಯವಲ್ಲ. ಅದರ ಸಾರವನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಜ್ಞಾನದ ಸಂಪತ್ತನ್ನು ಒಲಿಸಿಕೊಳ್ಳಲು ಸಾಧ್ಯ ಎಂದರು. ರೇಡಿಯಂಟ್ ಸಂಸ್ಥೆ ಜ್ಞಾನ ಸಂಗಮ ಪ್ರತಿಷ್ಠಾನ ಎಂಬ ಉತ್ತಮವಾದ ಹೆಸರು ಹೊಂದಿದೆ. ರೇಡಿಯಂಟ್ ಸ್ಕೂಲ್, ಪಿಯು ಕಾಲೇಜು, ರೇಡಿಯಂಟ್ ಅಕಾಡೆಮಿ ಈ ಮೂರು ಸಂಸ್ಥೆಗಳನ್ನು ವಿದ್ಯಾರ್ಥಿಗಳಿಗೆ ಬೇಕಾದ ಎಲ್ಲವನ್ನೂ ಒದಗಿಸುವ ಉದ್ದೇಶದಿಂದ ಪ್ರಾರಂಭಿಸಿದ್ದಾರೆ. ಮನುಷ್ಯ ಜ್ಞಾನ, ಅಧಿಕಾರ, ಹಣ ಸಂಪಾದನೆ ಮಾಡಬಹುದು. ಅದರ ಜೊತೆಗೆ ಸಂಸ್ಕೃತಿ ಸಂಸ್ಕಾರಗಳನ್ನೂ ಮೈಗೂಡಿಸಿಕೊಂಡು ಬದುಕನ್ನು ವಿಕಾಸಗೊಳಿಸಿ ಕೊಳ್ಳಬೇಕು ಎಂದರು.

ಶ್ರೀ ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳು ಶಿವಕುಮಾರ ಶ್ರೀಗಳ ಸ್ಮರಣೆಯಲ್ಲಿ ಅವರ ಪುತ್ಥಳಿಯನ್ನು ಅನಾವರಣ ಮಾಡಿ ಶಿಕ್ಷಣ ಸಂಸ್ಥೆ ಆರಂಭಿಸಿರುವುದು ಸಂತಸದ ವಿಷಯ. ಸುತ್ತೂರು ಶ್ರೀಕ್ಷೇತ್ರ ಹಾಗೂ ಸಿದ್ದಗಂಗಾ ಶ್ರೀಕ್ಷೇತ್ರಗಳು ಶಿಕ್ಷಣಕ್ಕೆ ಅವುಗಳದೇ ಆದ ಕೊಡುಗೆ ನೀಡಿವೆ ಎಂದರು.

ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ಬಿ.ಎಲ್. ಸಂತೋಷ್ ರವರು ಜ್ಞಾನಸಂಗಮ ಪ್ರತಿಷ್ಠಾನ ಸ್ಥಾಪಕರಾದ ನಿಜಗುಣರಾಜು ಅವರು ಉದ್ಯಮ, ಶಿಕ್ಷಣ ಕ್ಷೇತ್ರದಲ್ಲಿ ಹೆಸರು ಮಾಡಿದ್ದಾರೆ. ಶಾಲೆ ಉಳಿದುಕೊಳ್ಳುವುದು ಕೇವಲ ಮಾಲೀಕರಿಂದ ಅಲ್ಲ, ಶಿಕ್ಷಕರಿಂದ ಹಾಗೂ ಸಂಸ್ಥೆಯ ಕಾರ್ಯನಿರ್ವಹಣೆಯಿಂದ ಮಾತ್ರ ಸಾಧ್ಯ. ಶಿಕ್ಷಕರು

ವಿದ್ಯಾರ್ಥಿಗಳ ಜೀವನದ ಮೇಲೆ ಬಹಳ ಪರಿಣಾಮ ಬೀರುತ್ತಾರೆ ಎಂಬುದಕ್ಕೆ ಇದೇ ಉದಾಹರಣೆ ಎಂದರು.

ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಡಿ.ವಿ. ಸದಾನಂದಗೌಡರವರು ಗ್ರಾಮೀಣ ಭಾಗದ ರೈತರ ಮಕ್ಕಳಿಗೆ ಅನ್ನ, ಅಕ್ಷರ, ಆರೋಗ್ಯ ಸೌಕರ್ಯಗಳು ಕೈಗೆಟುಕುವ ದರದಲ್ಲಿ ಸಿಕ್ಕಾಗ ಮಾತ್ರ ಅಭಿವೃದ್ಧಿ ಸಾಧ್ಯ. ಈಗ ಡೊನೇಷನ್ ಪಡೆಯುವುದರಲ್ಲೂ ಕಾಂಪಿಟೇಷನ್ ಹೆಚ್ಚಾಗಿದೆ. ಹೆಚ್ಚು ಡೊನೇಷನ್ ಪಡೆದುಕೊಂಡರೆ ದೊಡ್ಡ ಶಾಲೆ ಎಂಬಂತೆ ಬಿಂಬಿಸಿ ಕೊಳ್ಳುತ್ತಾರೆ. ಆದರೆ ಸಿದ್ಧಗಂಗಾ ಮತ್ತು ಸುತ್ತೂರು ಶ್ರೀಮಠಗಳು ಎಷ್ಟೋ ವರ್ಷಗಳಿಂದ ಶಿಕ್ಷಣದ ಜೊತೆಗೆ ದಾಸೋಹವನ್ನು ಉಚಿತವಾಗಿ ನೀಡುತ್ತಿವೆ ಎಂದರು.

ಕನಕಗಿರಿಯ ಶ್ರೀ ಭುವನಕೀರ್ತಿ ಭಟ್ಟಾರಕ ಸ್ವಾಮಿಗಳು, ಶಾಸಕರಾದ ಶ್ರೀ ಎಚ್.ಕೆ. ಸುರೇಶ್, ಶ್ರೀ ಎಚ್.ಎಂ. ಗಣೇಶ್‌ಪ್ರಸಾದ್, ಶ್ರೀ ಟಿ.ಎಸ್. ಶ್ರೀವತ್ಸ, ಮಾಜಿ ಶಾಸಕರಾದ ಶ್ರೀ ಸಿ.ಎಸ್. ನಿರಂಜನ್‌ಕುಮಾರ್, ಶ್ರೀ ಎನ್. ಮಹೇಶ್, ಶ್ರೀ ಬೆಳ್ಳಿ ಪ್ರಕಾಶ್, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್, ರೇಡಿಯಂಟ್ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಜಿ. ನಿಜಗುಣರಾಜು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀಮತಿ ಸಂಗೀತಾ ಕಟ್ಟಿ ಪ್ರಾರ್ಥಿಸಿದರು. ಶ್ರೀಮತಿ ಗೀತಾ ಬಸವರಾಜು ವಂದಿಸಿದರು.

**ದೇಶ ಸಂಪದ್ಭರಿತವಾಗಲು ಧಾರ್ಮಿಕ ನಂಬಿಕೆ ಕಾರಣ**

ಆಧ್ಯಾತ್ಮಿಕ ಹಾಗೂ ಧಾರ್ಮಿಕ ನಂಬಿಕೆಯೇ ದೇಶ ಸಂಪದ್ಭರಿತವಾಗಿರಲು ಕಾರಣ ಎಂದು ಪರಮಪೂಜ್ಯ ಜಗದ್ಗುರುಗಳವರು ಜನವರಿ 30ರಂದು ಗುಂಡ್ಲುಪೇಟೆ ತಾಲ್ಲೂಕು ಬಿ. ಶೆಟ್ಟಿಹಳ್ಳಿಯಲ್ಲಿ ಶ್ರೀ ವೀರಭದ್ರೇಶ್ವರಸ್ವಾಮಿ ಮತ್ತು ಶ್ರೀ ವಿಘ್ನೇಶ್ವರಸ್ವಾಮಿ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣದ ದಿವ್ಯ ಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಭಾರತೀಯ ಸಂಸ್ಕೃತಿ ಇಡೀ ಜಗತ್ತಿಗೆ ಒಳಿತನ್ನು ಬಯಸುತ್ತದೆ. ದಯವೇ ಧರ್ಮದ ಮೂಲವಯ್ಯ ಎಂಬ ಬಸವಣ್ಣನವರ ಮಾತಿನಂತೆ ಸಕಲ ಜೀವ ರಾಶಿಗಳಿಗೂ ಭಗವಂತ ಜೀವದಾಯಕನಾಗಿದ್ದಾನೆ. ಭಗವಂತನ ದಯೆ ಇಲ್ಲದೆ ಯಾವುದು ಶಾಶ್ವತವಲ್ಲ. ಹಾಗಾಗಿ ಧಾರ್ಮಿಕ ಭಾವನೆಗಳಿಗೆ ಹೆಚ್ಚು ಒತ್ತು ನೀಡಬೇಕು ಎಂದು ಹೇಳಿದರು..

ಪಡಗೂರು, ಸೋಮಹಳ್ಳಿ, ಮಾದಾಪಟ್ಟಣ, ಚಿಕ್ಕತುಪ್ಪೂರು, ಹಂಗಳ, ಬೊಮ್ಮನಹಳ್ಳಿ, ಮೂಡುಗೂರು, ಕಬ್ಬಹಳ್ಳಿ, ಗೋಪಾಲಪುರ, ಉಗನೇದಹುಂಡಿ, ನಂಜೇದೇವನಪುರ, ಉಡಿಗಾಲ ಮಠಗಳ ಶ್ರೀಗಳು, ಶಾಸಕರಾದ ಶ್ರೀ ಎಚ್.ಎಂ. ಗಣೇಶ್‌ಪ್ರಸಾದ್, ಮಾಜಿ ಶಾಸಕರಾದ ಶ್ರೀ ಸಿ.ಎಸ್. ನಿರಂಜನ್‌ಕುಮಾರ್, ಶ್ರೀ ಎಚ್.ಎಸ್. ನಂಜುಂಡಪ್ರಸಾದ್, ಶ್ರೀ ಕೆ.ಎಸ್. ಮಹೇಶ್, ಶ್ರೀ ಹೆಚ್.ಎಸ್. ನಂಜಪ್ಪ ಮೊದಲಾದವರು ಉಪಸ್ಥಿತರಿದ್ದರು.

□

# ಪ್ರಸಾದ



## ಕೃತಿ–ಸ್ವೀಕೃತಿ

**ವ್ಯಕ್ತಿತ್ವ ದರ್ಶನ (ಅಭಿನಂದನಾ ಗ್ರಂಥ)**
ಪ್ರೊ. ಶಂಕರಗೌಡ ಮ. ಬಿರಾದಾರ
ಪ್ರ: ಪ್ರಭುಲಿಂಗ ಕಿರಿತೇಶ್ವರ ಗ್ರಂಥಮಾಲೆ
ದೊಡ್ಡಮರಳವಾಡಿ, ಕನಕಪುರ ತಾ.
ರಾಮನಗರ ಜಿಲ್ಲೆ
ಪು : 344, ಬೆಲೆ : 350/–

**ತೌಲನಿಕ ಲಲಿತಕಲೆಗಳು**
ಡಾ. ಡಿ.ಎ. ಉಪಾಧ್ಯ
ಪ್ರ: ಮಾತಾಜಿ ಪ್ರಕಾಶನ
ಉತ್ತರಾದಿ ಮಠದ ರಸ್ತೆ, ಮೈಸೂರು
ಪು : 700, ಬೆಲೆ : 840/–

**ಅನ್ವೇಷಣ**
ಶ್ರೀ ವಿ.ಆರ್. ಅನಿಲ್‌ಕುಮಾರ್
ಪ್ರ: ಕಲ್ಪ ಪಬ್ಲಿಕೇಷನ್
ವಿಜಯನಗರ, ಮೈಸೂರು
ಪು : 260, ಬೆಲೆ : 280/–

**ಶ್ರೀ ವೃಷಭೇಶ್ವರ ಪುರಾಣಂ**
ಡಾ. ಎಸ್.ಆರ್. ವಿಘ್ನರಾಜ ಮತ್ತು
ಡಾ. ಪವನ್
ಪ್ರ: ಡಾ. ಡಿ. ವೀರೇಂದ್ರ ಹೆಗ್ಗಡೆಯವರು
ಶ್ರೀ ಮಂಜುನಾಥೇಶ್ವರ ಸಂಸ್ಕೃತಿ
ಸಂಶೋಧನ ಪ್ರತಿಷ್ಠಾನ
ಧರ್ಮಸ್ಥಳ, ದಕ್ಷಿಣ ಕನ್ನಡ
ಪು : 1012, ಬೆಲೆ : 1400/–

**ನೋಟಿನ ನಂಟು**
ಶ್ರೀ ರಘುಪತಿ ತಾಮ್ಹನ್‌ಕರ್
ಪ್ರ: ಕವಿತಾ ಪ್ರಕಾಶನ
ಸೃಷ್ಟಿ ಅನಮೋಲ್ ಅಪಾರ್ಟ್‌ಮೆಂಟ್
ಚಾಮರಾಜಪುರಂ, ಮೈಸೂರು
ಪು : 136, ಬೆಲೆ : 150/–

**ಚಿಕ್ಕಕೊಪ್ಪಲು (ಸಾಂಸ್ಕೃತಿಕ ಸಂಕಥನ)**
ಡಾ. ಸಿ.ಡಿ. ಪರಶುರಾಮ
ಪ್ರ: ವಿಜಯಲಕ್ಷ್ಮಿ ಪ್ರಕಾಶನ
ಕುವೆಂಪುನಗರ, ಮೈಸೂರು
ಪು : 416, ಬೆಲೆ : 450/–

**ಶಿವಸಿರಿ (ಶ್ರೀ ಗುರುಷಟ್ಪದಿ ಮಹಾಕಾವ್ಯ)**
ಡಾ. ಪ್ರದೀಪ ಕುಮಾರ ಹೆಬ್ರಿ
ಪ್ರ: ಸಾಹಿತ್ಯ ಸಿರಿ
ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ
ಸಿರಿಗೆರೆ, ಚಿತ್ರದುರ್ಗ ಜಿಲ್ಲೆ
ಪು : 576, ಬೆಲೆ : 500/–

**ಕೆಎಎಸ್ ಅಧಿಕಾರಿಯ ಆತ್ಮಕಥೆ**
**ದೇವರ ಗೆಣ್ಣೂರು**
ಸೋಮಲಿಂಗ ಗೆಣ್ಣೂರ
ಪ್ರ: ಕವಿತ ಪ್ರಕಾಶನ
ಚಾಮರಾಜಪುರಂ, ಮೈಸೂರು
ಪು : 100, ಬೆಲೆ : 120/–

**ಬಡವರ ಬಂಧು**
ಡಾ. ಸಿ.ಡಿ. ಪರಶುರಾಮ
ಪ್ರ: ವಿಜಯಲಕ್ಷ್ಮಿ ಪ್ರಕಾಶನ
ಕುವೆಂಪುನಗರ, ಮೈಸೂರು
ಪು : 380, ಬೆಲೆ : 415/–

**ಡಿವಿಜಿ ದೊ. ಲೆಟರ್ಸ್**
ಶ್ರೀ ಎಸ್.ಆರ್. ರಾಮಸ್ವಾಮಿ
ಶ್ರೀ ಬಿ.ಎನ್. ಶಶಿಕಿರಣ್
ಪ್ರ: ಗೋಕಲೆ ಇನ್‌ಸ್ಟಿಟ್ಯೂಟ್ ಆಫ್
ಪಬ್ಲಿಕ್ ಅಫೈರ್ಸ್
ಎನ್.ಆರ್. ಕಾಲೋನಿ
ಬೆಂಗಳೂರು
ಪು : 376, ಬೆಲೆ : 500/–

**ಮೀಡಿಯ ಅಂಡ್ ಜೆ.ಎಚ್. ಪಟೇಲ್**
ಡಾ. ಎಂ.ಎಲ್. ಶಂಕರಲಿಂಗಪ್ಪ
ಪ್ರ: ಜೆ.ಎಚ್. ಪಟೇಲ್ ಪ್ರತಿಷ್ಠಾನ
ಅಮ್ಮ ಡಾಲರ್ಸ್ ಕಾಲೋನಿ
ನಾಗಶೆಟ್ಟಿಹಳ್ಳಿ
ಬೆಂಗಳೂರು
ಪು : 308, ಬೆಲೆ : 350/–

## ಲೇಖಕರ ವಿಳಾಸ

**ಡಾ. ಪಿ. ಮಣಿ**
ಸಹ ಪ್ರಾಧ್ಯಾಪಕರು
ಕನ್ನಡ ಅಧ್ಯಯನ ಮತ್ತು ಸಂಶೋಧನ ವಿಭಾಗ
ಕರಾಮುವಿ, ಮುಕ್ತಗಂಗೋತ್ರಿ
ಮೈಸೂರು 570 006
ಮೊ: 44801 70799

**ಡಾ. ವೈ. ಸುಶ್ಮಿತಾ**
ಸುಳುಗೋಡು, ನಗರ ಅಂಚೆ
ಹೊಸನಗರ ತಾಲೂಕು
ಶಿವಮೊಗ್ಗ ಜಿಲ್ಲೆ 577 425
ಮೊ: 99026 83715


**ಡಾ. ಪ್ರದೀಪಕುಮಾರ ಹೆಬ್ರಿ**
287 'ದೃಶ್ಯ'
ಹಾಲಹಳ್ಳಿ ಮುಖ್ಯ ರಸ್ತೆ
ಹಾಲಹಳ್ಳಿ
ಮಂಡ್ಯ 571 401
ಮೊ: 98440 18457

**ಹಿಂಬದಿ ಪುಟದ ಚಿತ್ರ**

ಜಾತ್ರಾ ಮಹೋತ್ಸವದ ಅಂಗವಾಗಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ ಸಾಮೂಹಿಕ ವಿವಾಹದಲ್ಲಿ 134 ಜೋಡಿ ವಧುವರರು ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಶ್ರೀ ಅಸಗೋಡು ಜಯಸಿಂಹ, ಶ್ರೀಮತಿ ವಿ. ಸುನಂದ ಅಲ್ಲಂ, ಶ್ರೀ ಅಲ್ಲಂ ವೀರಭದ್ರಪ್ಪ, ಶ್ರೀ ಹಂಪನಗೌಡ ಬಾದರ್ಲಿ, ಶ್ರೀ ಆರ್.ವಿ. ದೇಶಪಾಂಡೆ, ರೆ.ಫಾ. ಡಾ. ಗೇಬ್ರಿಯಲ್ ಮಾರ್ ಗ್ರೆಗೋರಿಯಸ್, ಕನಕಪುರ ಹಿರಿಯ ಶ್ರೀಗಳು, ಪಡುಗೂರು ಶ್ರೀಗಳು, ಶ್ರೀ ಎಂ. ವಿವೇಕ್, ಹರವೆ ಮತ್ತು ಮಾದಹಳ್ಳಿ ಶ್ರೀಗಳು, ಮೊದಲಾದವರಿದ್ದಾರೆ (16 ಜನವರಿ 2026)




ಪಾಂಡವಪುರದಲ್ಲಿ ಶ್ರೀ ಚಂದ್ರಶೇಖರಯ್ಯನವರನ್ನು ಪರಮಪೂಜ್ಯ ಜಗದ್ಗುರುಗಳವರು ಮತ್ತು ವಿಶ್ವ ಒಕ್ಕಲಿಗರ ಮಠದ ಶ್ರೀಗಳ ದಿವ್ಯ ಸಾನ್ನಿಧ್ಯದಲ್ಲಿ ಸನ್ಮಾನಿಸಿ ಅಭಿನಂದಿಸಲಾಯಿತು. ಶ್ರೀ ಲಂಡನ್ ಮಹದೇವಯ್ಯ, ಪ್ರೊ. ಬಿ. ನಾರಾಯಣಗೌಡ, ಶ್ರೀ ಸಿ.ಎಸ್. ಪುಟ್ಟರಾಜು, ಡಾ. ಜಯಪ್ರಕಾಶ್‌ಗೌಡ, ಪ್ರೊ. ಎಂ. ಕೃಷ್ಣೇಗೌಡ, ಶ್ರೀ ವೆಂಕಟೇಶ್, ಶ್ರೀ ಪ್ರಕಾಶ್ ಮೇನಾಗರ ಮತ್ತು ಶ್ರೀ ಧನಂಜಯರವರುಗಳಿದ್ದಾರೆ (7 ಜನವರಿ 2026)




ಬೆಂಗಳೂರಿನಲ್ಲಿ ಮೌಂಟ್‌ಅಬುವಿನ ಪ್ರಜಾಪಿತ ಬ್ರಹ್ಮಕುಮಾರಿ ವಿಶ್ವವಿದ್ಯಾಲಯದ ರಾಜಯೋಗಿ ಡಾ. ಬಿ.ಕೆ. ಮೃತ್ಯುಂಜಯರವರ 78ನೇ ವರ್ಷದ ಹುಟ್ಟುಹಬ್ಬದ ಪರಮಪೂಜ್ಯ ಜಗದ್ಗುರುಗಳವರು ಸನ್ಮಾನಿಸಿ ಅಭಿನಂದಿಸಿದರು. (8 ಜನವರಿ 2026)



ದುಗ್ಗಹಟ್ಟಿಯಲ್ಲಿ ಶ್ರೀ ಪಿ. ವೀರಭದ್ರಪ್ಪನವರ ನುಡಿನಮನ ಕಾರ್ಯಕ್ರಮವು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು. ಸೋಮಹಳ್ಳಿ, ಶ್ರೀ ಸಿದ್ಧಗಂಗಾ ಮಠ, ಕನಕಪುರ, ಸಾಲೂರು ಮಠಗಳ ಶ್ರೀಗಳು ಹಾಗೂ ಶ್ರೀ ಚಟ್ನಳ್ಳಿ ಮಹೇಶ್‌ರವರುಗಳಿದ್ದಾರೆ (9 ಜನವರಿ 2026)



ಬಿ. ಶೆಟ್ಟಹಳ್ಳಿಯಲ್ಲಿ ಶ್ರೀ ವೀರಭದ್ರೇಶ್ವರಸ್ವಾಮಿ ಮತ್ತು ಶ್ರೀ ವಿಘ್ನೇಶ್ವರಸ್ವಾಮಿ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣದ ಅಂಗವಾಗಿ ಏರ್ಪಡಿಸಿದ್ದ ಧಾರ್ಮಿಕ ಸಭೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಸಿ.ಎಸ್. ನಿರಂಜನ್‌ಕುಮಾರ್, ಸೋಮಹಳ್ಳಿ ಮತ್ತು ಪಡುಗೂರು ಶ್ರೀಗಳು, ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ಮಾದಾಪಟ್ಟಣದ ಶ್ರೀಗಳು, ಶ್ರೀ ಹೆಚ್.ಎಸ್. ನಂಜುಂಡಪ್ರಸಾದ್ ಹಾಗೂ ಶ್ರೀ ಕಬ್ಬಹಳ್ಳಿ ಮಹೇಶ್‌ರವರುಗಳಿದ್ದಾರೆ (24 ಜನವರಿ 2026)



ಜಾತ್ರಾ ಮಹೋತ್ಸವದಲ್ಲಿ ವಸ್ತುಪ್ರದರ್ಶನವು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟನೆಯಾಯಿತು. ಉಪ್ಪಿನಬೆಟಗೇರಿ ಹಾಗೂ ಅಥಣಿ ಗಚ್ಚಿನಮಠದ ಶ್ರೀಗಳು, ಶ್ರೀ ಹೆಚ್.ಡಿ. ತಮ್ಮಯ್ಯ, ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶ್ರೀ ಜಗದೀಶ್ ಎಸ್. ಶೆಟ್ಟರ್, ಶ್ರೀಮತಿ ಶಿಲ್ಪಾ ಜಗದೀಶ್ ಶೆಟ್ಟರ್, ಶ್ರೀ ಎ. ಬಣ್ಣಾರಿರವರುಗಳಿದ್ದಾರೆ (15 ಜನವರಿ 2026)



ಜಾತ್ರಾ ಮಹೋತ್ಸವದಲ್ಲಿ ಕೃಷಿಮೇಳವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀಮತಿ ಶಿಲ್ಪಾ ಜಗದೀಶ್ ಶೆಟ್ಟರ್, ಶ್ರೀ ಜಗದೀಶ್ ಎಸ್. ಶೆಟ್ಟರ್, ಡಾ. ಬಿ.ಎನ್. ಜ್ಞಾನೇಶ್, ಶ್ರೀ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶ್ರೀ ಎಸ್. ಉಕೇಶ್‌ಕುಮಾರ್ ಮೊದಲಾದವರಿದ್ದಾರೆ (15 ಜನವರಿ 2026)




ಜಾತ್ರಾ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ವೆಂಕಟೇಶ್ವರ್ ರಾವ್, ಶ್ರೀ ರಾಜಣ್ಣ ಹೆಗ್ಗಡಳ್ಳಿ, ಶ್ರೀಮತಿ ವಿ. ಸುನಂದ ಅಲ್ಲಂ, ಶ್ರೀ ಅಲ್ಲಂ ವೀರಭದ್ರಪ್ಪ, ರೆ.ಫಾ. ಫ್ರಾನ್ಸಿಸ್ ಸೆರಾವ್ ಎಸ್.ಜೆ., ರೆ.ಫಾ. ಡಾ. ಗೇಬ್ರಿಯಲ್ ಮಾರ್ ಗ್ರೆಗೋರಿಯಸ್, ಪಡುಗೂರು ಶ್ರೀಗಳು, ಶ್ರೀ ರಾಮಲಿಂಗಾರೆಡ್ಡಿ, ಶ್ರೀ ಮಲ್ಲಿಕಾರ್ಜುನ್, ಮೊದಲಾದವರಿದ್ದಾರೆ (16 ಜನವರಿ 2026)




ಜಾತ್ರಾ ಮಹೋತ್ಸವದಲ್ಲಿ ದೇಸಿ ಆಟಗಳ ಸ್ಪರ್ಧೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಕು. ಶೋಭಾ ಕರಂದ್ಲಾಜೆಯವರು ಉದ್ಘಾಟಿಸಿದರು. ಡಾ. ಗಿರಿಧರ್ ಪರ್ವತಂ, ಶ್ರೀ ಆರ್. ಗಣೇಶ್, ಶ್ರೀ ಸೋದೆ ಮಠದ ಶ್ರೀಪಾದಂಗಳು ಹಾಗೂ ಶ್ರೀ ತೇಜಸ್ವಿ ಸೂರ್ಯರವರುಗಳಿದ್ದಾರೆ. (16 ಜನವರಿ 2026)




ಜಾತ್ರಾ ಮಹೋತ್ಸವದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ರಾಜ್ಯಮಟ್ಟದ ಭಜನಾಮೇಳ, ದೇಸಿ ಆಟಗಳು, ಸೋಬಾನೆಪದ ಹಾಗೂ ರಂಗೋಲಿ ಸ್ಪರ್ಧೆಗಳ ಉದ್ಘಾಟನೆ ಕಾರ್ಯಕ್ರಮದಲ್ಲಿ ಸಿದ್ಧಗಂಗಾ ಮಠದ ಶ್ರೀಗಳು ಆಶೀರ್ವದಿಸುತ್ತಿರುವುದು. ಶ್ರೀ ಪ್ರಭುದೇವ್, ಶ್ರೀ ಪಿ. ಮರಿಸ್ವಾಮಿ, ಕನಕಪುರ ಕಿರಿಯ ಶ್ರೀಗಳು, ಶ್ರೀ ಸೋದೆ ಮಠದ ಶ್ರೀಪಾದಂಗಳು, ಡಾ. ಕುಮಾರ, ಶ್ರೀ ಕೆ.ಬಿ. ಲಿಂಗರಾಜು ಹಾಗೂ ಶ್ರೀ ಹೆಚ್.ಎಸ್. ರಾಘವೇಂದ್ರರವರುಗಳಿದ್ದಾರೆ (16 ಜನವರಿ 2026)




ಜಾತ್ರಾ ಮಹೋತ್ಸವದಲ್ಲಿ ಧಾರ್ಮಿಕ ಸಭೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಕೆ.ಹೆಚ್. ಮುನಿಯಪ್ಪನವರು ಉದ್ಘಾಟಿಸಿದರು. ಶ್ರೀ ಸಾಲಿ ಸಿದ್ಧಯ್ಯಸ್ವಾಮಿ, ಶ್ರೀ ರಾಜಣ್ಣ ಕೊರವಿ, ಶ್ರೀ ಶಿವ ಆನಂದ್, ಶ್ರೀ ಕುಮಾರ್ ರಾಜಶೇಖರ್, ಸಿದ್ಧಗಂಗಾ ಮಠದ ಕಿರಿಯ ಶ್ರೀಗಳು, ಶ್ರೀ ಜಿ.ಟಿ. ದೇವೇಗೌಡ, ಶ್ರೀ ನಿತೇಶ್ ಪಾಟೀಲ್, ಡಾ. ಸಿ. ಸೋಮಶೇಖರ್, ಶ್ರೀ ರಾಚಪ್ಪ ಹೋಳುರು ಹಾಗೂ ಶ್ರೀ ಶಂಕರ ಪಿಳ್ಳೈರವರುಗಳಿದ್ದಾರೆ (17 ಜನವರಿ 2026)




ಜಾತ್ರಾ ಮಹೋತ್ಸವದ ಅಂಗವಾಗಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಕೃಷಿ ವಿಚಾರಸಂಕಿರಣ ಉದ್ಘಾಟನೆಯಲ್ಲಿ ಸಚಿವರಾದ ಡಾ. ಎಂ.ಸಿ. ಸುಧಾಕರ್‌ರವರು ಮಾತನಾಡುತ್ತಿರುವುದು. ಶ್ರೀ ಪಿ. ಮರಿಸ್ವಾಮಿ, ಶ್ರೀ ಹೆಚ್.ಎಂ. ಗಣೇಶ್‌ಪ್ರಸಾದ್, ಶ್ರೀ ಯಶವಂತರಾಯಗೌಡ ಪಾಟೀಲ್, ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್, ವಾಟಾಳು ಮತ್ತು ಕನಕಪುರ ಕಿರಿಯ ಶ್ರೀಗಳು, ಡಾ. ಶರಣ್‌ಪ್ರಕಾಶ್ ಆರ್. ಪಾಟೀಲ್, ಡಾ. ಪುಷ್ಪಾ ಅಮರನಾಥ್ ಹಾಗೂ ಶ್ರೀ ಎಂ.ಕೆ. ಸೋಮಶೇಖರ್‌ರವರಿದ್ದಾರೆ (18 ಜನವರಿ 2026)



ಜಾತ್ರಾ ಮಹೋತ್ಸವದಲ್ಲಿ ಕೆಸರುಗದ್ದೆ ಓಟದ ಸ್ಪರ್ಧೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಪಿ.ಎಂ. ನರೇಂದ್ರಸ್ವಾಮಿಯವರು ಉದ್ಘಾಟಿಸಿದರು. ರಬಕವಿ ಶ್ರೀಗಳು, ಶ್ರೀ ಸಿ.ಕೆ. ರಾಮಮೂರ್ತಿ ಮೊದಲಾದವರಿದ್ದಾರೆ (17 ಜನವರಿ 2026)





ಜಾತ್ರಾ ಮಹೋತ್ಸವದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಭಜನಾಮೇಳ ಸಮಾರೋಪದಲ್ಲಿ ಸಿಂದಗಿಯ ಡಾ. ಶ್ರೀ ಪ್ರಭುಸಾರಂಗದೇವ ಶಿವಾಚಾರ್ಯ ಸ್ವಾಮಿಗಳು ಮಾತನಾಡುತ್ತಿರುವುದು. ಶ್ರೀ ಕೆ. ಉಮಾಶಂಕರ್, ಶ್ರೀ ಕೆ. ಈರೇಗೌಡ, ಶ್ರೀ ಜಿ.ಡಿ. ಹರೀಶ್‌ಗೌಡ, ಶ್ರೀ ಸಿ.ಎಸ್. ಪುಟ್ಟರಾಜು, ಡಾ. ಕೆ. ಅನ್ನದಾನಿ, ಶ್ರೀ ಕೆ. ವಿವೇಕಾನಂದ ಮೊದಲಾದವರಿದ್ದಾರೆ (19 ಜನವರಿ 2026)




ಜಾತ್ರಾ ಮಹೋತ್ಸವದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಭಜನಾಮೇಳ ಸಮಾರೋಪದಲ್ಲಿ ಶ್ರೀ ಅವಧೂತ ದತ್ತ ಪೀಠದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮಿಗಳು ಮಾತನಾಡುತ್ತಿರುವುದು. ಶ್ರೀ ಜನಾರ್ಧನ, ಶ್ರೀ ಸುರೇಶಬಾಬು, ಹೂವಿನಹಡಗಲಿ, ಸಿಂದಗಿ ಮತ್ತು ಕನಕಪುರ ಶ್ರೀಗಳಿದ್ದಾರೆ (19 ಜನವರಿ 2026)




ಜಾತ್ರಾ ಮಹೋತ್ಸವದ ಅಂಗವಾಗಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ ಕೃಷಿಮೇಳ ಮತ್ತು ದನಗಳ ಜಾತ್ರೆ ಸಮಾರೋಪದಲ್ಲಿ ಸಚಿವರಾದ ಶ್ರೀ ದಿನೇಶ್ ಗುಂಡೂರಾವ್‌ರವರು ಮಾತನಾಡುತ್ತಿರುವುದು. ಶ್ರೀ ವೇಲುಸ್ವಾಮಿ, ಶ್ರೀ ಶರವಣ್, ಶ್ರೀಮತಿ ಲತಾ ಮಲ್ಲಿಕಾರ್ಜುನ್, ಬರಗೂರು ಶ್ರೀಗಳು, ಶ್ರೀ ಸಿ.ಎಸ್. ನಿರಂಜನಕುಮಾರ್, ಶ್ರೀ ಹೆಚ್.ವಿ. ರಾಜೀವ್, ಶ್ರೀ ಸುರೇಶ್, ಶ್ರೀ ಹೆಚ್.ಎ. ವೆಂಕಟೇಶ್, ಶ್ರೀಮತಿ ಕೆ.ಆರ್. ನಂದಿನಿ, ಶ್ರೀ ಸುಭಾಷ್ ಮಲ್ಲಗನ್ ಮೊದಲಾದವರಿದ್ದಾರೆ (19 ಜನವರಿ 2026)




ಜಾತ್ರಾ ಮಹೋತ್ಸವದ ಅಂಗವಾಗಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಏರ್ಪಡಿಸಿದ್ದ ಸಾಂಸ್ಕೃತಿಕ ಮೇಳ ಮತ್ತು ವಸ್ತುಪ್ರದರ್ಶನ ಸಮಾರೋಪದಲ್ಲಿ ವಿಜೇತ ತಂಡಗಳಿಗೆ ಬಹುಮಾನ ವಿತರಿಸಲಾಯಿತು. ಶ್ರೀ ಸಂಜಯ್ ಪಾಟೀಲ್, ಶ್ರೀ ತೋಂಟದಾರ್ಯ, ಪ್ರೊ. ಜಿ. ಹೇಮಂತಕುಮಾರ್, ಶ್ರೀ ಟಿ.ಎಸ್. ಶ್ರೀವತ್ಸ, ಶ್ರೀ ಎ.ಆರ್. ಕೃಷ್ಣಮೂರ್ತಿ, ಶ್ರೀ ಎಸ್.ಟಿ. ಸೋಮಶೇಖರ್, ಪಾಂಡೋಮಟ್ಟಿ , ಹೆಬ್ಬಾಳು ಮತ್ತು ಸಾಲೂರು ಮಠದ ಶ್ರೀಗಳು, ಶ್ರೀ ಜಿ. ಮರಿಸ್ವಾಮಿ, ಶ್ರೀ ಹೆಚ್.ವಿ. ರಾಜೀವ್ ಹಾಗೂ ಶ್ರೀ ಟಿ.ಡಿ. ಸುಬ್ರಹ್ಮಣ್ಯರವರಿದ್ದಾರೆ (20 ಜನವರಿ 2026)



ಸುತ್ತೂರು ಶ್ರೀಕ್ಷೇತ್ರದ ಕಪಿಲಾ ನದಿಯಲ್ಲಿ ವಿಜೃಂಭಣೆಯಿಂದ ಜರುಗಿದ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ತೆಪ್ಪೋತ್ಸವಕ್ಕೆ ಪರಮಪೂಜ್ಯ ಜಗದ್ಗುರುಗಳವರು ಮತ್ತು ಆದಿಚುಂಚನಗಿರಿ ಜಗದ್ಗುರುಗಳ ದಿವ್ಯ ಸಾನ್ನಿಧ್ಯದಲ್ಲಿ ಚಾಲನೆ ನೀಡಲಾಯಿತು. (19 ಜನವರಿ 2026)



ಜಾತ್ರಾ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ಕುಸ್ತಿ ಪಂದ್ಯಾವಳಿಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀಮತಿ ಪರಿಮಳ ನಾಗಪ್ಪ, ಡಾ. ದತ್ತೇಶ್‌ಕುಮಾರ್, ಶ್ರೀ ಮಂಜುನಾಥ್, ಶ್ರೀ ಎಂ. ಮುತ್ತುರಾಜ್, ಶ್ರೀ ರಿಜ್ವಾನ್ ಅರ್ಷದ್, ಶ್ರೀ ತನ್ವೀರ್ ಸೇಠ್, ಶ್ರೀ ದೊಡ್ಡಸ್ವಾಮೇಗೌಡ ಹಾಗೂ ಕುಸ್ತಿ ಸಮಿತಿ ಸದಸ್ಯರುಗಳು, ಮೊದಲಾದವರಿದ್ದಾರೆ (19 ಜನವರಿ 2026)



ಅರಸೀಕೆರೆ ತಾಲ್ಲೂಕು ಸಂಕೀಹಳ್ಳಿಯ ಶ್ರೀ ಆಂಜನೇಯಸ್ವಾಮಿ ಮತ್ತು ಶಿವಪಾರ್ವತಿದೇವಿಯವರ ನೂತನ ದೇವಾಲಯದ ಉದ್ಘಾಟನಾ ಕಾರ್ಯಕ್ರಮದ ಅಂಗವಾಗಿ ಏರ್ಪಡಿಸಿದ್ದ ಧಾರ್ಮಿಕ ಸಭೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಮಾರಗೌಡನಹಳ್ಳಿ, ಯಳನಾಡು ಮತ್ತು ತಮ್ಮಡಿಹಳ್ಳಿ ಶ್ರೀಗಳಿದ್ದಾರೆ (23 ಜನವರಿ 2026)



ಜಾತ್ರಾ ಮಹೋತ್ಸವದಲ್ಲಿ ರಾಗಿ ಬೀಸುವ ಸ್ಪರ್ಧೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಬಸವರಾಜ ಎಸ್. ಬೊಮ್ಮಾಯಿಯವರು ಹಾಗೂ ಕು. ಶೋಭಾ ಕರಂದ್ಲಾಜೆಯವರು ಉದ್ಘಾಟಿಸಿದರು. ಶ್ರೀ ಪಿ. ಮರಿಸ್ವಾಮಿ, ಶ್ರೀ ಸೋದೆ ಮಠದ ಶ್ರೀಪಾದಂಗಳು, ಶ್ರೀ ತೇಜಸ್ವಿ ಸೂರ್ಯ ಮೊದಲಾದವರಿದ್ದಾರೆ (16 ಜನವರಿ 2026)



ಜಾತ್ರಾ ಮಹೋತ್ಸವದಲ್ಲಿ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ರಥೋತ್ಸವಕ್ಕೆ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಚಾಲನೆ ನೀಡಲಾಯಿತು. ಶ್ರೀ ಎಸ್.ಪಿ. ಮಂಜುನಾಥ್, ಶ್ರೀ ಜಯರಾಜೇಂದ್ರರು, ಶ್ರೀ ರಾಜಣ್ಣ ಕೊರವಿ, ಡಾ. ಸಿ.ಜಿ. ಬೆಟಸೂರಮಠ, ಶ್ರೀ ನಿತೇಶ್ ಪಾಟೀಲ್, ಡಾ. ಸಿ. ಸೋಮಶೇಖರ್, ಸಿದ್ಧಗಂಗಾ ಮಠದ ಕಿರಿಯ ಶ್ರೀಗಳು ಮೊದಲಾದವರಿದ್ದಾರೆ (17 ಜನವರಿ 2026)




ಜಾತ್ರಾ ಮಹೋತ್ಸವದ ಅಂಗವಾಗಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಕೃಷಿ ವಿಚಾರಸಂಕಿರಣ ಸಮಾರೋಪದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರು ಹಾಗೂ ಶಾಸಕರಾದ ಶ್ರೀ ಬಿ.ವೈ. ವಿಜಯೇಂದ್ರರವರು ಮಾತನಾಡುತ್ತಿರುವುದು. ಶ್ರೀ ಎಸ್. ಗುರುಸ್ವಾಮಿ, ಪ್ರೊ. ಎಂ. ಗಂಗಾಧರ್, ಶ್ರೀ ಸ್ವಾಮಿ ಪ್ರಭಾಕರಾನಂದ ಸರಸ್ವತಿ ಮಹಾರಾಜ್, ಶ್ರೀ ಅರ್ಜುನ್ ಅವಧೂತ ಗುರೂಜಿ, ಶ್ರೀ ಎಂ. ರುದ್ರೇಶ್, ಶ್ರೀ ಎಲ್. ನಾಗೇಂದ್ರ ಮೊದಲಾದವರಿದ್ದಾರೆ (18 ಜನವರಿ 2026)




ಜಾತ್ರಾ ಮಹೋತ್ಸವದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಚಿತ್ರಕಲೆ, ಗಾಳಿಪಟ ಸ್ಪರ್ಧೆ ಮತ್ತು ಐವತ್ತೈದನೆಯ ದನಗಳ ಜಾತ್ರೆ ಉದ್ಘಾಟನೆ ಕಾರ್ಯಕ್ರಮದಲ್ಲಿ ಚಲನಚಿತ್ರ ಕಲಾವಿದರಾದ ಶ್ರೀ ಢಾಲಿ ಧನಂಜಯರವರು ಮಾತನಾಡುತ್ತಿರುವುದು. ಶ್ರೀ ನರೇಂದ್ರ, ಶ್ರೀಮತಿ ಬಿ.ವಿ. ಗೀತಾ, ಶ್ರೀ ಶಿವಶಂಕರಪ್ಪ ಸಾಹುಕಾರ್, ಶ್ರೀ ರುದ್ರಪ್ಪ ಮಾನಪ್ಪ ಲಮಾಣಿ, ಶ್ರೀ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮಿಗಳು, ಕನಪುರ ಹಿರಿಯ ಶ್ರೀಗಳು ದೇವನೂರು ಹಾಗೂ ರಬಕವಿ ಶ್ರೀಗಳು, ಶ್ರೀ ನೀನಾಸಂ ಸತೀಶ್, ಶ್ರೀ ಎನ್.ಎಸ್ ನಾಗಭೂಷಣ್ ಹಾಗೂ ಶ್ರೀ ವಾಸುಕಿ ವೈಭವ್ ಮೊದಲಾದವರಿದ್ದಾರೆ (17 ಜನವರಿ 2026)



ಜಾತ್ರಾ ಮಹೋತ್ಸವದಲ್ಲಿ ಐವತ್ತೈದನೆಯ ದನಗಳ ಜಾತ್ರೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಪಿ.ಎಂ. ನರೇಂದ್ರಸ್ವಾಮಿ, ಶ್ರೀ ಸಿ.ಕೆ. ರಾಮಮೂರ್ತಿ, ದೇವನೂರು ಹಾಗೂ ರಬಕವಿ ಶ್ರೀಗಳು ಮೊದಲಾದವರಿದ್ದಾರೆ (17 ಜನವರಿ 2026)




ಜಾತ್ರಾ ಮಹೋತ್ಸವದಲ್ಲಿ ಡ್ರಮ್ಸ್ ವಾದನವನ್ನು ನೀಡಿದ ಖ್ಯಾತ ಕಲಾವಿದ ಕಲೈಮಾಮಣಿ ಶಿವಮಣಿಯವರನ್ನು ಪರಮಪೂಜ್ಯ ಜಗದ್ಗುರುಗಳವರು ಸನ್ಮಾನಿಸಿ ಆಶೀರ್ವದಿಸುತ್ತಿರುವುದು (16 ಜನವರಿ 2026)



ಜಾತ್ರಾ ಮಹೋತ್ಸವದಲ್ಲಿ ಡ್ರಮ್ಸ್ ವಾದಕರಾದ ಕಲೈಮಾಮಣಿ ಶಿವಮಣಿಯವರೊಂದಿಗೆ ಡ್ರಮ್ಸ್ ವಾದನ ಕಾರ್ಯಕ್ರಮದಲ್ಲಿ ಪರಮಪೂಜ್ಯ ಜಗದ್ಗುರುಗಳವರು ನುಡಿಸುತ್ತಿರುವುದು (16 ಜನವರಿ 2026)



ಜಾತ್ರಾ ಮಹೋತ್ಸವದಲ್ಲಿ ಜೆಎಸ್ಎಸ್ ಸಂಚಾರಿ ಗ್ರಂಥಮಾಲೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಪಿ.ಎಂ. ನರೇಂದ್ರಸ್ವಾಮಿಯವರು ಉದ್ಘಾಟಿಸಿ ವೀಕ್ಷಿಸುತ್ತಿರುವುದು. ಶ್ರೀ ಸಿ.ಕೆ. ರಾಮಮೂರ್ತಿಯವರಿದ್ದಾರೆ (17 ಜನವರಿ 2026)




ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಜರುಗಿದ 287ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ವಿದ್ವಾನ್ ಶಶಾಂಕ್ ಸುಬ್ರಹ್ಮಣ್ಯಂರವರು ವೇಣುವಾದನ ಪ್ರಸ್ತುತಿ ಪಡಿಸಿದರು. ವಯೊಲಿನ್ನಲ್ಲಿ ವಿದ್ವಾನ್ ನಿಶಾಂತ್ ಚಂದ್ರನ್, ಘಟಂನಲ್ಲಿ ವಿದ್ವಾನ್ ಜಿ.ಎಸ್. ರಾಮಾನುಜಂ ಹಾಗೂ ಮೃದಂಗದಲ್ಲಿ ವಿದ್ವಾನ್ ಅರ್ಜುನ್ ಕುಮಾರ್‌ರವರುಗಳು ಸಾಥ್ ನೀಡಿದರು. (3.1.2026)



ಸುತ್ತೂರು ಶ್ರೀಕ್ಷೇತ್ರದ ಕಪಿಲಾ ನದಿಯಲ್ಲಿ ವಿಜೃಂಭಣೆಯಿಂದ ಜರುಗಿದ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ತೆಪ್ಪೋತ್ಸವ (19 ಜನವರಿ 2026)

Registered with the Registrar of Newspapers in India Under No. 50622 / 1986
'Prasada' Monthly, Vol. 41 Issue No. 1, January 2026




ISSN 2583-7648
9 772583 764006

ಬಿಡಿ ಪ್ರತಿ : ರೂ.10/–